# ಗಾದೆಗಳು

## (ಆಯ್ದ ಜನಪ್ರಿಯ ರಚನೆಗಳು)

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು

# ಗಾದೆಗಳು

(ಆಯ್ದ ಜನಪ್ರಿಯ ರಚನೆಗಳು)

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಕನ್ನಡ ಭವನ, ಬೆಂಗಳೂರು - ೫೬೦ ೦೦೨

**ಗಾದೆಗಳು** (ಆಯ್ದ ಜನಪ್ರಿಯ ಗಾದೆಗಳ ಸಂಕಲನ)
ಪ್ರಕಾಶನ : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಭವನ
ಜೆ. ಸಿ. ರಸ್ತೆ, ಬೆಂಗಳೂರು - ೫೬೦ ೦೦೨ ; ದೂರವಾಣಿ : ೦೮೦-೨೨೧೫೫೧೯
ಪುಟಗಳು : ೯೦ ; ಬೆಲೆ : ರೂ.೨೦-೦೦

ಮೊದಲನೆ ಮುದ್ರಣ : ೧೯೮೩
ಎರಡನೆಯ ಮುದ್ರಣ : ೧೯೯೯

**"GAADEGALU"**—A Collection of popular proverbs published by The Karnataka Jaanapada and Yakshagaana Academy, Kannada Bhavana, J. C. Road, Bangalore-560 002; Pages : 90 ; Second Impression : 1999 ; Price : Rs. 20-00

*ಪ್ರಕಾಶಕರು*
**ಕೆ. ಸುಧೀಂದ್ರ, ರಿಜಿಸ್ಟ್ರಾರ್**
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಕನ್ನಡ ಭವನ, ಬೆಂಗಳೂರು – ೫೬೦ ೦೦೨

ಮುದ್ರಣ
**ಶಕ್ತಿ ಪ್ರಿಂಟರ್ಸ್**
ವೈಯಾಲಿಕಾವಲ್, ಬೆಂಗಳೂರು–೫೬೦ ೦೦೩
✆ ೩೩೧೩೪೦೦, ೩೩೧೨೮೦೦

# ಗೌರಿ ಹಬ್ಬದ ಉಡುಗೊರೆ

ಮಾನವನ ಆಲೋಚನಾ ತರಂಗಗಳಷ್ಟೇ ಹಳೆಯವಾಗಿರುವ ಗಾದೆಗಳು ಜನಸಾಮಾನ್ಯರ ಬದುಕಿನ ಹರ್ಷೋಲ್ಲಾಸ ಮತ್ತು ದುಃಖ-ದುಮ್ಮಾನದ ಹಲಬಗೆಯ ಕ್ಷಣಗಳನ್ನು ಅತ್ಯಂತ ಆತ್ಮೀಯವಾದ ಧಾಟಿಯಲ್ಲಿ ಸೆರೆಹಿಡಿದಿಟ್ಟಿರುವುದನ್ನು ವಿಶೇಷವಾಗಿ ಗಮನಿಸಬಹುದು. ಅನುಭವದ ಸಾಮಗ್ರಿ ಹಾಗೂ ಸಂವೇದನೆಯ ತೀವ್ರತೆ ಇರುವುದೇ ಹೌದಾದಲ್ಲಿ ಎಂಥ ವಿಶಿಷ್ಟ ರಚನೆಗಳು ಬಗೆಬಗೆಯಾಗಿ ರೂಪುಗೊಳ್ಳಬಲ್ಲವೆಂಬುದಕ್ಕೆ ಸಾಕಷ್ಟು ಉತ್ತಮ ಉದಾಹರಣೆಗಳು ನಮ್ಮ ಗಾದೆಗಳ ಲೋಕದಲ್ಲಿ ದೊರೆಯುತ್ತವೆ.

ಜನತೆಯ ಅನುಭವದ ಸಂಪತ್ತು ನೆನಪಿಡಲು ಸುಲಭವಾಗುವಂತೆ ಪ್ರಾಸಬದ್ಧವಾದ ಚಿಕ್ಕ ವಾಕ್ಯಗಳಾಗಿ ಗಾದೆಗಳ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಗಾದೆ ಎನ್ನುವ ಪದ ಸಂಸ್ಕೃತದ ಗಾಥಾ ಅಥವಾ ಪ್ರಾಕೃತದ ಗಾದೆಯ ಮೂಲಕ ಬಂದಿರುವಂತಿದೆ. ನಾಲ್ಕು ಕಾಲ ಬಾಳುವ ಯೋಗ್ಯತೆ ಗಳಿಸಿರುವ ಗಾದೆಯು ಜನಪ್ರಿಯತೆಯನ್ನು ಪಡೆದಿರುತ್ತದೆ. ಸಮುದಾಯದ ಮನಸ್ಸು ಇಲ್ಲಿ ಅಡಕವಾಗಿರುತ್ತದೆ. ಆಡುನುಡಿಯ ತೀವ್ರತೆ ಇಲ್ಲಿನಷ್ಟು ಪ್ರಖರವಾಗಿ ಬೇರೆಯ ಕಡೆ ಕಂಡಿರುವ ಸನ್ನಿವೇಶಗಳು ತುಂಬಾ ಕಡಿಮೆ : ಅಡಕವಾಗಿರುವಿಕೆ, ವಿವೇಕ, ಮೊನಚು, ಸಾಚಾತನ, ಹೇಳುವ ರೀತಿಯಲ್ಲಿ ವೈವಿಧ್ಯ—ಇವೆಲ್ಲಾ ಗಾದೆಯ ಮುಖ್ಯ ಗುಣಗಳು. ಪ್ರಾಸ, ಅನುಪ್ರಾಸ, ಉಪಮೆ, ರೂಪಕ, ಶೈಲಿ, ತಂತ್ರ, ಛಂದಸ್ಸು, ನಾಟಕೀಯತೆ, ಮಾತುಗಾರಿಕೆ, ವಿರೋಧಾಭಾಸ ಮುಂತಾದ ಎಲ್ಲಕ್ಕೂ ಉತ್ತಮ ಉದಾಹರಣೆಗಳು ಈ ಗಾದೆಗಳಲ್ಲಿ ದೊರೆಯುತ್ತವೆ.

ಪುರಾಣ, ಚರಿತ್ರೆ, ಸ್ಥಳಗತೆ, ಅನುದಿನದ ಘಟನೆಗಳು, ಕಷ್ಟಕೋಟಲೆಗಳು ಮತ್ತು ಆನಂದದ ವಿಶಾಲ ಹಿನ್ನೆಲೆ ಹೊಂದಿರುವ ಗಾದೆಗಳು ನಾಡಿನ ಜನತೆಯ ಮನಸ್ಸನ್ನು ಅರ್ಥಮಾಡಿಕೊಳ್ಳಲು ವಿಶೇಷವಾಗಿ ನೆರವಾಗುತ್ತವೆ. ಬದುಕನ್ನು ತಿದ್ದುವಲ್ಲಿ, ರಹಸ್ಯಗಳ ಬೆನ್ನಾಡಿ ಹೋಗುವಲ್ಲಿ ಇವು ಯಾವಾಗಲೂ ಮುಂದಾಗಿರುತ್ತವೆ. ಬಾಯಿಂದ ಬಾಯಿಗೆ ಬರುತ್ತಿರುವ ಗಾದೆಗಳು ಮಾನವನ ಅನುಭವದ ಅತ್ಯುತ್ತಮ ದಾಖಲೆಯಾಗಿವೆ. ಸಾಮಾನ್ಯವಾಗಿ ಶಿಷ್ಟಜನ ಪರಿಗಣಿಸದೆ ಬಿಟ್ಟ ಅನೇಕ ಸೂಕ್ಷ್ಮಗಳು ಇಲ್ಲಿ ಪರಿಣಾಮಕಾರಿಯಾಗಿ ಕಂಡು ಬರುತ್ತವೆ. ಒಬ್ಬನೇ ವ್ಯಕ್ತಿ ಆರಂಭದಲ್ಲಿ ಅನುಭವ-ವಿಶೇಷವೊಂದಕ್ಕೆ ಬೇರೊಬ್ಬನ ಮನಸ್ಸನ್ನು ತಟ್ಟುವಂತೆ ಕೊಟ್ಟ ಮಾತಿನ ರೂಪವೇ ಗಾದೆ. ಇದು ಅನೇಕರಿಗೆ ಹಿಡಿಸಿ ಚಲಾವಣೆಯನ್ನು ಪಡೆಯಿತು.

ವೇದ, ಉಪನಿಷತ್ತು, ಬೈಬಲ್ಲುಗಳಲ್ಲೂ ಗಾದೆಗಳು ಕಾಣಿಸಿಕೊಂಡಿವೆ. ಇವೆಲ್ಲಾ

ಮೂಲದಲ್ಲಿ ಜನತೆಯಿಂದಲೇ ಪಡೆದವು. ಅನೇಕ ಶಿಷ್ಟ ಕವಿಗಳು ಕೂಡ ತಮ್ಮ ಅಭಿವ್ಯಕ್ತಿಗೆ ಸಾಮರ್ಥ್ಯವನ್ನು ತುಂಬಲು ಗಾದೆ ಮತ್ತು ಜನತಾನುಡಿಗಟ್ಟುಗಳನ್ನು ಬಳಸಿಕೊಂಡಿರುವುದು ಉಂಟು. ಗಾದೆಗಳು ಒಟ್ಟು ಸಮಾಜದ ಆಸ್ತಿ. ಯಾವ ಧರ್ಮ, ಮತವೂ ತನ್ನ ಹಿಡಿತಕ್ಕೆ ಇವುಗಳನ್ನು ಪೂರ್ಣವಾಗಿ ತೆಗೆದುಕೊಳ್ಳಲಾಗಲಿಲ್ಲ. ಗಾದೆಯು ಕೀಟಲೆ ಮಾಡದೆ, ಟೀಕಿಸದೆ ಬಿಟ್ಟ ಯಾವ ಸಂಗತಿಯೂ ಕಾಣುವುದಿಲ್ಲ. ಮನುಷ್ಯನ ಮೂಲಗುಣ ಒಂದೇ ಆಗಿರುವುದರಿಂದ ದೇಶಕಾಲಗಳ ಕಟ್ಟುಪಾಡುಗಳಿಲ್ಲದೆ ಒಂದೇ ಬಗೆಯ ಅನುಭವದ ಮಾತುಗಳು ಜಗತ್ತಿನ ನಾನಾ ಭಾಷೆಗಳ ಗಾದೆಗಳಲ್ಲಿ ಕಂಡುಬರುತ್ತವೆ.

ಒಂದು ದೇಶದ ನಿಜವಾದ ಬಣ್ಣ, ಬದುಕು ಅಲ್ಲಿನ ಗಾದೆಗಳ ಮೂಲಕ ಬಯಲಾಗುತ್ತದೆ. ಜನತೆಯ ಕಳೆದ ದಿನಗಳ, ರೋಷ, ಕೆಚ್ಚು, ಮೌಢ್ಯ, ಮಾನಸಿಕ ವಿಕಾರ, ನಗೆ, ನೋವು, ನ್ಯಾಯ, ಅನ್ಯಾಯ—ಮೊದಲಾದ ಎಲ್ಲಾ ಸಂಗತಿಗಳ ಮಡು ಈ ಗಾದೆಗಳು. ಇವನ್ನೆಲ್ಲಾ ವಿಂಗಡಿಸಿ ನಿತ್ಯದ ಬದುಕಿಗೆ ಹೇಗೆ ಬಳಸಿಕೊಳ್ಳಬೇಕು ಎನ್ನುವುದು ಮುಖ್ಯ ಸಂಗತಿಯಾಗಬೇಕು. ಹೀಗಾಗಿ ಸಮಾಜ, ಸಾಹಿತ್ಯ, ಚರಿತ್ರೆ, ಭಾಷೆ, ಮನಸ್ಸು, ಮಾನವ ಬದುಕಿನ ವೈಶಿಷ್ಟ್ಯಗಳು ಮುಂತಾದ ಬಗೆಬಗೆಯ ವಿಷಯಗಳ ಬಗ್ಗೆ ಅಧ್ಯಯನ ನಡೆಸುವವರಿಗೆ ಗಾದೆಗಳು ಸವಾಲಾಗಿವೆ ಮತ್ತು ಹೆಚ್ಚಿನ ಗುಟ್ಟುಗಳನ್ನು ತಿಳಿಸುತ್ತವೆ.

ಈ ನಮ್ಮ ಗಾದೆಗಳಿಗೆ ಯಾರ, ಯಾವ ಬಗೆಯ ಹಂಗೂ ಯಾವತ್ತೂ ಇಲ್ಲ. ಏನು ಹೇಳಬೇಕೋ ಅದನ್ನು ಹೇಳಿ ಅವು ಮುಗಿಸುತ್ತವೆ. ಸ್ವಂತವಾಗಿ ಅನುಭವಿಸಿ, ಗೊಂದಲಗಳೊಡನೆ ಬೇಸತ್ತ ಜನತೆಯು ಕೊನೆಗೆ ಕಂಡುಕೊಂಡ ನಿಜದ ಕಿಡಿಗಳು ಇವು :

ಬಿದ್ದ ಕಲ್ಲು ಅಗಸನದು : ಎದ್ದ ಕಲ್ಲು ಪೂಜಾರಿಯುದು.

* * * * *

ಮಣ್ಣುಬಿಟ್ಟು ಮಡಕೆಯಿಲ್ಲ : ತನ್ನ ಬಿಟ್ಟು ದೇವರಿಲ್ಲ.

* * * * *

ಬೀದಿ ಮಕ್ಕಳು ಬೆಳದೊ : ಕ್ವಾಣೆ ಮಕ್ಕಳು ಕೊಳತೊ

* * * * *

ಬತ್ಲೆ ಇರೋ ಊರಲ್ಲಿ ಬಟ್ಟೆ ತೊಟ್ಟೋರು ಹುಚ್ಚರು.

* * * * *

ದೇವರ ಇರುವಿಕೆಯ ಬಗ್ಗೆ ಜನತೆಯ ಕೊನೆಯ ತೀರ್ಮಾನ ಈ ಮೇಲಿನ ರೀತಿಯಾಗಿದೆ. ಇದು ತೀರಾ ಮುಕ್ತಮನಸ್ಸಿನ ಸ್ಥಿತಿಯಾಗಿದೆ. ಬೀದಿ ಮಕ್ಕಳು ಬೆಳದೊ ಅನ್ನುವ ಮಾತಿನಲ್ಲಿ ಯಾವುದೇ ಆರೋಗ್ಯಕರವಾದ ಬೆಳವಣಿಗೆಗೆ ಗಾಳಿ, ಬೆಳಕು,



ಲವಲವಿಕೆ ಇರಬೇಕಾದುದರ ಅಗತ್ಯವನ್ನು ತುಂಬಾ ಪರಿಣಾಮಕಾರಿಯಾಗಿ ಹೇಳಿರುವುದು ಕಂಡುಬರುತ್ತದೆ. ಡಾಂಭಿಕತೆ, ಕಪಟಗಳನ್ನು ಕಂಡಾಗ ಮುಖದ ಮೇಲೆ ಹೊಡೆದಂತೆ ಹೇಳುವುದು ಗಾದೆಯ ಹುಟ್ಟುಗುಣವಾಗಿದೆ.

ಹೀಗೆ ನಮ್ಮ ವಿಶಾಲ ಬದುಕಿನ ಸಂಕೀರ್ಣ ಸ್ಥಿತಿಯೆಲ್ಲ ಈ ಗಾದೆಗಳಲ್ಲಿ ಆಶ್ಚರ್ಯಕರವಾಗಿ ದಾಖಲಾಗಿದೆ. ನಾಡಿನ ಜನತೆಯು ಇವುಗಳ ಸದುಪಯೋಗ ಪಡೆಯಲು ಅನುಕೂಲವಾಗುವಂತೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ೧೯೮೩ ರಲ್ಲಿ ವಿವಿಧ ಆಕರ ಗ್ರಂಥಗಳಿಂದ ಆಯ್ದು ಸಿದ್ಧಪಡಿಸಲಾದ **ಗಾದೆಗಳು** ಕೃತಿಯನ್ನು—ಪ್ರತಿಯೊಂದಕ್ಕೆ ಒಂದು ರೂಪಾಯಿ ದರದಲ್ಲಿ—ಪ್ರಕಟಿಸಿತು. ಈ ಕೃತಿಯ ಎಲ್ಲ ಪ್ರತಿಗಳೂ ಬಹಳ ಬೇಗ ಮಾರಾಟವಾದುವು. ೧೯೯೯ ರಿಂದ ಮೂರು ವರ್ಷಗಳ ಕಾಲ ಕರ್ನಾಟಕ ವಿಶ್ವವಿದ್ಯಾನಿಲಯವು ತನ್ನ ವ್ಯಾಪ್ತಿಯಲ್ಲಿ ಬರುವ ಮೊದಲನೆಯ ವರ್ಷದ ಬಿ. ಎ. ತರಗತಿಯ ಐಚ್ಛಿಕ ಜಾನಪದ ವಿದ್ಯಾರ್ಥಿಗಳಿಗೆ ಪಠ್ಯವಾಗಿ ನೇಮಕ ಮಾಡಿರುವುದು ಸಂತೋಷದ ಸಂಗತಿಯಾಗಿದೆ. ಇದೀಗ **ಗಾದೆಗಳು** ಸಂಕಲನ ಮರುಮುದ್ರಣಗೊಂಡು ಈ ಸಲದ ಗೌರಿ ಹಬ್ಬದ ಉಡುಗೊರೆಯಾಗಿ ಓದುಗರ ಕೈಸೇರುತ್ತಿರುವ ಸಂದರ್ಭದಲ್ಲಿ ಪ್ರೀತಿಯ ಶುಭಾಶಯಗಳನ್ನು ಸಲ್ಲಿಸುತ್ತೇನೆ.

**ಪ್ರೊ. ಕಾಳೇಗೌಡ ನಾಗವಾರ**
ಅಧ್ಯಕ್ಷರು
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

ಕನ್ನಡಭವನ, ಜೆ. ಸಿ. ರಸ್ತೆ
ಬೆಂಗಳೂರು -೫೬೦೦೦೨
ದೂರವಾಣಿ : ೦೮೦-೨೨೧೫೫೮೯
ಭಾನುವಾರ : ೧೨-೦೯-೧೯೯೯ : ಗೌರಿ ಹಬ್ಬ

# ಮೊದಲ ಮುದ್ರಣಕ್ಕೆ ಮುನ್ನುಡಿ

ಗ್ರಾಮೀಣ ಪ್ರದೇಶದ ನಮ್ಮ ಸಾಮಾನ್ಯ ಜನತೆ ಅಕ್ಷರ ಬಲ್ಲವರಲ್ಲ. ವೇದ ಶ್ಲೋಕ, ಮಂತ್ರಗಳನ್ನು ಕಲಿತ ಪಂಡಿತರಲ್ಲ. ಆದರೆ ವೇದಕ್ಕೂ ಮಿಗಿಲಾದ ಗಾದೆಗಳನ್ನು ಕಟ್ಟಿದರು. ನಿತ್ಯದ ಬದುಕಿನಲ್ಲಿ, ತಾವು ಬದುಕುತ್ತಿರುವ ಸಮಾಜದಲ್ಲಿ ಹೇಗೆ ಬಾಳಿ ಬದುಕಬೇಕು ಅನ್ನುವುದನ್ನು ಗಾದೆಗಳ ರೂಪದಲ್ಲಿ ಒಬ್ಬರಿಗೊಬ್ಬರು ಹೇಳಿಕೊಂಡು ಜೀವನಕ್ಕೆ ಒಂದು ಮಾರ್ಗವನ್ನು ಹಾಕಿಕೊಂಡರು. ಅವರ ಅನುಭವದ ಸರ್ವಸ್ವವೇ ಜನಪದ ಸಾಹಿತ್ಯ ; ಈ ಜನಪದ ಸಾಹಿತ್ಯದ ಒಂದು ಪ್ರಮುಖ ಪ್ರಕಾರವೇ ಗಾದೆಗಳು.

ಮನುಷ್ಯ ಎಂದು ಆಲೋಚಿಸಲು ತೊಡಗಿದನೋ ಅಂದೇ ಗಾದೆಗಳೂ ಹುಟ್ಟಿಕೊಂಡವು ಅನ್ನಬಹುದು. ಅನುಭವ ಮತ್ತು ಆಲೋಚನೆಯ ಸಂದರ್ಭಗಳಲ್ಲಿ ತಟ್ಟನೆ ಬಾಯಿಂದ ಹೊರಬಿದ್ದು ಅಭಿವ್ಯಕ್ತಿ ಪಡೆದುಕೊಂಡ ಹಿತೋಕ್ತಿಗಳೇ ಗಾದೆಗಳು. ಹೀಗಾಗಿ ಗಾದೆಗಳು ಉದ್ದೇಶಪೂರ್ವಕವಾಗಿ ಯಾರೊಬ್ಬರೂ ಕಟ್ಟಿದವುಗಳಲ್ಲ. ಹಲವರ ಅನುಭವ ಒಬ್ಬನ ಮಾತಿನಲ್ಲಿ ವ್ಯಕ್ತವಾಗಿ ಬಾಯಿಂದ ಬಾಯಿಗೆ ಹರಡಿ ಒಂದು ರೂಪ ಪಡೆದುಕೊಂಡ ನುಡಿಗಟ್ಟುಗಳು ಗಾದೆಗಳಾಗಿ ಜನರ ಮನದಲ್ಲಿ ಅಚ್ಚಳಿಯದೆ ಉಳಿದವು.

ಗಾದೆಗಳಿರುವ ಮುಖ್ಯ ಲಕ್ಷಣವೆಂದರೆ ಸಂಕ್ಷಿಪ್ತತೆ, ವಿವೇಕಪೂರ್ಣತೆ, ಅರ್ಥವೈವಿಧ್ಯತೆ ಹಾಗೂ ವಾಕ್ಯದಲ್ಲಿ ಕಂಡುಬರುವ ಸಮತೂಕ. ಅತ್ಯಂತ ಸರಳ ವಾಕ್ಯಗಳಲ್ಲಿ ವ್ಯಕ್ತವಾಗಿರುವ ಈ ಗಾದೆಗಳ ಅರ್ಥವನ್ನು ಬಿಡಿಸ ಹೊರಟರೆ ಹತ್ತಾರು ವಿಚಾರಗಳು ಒಮ್ಮಲೇ ಹೊಳೆಯುತ್ತವೆ. 'ಕಿರಿದಾದ ಪದಗಳಲ್ಲಿ ಹಿರಿದಾದ ಅರ್ಥ'ವನ್ನು ಹೊರಡಿಸುವ ಈ ಗಾದೆಗಳು ಸಮಾಜದ ವಿವಿಧ ವರ್ಗಗಳ ಜನರ ಮುಖಕ್ಕೆ ಹಿಡಿದ ಕನ್ನಡಿ. ಪ್ರಾಸ ವಿನ್ಯಾಸದಿಂದಾಗಿ ಮತ್ತು ವಾಕ್ಯದಲ್ಲಿ ಕಂಡುಬರುವ 'ಬಿಗಿ'ಯಿಂದಾಗಿ ಗಾದೆಗಳು ಪ್ರತಿಯೊಬ್ಬನಿಗೂ ಮನಮೋಹಕವಾಗುತ್ತವೆ, ನೆನಪಿನಲ್ಲಿ ಉಳಿಯುತ್ತವೆ. ಇಷ್ಟಲ್ಲದೆ ಹಾಸ್ಯದಿಂದ ಲೇವಡಿ ಮಾಡುವ ಗಾದೆಗಳು, ವ್ಯಂಗ್ಯದಿಂದ ಚುಚ್ಚುವ ಗಾದೆಗಳು, ಗಂಭೀರವಾಗಿ ಉಪದೇಶಿಸುವ ಗಾದೆಗಳು-ಹೀಗೂ ಗಾದೆಗಳ ಲಕ್ಷಣವನ್ನು ನಾವು ನೋಡಬಹುದು. ಈ ಗಾದೆಗಳ ಪ್ರಮುಖ ಗುಣವೆಂದರೆ ಉಪಮೆ ಮತ್ತು ರೂಪಕಗಳ ಮೂಲಕ ವ್ಯಕ್ತವಾಗುವ ರೀತಿ. 'ಅಂಗೆ', 'ಅಂದಂಗೆ'-ಅನ್ನುವ ಅಂತ್ಯಾಕ್ಷರಗಳಿಂದ ಮುಗಿಯುವ ಅನೇಕ ಗಾದೆಗಳನ್ನು ನೋಡಿದಾಗ ಈ ಅಂಶ ಸ್ಪಷ್ಟವಾಗುತ್ತದೆ.

*



ಇಲ್ಲಿ ಸಂಗ್ರಹಿಸಿರುವ ಗಾದೆಗಳಲ್ಲಿ ಪ್ರಧಾನವಾಗಿ ಬಡತನ, ಹೆಣ್ಣಿನ ಜೀವನ (ತಾಯಿ, ವಿಧವೆ, ವೇಶ್ಯೆ, ಅತ್ತೆ-ಸೊಸೆ ಇತ್ಯಾದಿ), ಮೋಸ, ವಂಚನೆ, ಜಾತಿಪದ್ಧತಿ, ಬೇಸಾಯ, ಪಶುಪಾಲನೆ ಇತ್ಯಾದಿಯಾಗಿ ಬದುಕಿನ ವಿವಿಧ ಮುಖಗಳ ಅನುಭವಗಳು ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತವೆ. ಬಾಯಿಂದ ಬಾಯಿಗೆ ಹರಡುವಾಗ ಅನೇಕ ಗಾದೆಗಳು ವಿಕೃತಗೊಳ್ಳುವುದು ಸಹಜ. ಹೀಗೆ ವಿಕೃತಗೊಂಡು ಅರ್ಥಸ್ಪಷ್ಟತೆ ಇಲ್ಲದ ಗಾದೆಗಳನ್ನು ಆದಷ್ಟೂ ಕೈಡಬಿಡಲಾಗಿದೆ. ಆದರೆ ಇನ್ನು ಕೆಲವು ಗಾದೆಗಳು ಮೇಲ್ನೋಟಕ್ಕೆ ಅರ್ಥರಹಿತವಾಗಿ ಕಂಡರೂ ಆಯಾ ಸಂದರ್ಭಗಳ ಹಿನ್ನೆಲೆಯಲ್ಲಿ ಸೂಕ್ಷ್ಮವಾಗಿ ನೋಡಿದಾಗ ಅರ್ಥಪೂರ್ಣವಾಗುತ್ತವೆ ಎಂಬುದನ್ನು ನೆನಪಿಡಬೇಕು. ಇಂಥ ಗಾದೆಗಳನ್ನು ಇಲ್ಲಿ ಉಳಿಸಿಕೊಳ್ಳಲಾಗಿದೆ. ಅಪೂರ್ಣವೆಂದು ಕಂಡು ಬಂದ ಗಾದೆಗಳನ್ನು ಪೂರ್ಣಮಾಡುವ ಕೆಲಸವೂ ಆಗಿದೆ.

*

ಈ ವರ್ಷ ಅಕಾಡೆಮಿಯ ಜನಪ್ರಿಯ ಗ್ರಂಥ ಪ್ರಸಾರ ಮಾಲೆಯಲ್ಲಿ ಗಾದೆಗಳನ್ನು ಕುರಿತ ಪುಸ್ತಕವನ್ನು ತರಲು ಆಲೋಚಿಸಿ, ಅದಕ್ಕಾಗಿ ಸಂಪಾದಕ ಮಂಡಲಿಯೊಂದನ್ನು ರಚಿಸಲಾಯಿತು. ಶ್ರೀ ಎಚ್. ಎಲ್. ನಾಗೇಗೌಡ (ಅಧ್ಯಕ್ಷರು), ಶ್ರೀ ಗೊ. ರು. ಚನ್ನಬಸಪ್ಪ (ಸದಸ್ಯರು), ಡಾ. ಎಂ. ಎಸ್. ಸುಂಕಾಪುರ (ಸದಸ್ಯರು), ಡಾ. ಕಾಳೇಗೌಡ ನಾಗವಾರ (ಸದಸ್ಯರು). ಈ ಸಂಪಾದಕ ಮಂಡಲಿಯ ಅಪೇಕ್ಷೆಯಂತೆ ಅಕಾಡೆಮಿಯ ಸದಸ್ಯರು ಮತ್ತು ಇತರ ಕೆಲವು ಆಸಕ್ತರಿಗೆ ಅವರು ಸಂಗ್ರಹಿಸಿರುವ ಗಾದೆಗಳನ್ನು ಕಳುಹಿಸಿ ಕೊಡುವಂತೆ ಕೋರಲಾಯಿತು. ಸುಮಾರು ಒಂದು ಸಾವಿರ ಗಾದೆಗಳನ್ನು ಆಯ್ಕೆ ಮಾಡಿ ಕೊಡಬೇಕೆಂದು ಡಾ. ಎಂ. ಎಸ್. ಸುಂಕಾಪುರ ಅವರನ್ನು ಕೇಳಿಕೊಳ್ಳಲಾಯಿತು. ಅವರು ಆ ಕೆಲಸವನ್ನು ಒಪ್ಪವಾಗಿ ಮಾಡಿಕೊಟ್ಟರು. ಹಾಗೆಯೇ ಶ್ರೀ ಸಿಂಪಿ ಲಿಂಗಣ್ಣ, ಡಾ. ಎಲ್. ಆರ್. ಹೆಗಡೆ, ಶ್ರೀ ಕೆ. ವಿರೂಪಾಕ್ಷಗೌಡ, ಶ್ರೀ ವಿ. ಎನ್. ಶಿವರಾಮು ಮುಂತಾಗಿ ಕೆಲವರು ತಾವು ಸಂಗ್ರಹಿಸಿದ ಗಾದೆಗಳನ್ನು ಕಳುಹಿಸಿಕೊಟ್ಟರು. ಇವರೆಲ್ಲರಿಗೂ ನಾವು ಕೃತಜ್ಞರಾಗಿದ್ದೇವೆ.

ಅತ್ಯುತ್ತಮವಾದ ಗಾದೆಗಳನ್ನು ಮಾತ್ರ ಆಯ್ಕೆ ಮಾಡಿ ಉತ್ತಮ ಸಂಗ್ರಹವೊಂದನ್ನು ತರಬೇಕೆಂಬ ಉದ್ದೇಶವಿದ್ದುದರಿಂದ ಈಗಾಗಲೇ ಪ್ರಕಟವಾಗಿರುವ ಕೆಲವು ಪುಸ್ತಕಗಳಿಂದಲೂ ಉತ್ತಮ ಗಾದೆಗಳನ್ನು ಆಯ್ಕೆ ಮಾಡಿಕೊಳ್ಳಬೇಕೆಂದು ತೀರ್ಮಾನಿಸಿ, ಆ ಕೆಲಸವನ್ನು ಡಾ. ಕಾಳೇಗೌಡ ನಾಗವಾರ ಮತ್ತು ಶ್ರೀ ಹಿ. ಚಿ. ಬೋರಲಿಂಗಯ್ಯ ಅವರಿಗೆ ವಹಿಸಲಾಯಿತು. ಅವರು ಸಾಧ್ಯವಾದಷ್ಟು ಗಾದೆಗಳನ್ನು ಆಯ್ಕೆ ಮಾಡಿಕೊಟ್ಟು ಸಹಕರಿಸಿದ್ದಾರೆ. ಸಂಗ್ರಹ ಮಾಡಿಕೊಟ್ಟವರ ಮತ್ತು ಆಯ್ಕೆ

ಮಾಡಿಕೊಂಡ ಗ್ರಂಥಗಳ ವಿವರಗಳನ್ನು ಪುಸ್ತಕದ ಮೊದಲಿಗೇ ಕೊಡಲಾಗಿದೆ. ಅಲ್ಲದೆ ನನ್ನ ಸಂಗ್ರಹದಲ್ಲಿದ್ದ ಮತ್ತು ಗ್ರಂಥಗಳಲ್ಲಿದ್ದ ಅನೇಕ ಗಾದೆಗಳನ್ನೂ ಈ ಆಯ್ಕೆಯಲ್ಲಿ ಸೇರಿಸಲಾಯಿತು ಇಷ್ಟಾಗಿಯೂ ಅನೇಕ ಉತ್ತಮ ಗಾದೆಗಳು ಸಂಗ್ರಹವಾಗದೆ ಉಳಿದುಹೋಗಿವೆ ಅನ್ನುವುದು ನಮ್ಮ ಕೊರಗು.

ಗಾದೆಗಳ ಈ ಪುಸ್ತಕ ನಾಡಿನ ಎಲ್ಲ ಶಾಲಾ ಕಾಲೇಜುಗಳಲ್ಲಿ ಆಸಕ್ತರಲ್ಲಿ ಇರಬೇಕೆಂಬುದು ನಮ್ಮ ಆಶಯ. ಅದರಿಂದಾಗಿಯೇ ಜನಪ್ರಿಯ ಗ್ರಂಥ ಪ್ರಸಾರ ಮಾಲೆಯಲ್ಲಿ ಮೂರನೆಯ ಕುಸುಮವಾಗಿ ಇದನ್ನು ಹೊರತರಲಾಗಿದೆ. ಮುದ್ರಣದ ಖರ್ಚು ವೆಚ್ಚ ಎಷ್ಟಾದರೂ ಪುಸ್ತಕದ ಬೆಲೆ ಒಂದೇ ರೂಪಾಯಿ ಇರುವಂತೆ ನೋಡಿಕೊಳ್ಳಲಾಗಿದೆ.

ಕೇವಲ ಒಂದು ವಾರದಲ್ಲಿ ಸುಂದರವಾಗಿ ಮುದ್ರಿಸಿಕೊಟ್ಟ ಐಬಿಎಚ್ ಪ್ರಕಾಶನ ಮತ್ತು ಮುದ್ರಣ ಸಂಸ್ಥೆಯವರಿಗೆ ನಮ್ಮ ಕೃತಜ್ಞತೆಗಳು ಸಲ್ಲಬೇಕು.

ಆದಷ್ಟು ಗಾದೆಗಳನ್ನು ಸಂಗ್ರಹಿಸಿ ಪುಸ್ತಕ ಹೊರಬರುವವರೆಗೂ ತುಂಬಾ ಶ್ರಮವಹಿಸಿ ಅಚ್ಚುಕಟ್ಟುತನವನ್ನು ಕಾಪಾಡಿಕೊಂಡು ಬಂದವರು ಶ್ರೀ ಹಿ. ಚಿ. ಬೋರಲಿಂಗಯ್ಯ. ಅವರಿಗೂ ಈ ಬಗ್ಗೆ ಸಹಕರಿಸಿದ ಇನ್ನಿತರರಿಗೂ ನನ್ನ ವಂದನೆಗಳು.

ಎಚ್. ಎಲ್. ನಾಗೇಗೌಡ
ಅಧ್ಯಕ್ಷರು
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು

ದಿನಾಂಕ ೨೬-೩-೧೯೮೨
ಬೆಂಗಳೂರು

## ಆಕರ ಗ್ರಂಥಗಳು


| | |
|---|---|
| ಬೀದಿ ಮಕ್ಕಳು ಬೆಳದೊ | ಕಾಳೇಗೌಡ ನಾಗವಾರ |
| ನಮ್ಮ ಸುತ್ತಿನ ಗಾದೆಗಳು | ಸುಧಾಕರ |
| ನಮ್ಮ ಗಾದೆಗಳು ಮತ್ತು ಕಿಟ್ಟೆಲ್ ಕೋಶದ ಗಾದೆಗಳು | ರಾ. ಗೌ. |
| ಗ್ರಾಮೀಣ ಗಾದೆಗಳು | ಕೃಷ್ಣಪ್ಪಗೌಡ |
| ಕನ್ನಡ ಗಾದೆಗಳ ಮಹಾಕೋಶ | ಹು. ಮ. ರಾಮಾರಾಧ್ಯ |
| ದೊಡ್ಡಮನೆ, ನನ್ನೂರು ಮತ್ತು ಸೊನ್ನೆಯಿಂದ ಸೊನ್ನೆಗೆ | ಎಚ್. ಎಲ್. ನಾಗೇಗೌಡ |


# ಗಾದೆಗಳು

## ಅ

೧. ಅಕ್ಕ ಆದ್ರೆ ಉಂಡೋಗು । ಲೆಕ್ಕ ಇದ್ರೆ ಕೊಟ್ಟೋಗು.

೨. ಅಕ್ಕ ಇದ್ರೆ ಬಾವ । ರೊಕ್ಕ ಇದ್ರೆ ಸಂತೆ.

೩. ಅಕ್ಕರಗಾನ ಇಕ್ಕರಗಾನ । ಇಕ್ಕುಕೋದ್ರೆ ಕೈಯೇಬರದು.

೪. ಅಕ್ಕರೆ ಇಲ್ಲದೆ ತಿಣುಕಿ ಅತ್ತರೆ ಬಂತೆ ಭಾಗ್ಯ?

೫. ಅಕ್ಕರೆ ಇಲ್ಲದ ಚಿಕ್ಕವ್ವ । ಅಕ್ಕಿ ಹಾಕಿ ಬಾನದಲ್ಲಿಟ್ಟುಕೊಂಡು,
ಬರೇಮಾತಿಗೆ ಬಾ ಬಾ ಅಂದ್ಲು.

೬. ಅಕ್ಕರೆ ಇಲ್ಲದ ಅರಮನೆಗಿಂತ । ಅಕ್ಕರೆ ಇರುವ ಚಿಕ್ಕಮನೆ ಲೇಸು.

೭. ಅಕ್ಕರೆ ಉಳ್ಳ ಚಿಕ್ಕವ್ವ ಅಟ್ಟಲಲ್ಲೆ ಕರ್‍ಮೀನ । ಬುಟ್ಟಲಲ್ಲೆ ಮ್ಯಾಗಳ ತಿಳಿನೀರ!

೮. ಅಕ್ಕ ಸತ್ತರೆ ಅಮಾಸೆ ನಿಲ್ಲದು । ಅಣ್ಣ ಸತ್ತರೆ ಹುಣ್ಣಿಮೆ ನಿಲ್ಲದು.

೯. ಅಕ್ಕಿ ಖರ್ಚಾಗಕಾಗ್ದು । ಅಕ್ಕನ ಮಕ್ಕಳು ಬಡವಾಗಕಾಗ್ದು.

೧೦. ಅಕ್ಕಿ ಕೊಟ್ಟು ಉಣ್ಣೂಕೆ । ಅಕ್ಕನ ಮನೆಯೇ ಆಗಬೇಕೇ?

೧೧. ಅಗಸನ ಬಡಿವಾರವೆಲ್ಲ ಹೆರರ ಬಟ್ಟೆಯ ಮೇಲೆ.

೧೨. ಅಗಸಗಿತ್ತಿ ಹೂಸು ಔಸ್ತಿಗೆ ಬೇಕು ಅನ್ನೋವೊತ್ತಿಗೆ,
ಅವಳ ಅಂಡು ದಿಂಡಗದ ಮೆಳೆ ಮೇಲ್ಕೆ ಹೋಯ್ತಂತೆ.

೧೩. ಅಗಸನ ಹತ್ತಿರ ಬೊಗಸೆ ನೀರಿಗೆ ಬರವಾ?

೧೪. ಅಗ್ಗ ಅಂತ ಅರಳಲಿಲ್ಲ । ತಗ್ಗು ಅಂತ ಸುಂಡಲಿಲ್ಲ..

೧೫. ಅಗ್ಗದ ಆಸೆಗೆ । ಗೊಬ್ಬರ ಕೊಂಡರು.

೧೬. ಅಗ್ಗದ ಚಪ್ಪಲಿ ಕಾಲಿಗೆ ಮೂಲ.

೧೭. ಅಗ್ಗದ ಕಾಸು ಮುಗ್ಗಿದ ಜೋಳ.

೧೮. ಅಗ್ರಹಾರಕ್ಕೆ ಹೋದರೂ ದುರಾಗ್ರಹ ಬಿಡಲಿಲ್ಲ.

೧೯. ಅಗಿದರೆ ಸವೆಯ । ನುಂಗಿದರೆ ಇಳಿಯ.

೨೦. ಅಚ್ಚೇರಕ್ಕಿ ಇದ್ದರೆ । ಅಡ್ಡಗೋಡೆ ಹಾರೇನು ಅಂದ.

೨೧. ಅಚ್ಚೇರಕ್ಕಿ ಬುತ್ತಿದ್ರೆ । ಐದರಾಬಾದ್ ಕಾಣ್ತೆನಿ ಅಂದ್ನಂತೆ.

೨೨. ಅಜ್ಜನಿಗೆ ಮೊಮ್ಮಗ ಆಕಳಿಕೆ ಕಲಿಸಿದ್ನಂತೆ.

೨೩. ಅಜ್ಞಾತವಾಸದಲ್ಲೂ ಅಜ್ಞಾನಿಗಳ ಕಾಟ ತಪ್ಪಲಿಲ್ಲ.

೨೪. ಅಜ್ಜಾ 'ಮದುವೆ' ಎಂದರೆ - 'ನನಗೋ' ಅಂದ.

೨೫. ಅಜ್ಜಿ ಇಲ್ಲದ ಮನೆ, ಮಜ್ಜಿಗೆ ಇಲ್ಲದ ಊಟ ಎರಡೂ ಒಂದೇ.

೨೬. ಅಜ್ಜಿಗೆ ಅರಿವೆ ಚಿಂತೆ । ಮೊಮ್ಮಗಳಿಗೆ ಮದುವೆ ಚಿಂತೆ.

೨೭. ಅಜ್ಜಿ ನೂತದ್ದೆಲ್ಲ ಅಜ್ಜನ ಉಡಿದಾರಕ್ಕೆ.

೨೮. ಅಟ್ಟಕ್ಕೆ ಹಾರದ ಬಡ್ಡಿ ಬೆಟ್ಟಕ್ಕೆ ಹಾರ್‍ಯಾಳೆ?

೨೯. ಅಟ್ಟದಿಂದ ಬಿದ್ದೋನ ದಡಿಯಿಂದ ಚಚ್ಚಿದರು.

೩೦. ಅಟ್ಟ ಪಾಯಸದಲ್ಲಿ ಕೆರಾ ಹೆಟ್ಟಿದ ಹಾಗೆ.

೩೧. ಅಟ್ಟ ಮುರಿದು ಗೀರಗೀಟೆ ಮಾಡ್ದಂಗೆ.

೩೨. ಅಟ್ಟಮೇಲೆ ಒಲೆ ಉರೀತು । ಕೆಟ್ಟಮೇಲೆ ಬುದ್ಧಿ ಬಂತು.

೩೩. ಅಟ್ಟ ಸ್ವರ್ಗವಲ್ಲ । ಗುಡ್ಡ ಮೇರುವಲ್ಲ.

೩೪. ಅಟ್ಟ ಹತ್ತೋರಿಗೆ ಮೆಟ್ಲು ಕೊಡಬಹುದು,
ಬೆಟ್ಟ ಹತ್ತೋರಿಗೆ ಕೊಡೋಕಾಗ್ತದಾ?

೩೫. ಅಟ್ಟಿಕ್ಕಲಾರದೋಳಿಗೆ ಒಲೆ ಡೊಂಕು
ಕುಟ್ಟಲಾರದೋಳಿಗೆ ಒನಕೆ ಡೊಂಕು.

೩೬. ಅಟ್ಟುಣ್ಣುವೋನಿಗೆ ಹೆಂಡ್ತಿ ಬ್ಯಾಡ
ಮೊಟ್ಟೆ ಎಣೆಯೋನಿಗೆ ಆಳು ಬ್ಯಾಡ.

೩೭. ಅಟ್ಟುಂಬೋದಕಿಂತ ತಿರಿದುಂಬೋದೆ ಲೇಸು.

೩೮. ಅಟ್ಟು ಮಾರು ಅಂದ್ರೆ ಸುಟ್ಟು ಮಾರಿದಳಂತೆ.

೩೯. ಅಟ್ಟೇ ಇಲ್ಲ ಅಂದ್ರೆ । ಕೊಟ್ಟಿಗೇಲಿ ತಂದಿಕ್ಕು ಅಂದ ಹಾಗೆ.

೪೦. ಅಡಕೆ ಆಳಕ್ಕೆ ಹಾಕು । ತೆಂಗು ತೇಲಿಸಿ ಹಾಕು.

೪೧. ಅಡಕೆ ಕದ್ರೂ ಕಳ್ಳ । ಆನೆ ಕದ್ರೂ ಕಳ್ಳ.



೪೨. ಅಡಕೆಗೆ ಹೋದ ಮಾನ ಆನೆ ಕೊಟ್ರೂ ಬಾರದು.

೪೩. ಅಡಿಗೆ ಮಾಡಿ ಕಲಿ । ಉಡುಗೆ ನೋಡಿ ಕಲಿ.

೪೪. ಅಡಿಗೇಲಿ ಜಾಣೆ ಅಂತ ಹಡಗೀನ್ ಮ್ಯಾಲೆ ತರೋವತ್ಗೆ,
ಚಕ್ಕೋತನ್ ಸೊಪ್ಗೆ ಉಪ್ಪ್ ಎಷ್ಟಾಕ್ಲಿ ಅಂದಳಂತೆ !

೪೫. ಅಡಪಡ ಅನ್ನೋರ್ನ ಅಡವೀಲು ನಂಬ್ಯಾಡ.

೪೬. ಅಡವ್ಯಾಗೆ ಉಂಬಾಗ ಗಿಡವೆಲ್ಲಾ ನೆಂಟರು.

೪೭. ಅಡ್ಡಗ್ಯಾಡೆ ಮ್ಯಾಲೆ ದೀಪ ಇಟ್ಟಂಗೆ.

೪೮. ಅಡ್ಡಾದಿಡ್ಡಿ ಮಾತಾಡಿ ಗಡ್ಡ ಕೀಳಿಸ್ಕೊಂಡ.

೪೯. ಅಡಿಗೆ ಮಾಡೋನು ಒಬ್ಬನಾದ್ರೆ । ಹದ ಹಿಡಿಯೋರು ಒಂಬತ್ತು ಜನ.

೫೦. ಅಡಿಗೆ ಮಾಡೋಳ ಹಸ್ತದ ಗುಣ । ಕುಂಬಾರ್ನ ಮಡಕೆ ಗುಣ.

೫೧. ಅಡಿಗೆ ಯಾಕೆ ಹಿಂಗೆ ಮಾಡಿದ್ದಿ ಅಂದ್ರೆ । ಕೋಣೆ ಕಿರಿದಾಗಿತ್ತು ಅಂದ್ಲಂತೆ.

೫೨. ಅಡ್ಡಿಮಾಡಿದಷ್ಟೂ ಬಡ್ಡಿ ಹೆಚ್ಚುವುದು,
ಅಡಿಗೆ ಮಾಡಿದಷ್ಟೂ ಉಂಡು ತೀರುವುದು.

೫೩. ಅಡೂತನಕ ನಿಂತುಕೊಂಡು । ಆರೂತನಕ ನಿಲ್ಲಲಿಲ್ಲ.

೫೪. ಅಡೂಮಡಿಕೆ ಕೊಟ್ಟು ಕುಂಡ್ಯಾಗೆ ಬದನಿಕಾಯಿ ಇಟ್ಟುಕೊಂಡರು.

೫೫. ಅಣಬೆ ಆಸೆಗೆ ಕೂಗೋ ಕೋಳಿ ಕುಯ್ದರಂತೆ.

೫೬. ಅಣ್ಣ ಅಪ್ಪಾದನಾ । ಅತ್ತಿಗೆ ಅವ್ವಾದಳಾ ?

೫೭. ಅಣ್ಣೇಸೊಪ್ಪು ತಿನ್ನೋಕು ಪುಣ್ಯ ಇರಬೇಕು.

೫೮. ಅತ್ತ ಕೆರಿ ಇತ್ತ ಬಾವಿ.

೫೯. ಅತ್ತ ಗಂಡಗೂ ಇಲ್ಲ । ಇತ್ತ ಮಿಂಡಗೂ ಇಲ್ಲ.

೬೦. ಅತ್ತದ ಮಳೆ ಹುಯ್ದಿದ್ರೆ ಹೆತ್ತ ತಾಯಿ ಮಕ್ಕಳಿಗೆ ಹಿಟ್ಟಿಕ್ಕಲ್ಲ.

೬೧. ಅತೀ ಬುದ್ಧಿ ಅಲ್ಪಾಯಸ್ಸು.

೬೨. ಅತಿಯಾಸೆ ಗತಿ ಕೇಡು.

೬೩. ಅತಿರಥ ಮಹಾರಥರು ಇರುವಲ್ಲಿ ಉತ್ತರಕುಮಾರ ಯಾರು?

೬೪. ಅತಿ ಸ್ನೇಹ ಗತಿ ಕೇಡು.

೬೫. ಅತ್ತಿಕಾಯಿ ಹಣ್ಣಾಗೋವತ್ಗೆ । ಕಾಗೆ ಬಾಯಿ ಹುಣ್ಣಾಯ್ತು.

೬೬. ಅತ್ತಿಯಿಲ್ಲದ ಆಚಾರಗಿತ್ತಿ । ಸೊಸಿಯಿಲ್ಲದ ಪಾತರಗಿತ್ತಿ.

೬೭. ಅತ್ತಿಸೊಸಿ ಜಗಳದಾಗ ಅಡ್ಡಣಗಿ ಅಡ್ಡ ಬಂತು.

೬೮. ಅತ್ತಿ ಹಣ್ಣು ಬಿಚ್ಚಿ ತಿನ್ನಬ್ಯಾಡ.

೬೯. ಅತ್ತೂ ಕರೆದೂ ಔತಣಕ್ಕೆ ಹೇಳಿಸಿಕೊಂಡರು.

೭೦. ಅತ್ತೆಗೆ ಅಗಸಗೇರಿ । ಸೊಸೆಗೆ ಬಸವಗೇರಿ.

೭೧. ಅತ್ತೆಗೆ ದೇಸಾಂತ್ರ । ಸೊಸೆಗೆ ಸ್ವತಂತ್ರ.

೭೨. ಅತ್ತೆ ಒಡೆದ ಮಡಕೆಗೆ ಬೆಲೆ ಇಲ್ಲ !

೭೩. ಅತ್ತೆಗೊಂದು ಕಾಲ । ಸೊಸೆಗೊಂದು ಕಾಲ.

೭೪. ಅತ್ತೆ ದೇವರಿಗೆ ಅಳಿಯ ಸಿಡಿಯಾಡ್ದ.

೭೫. ಅತ್ತೆ ಮ್ಯಾಗಲ ಸಿಟ್ಟು ಕೊತ್ತಿ ಮ್ಯಾಲೆ.

೭೬. ಅತ್ತೆ ಸತ್ತ ಆರು ತಿಂಗಳ ಮ್ಯಾಲೆ ಸೊಸೆ ಕಣ್ಣಾಗೆ ನೀರು ಬಂತು.

೭೭. ಅತ್ತೇರ್ ಮಾಡಿದ್ದು ಅಟ್ಟದ ಮೇಲೆ
ಸೊಸೇರ್ ಮಾಡಿದ್ದು ಕೇರಿಮ್ಯಾಲೆ.

೭೮. ಅಧ್ವಾನದ ಗಂಡ ನಿದ್ದೆಗಣ್ಣೇಲಿ ಹೋದ !

೭೯. ಅದ್ನೇ ತಿಂತೀನಿ ಕದ ತಗಿ ಅಂದಂಗೆ !

೮೦. ಅಧ್ಯಯನ ಮಾಡೋನಿಗೆ ಮಧ್ಯಾಹ್ನಕೆ ಹಿಟ್ಟಿಲ್ಲ.

೮೧. ಅನ್ನ ಇಕ್ಕಿ ಸಾಕು ಅನ್ನಿಸಬಹುದು.
ಹಣ ಕೊಟ್ಟು ಸಾಕು ಅನ್ನಿಸೋಕಾಗೊಲ್ಲ.

೮೨. ಅನ್ನದಲ್ಲಿ ಚಿನ್ನದಲ್ಲಿ ಬಡವರಾದ್ರೆ ಕುಲದಲ್ಲೂ ಬಡವರೇ?

೮೩. ಅನ್ನಹತ್ಯಗಾರಂಗೆ ಬ್ರಹ್ಮಹತ್ಯಗಾರ ಸಾಕ್ಷಿ.

೮೪. ಅನ್ನ ಹಾಕಿದ ಮನೆ ಹಾಳಲ್ಲ । ಗೊಬ್ರ ಹಾಕಿದ ಹೊಲ ಕೆಡಲ್ಲ.

೮೫. ಅನಂತಯ್ಯನ ಮಾತ್ರೆ : ವೈಕುಂಠ ಯಾತ್ರೆ !

೮೬. ಅನಾಥರ ಬದುಕಿಗೆ ಆಕಾಶವೇ ಕಾವಲು.

೮೭. ಅನ್ಯಾಯ ತನ್ನ ಬೆನ್ನು ಬಿಡೋದಿಲ್ಲ.



೮೮. ಅನ್ಯಾಯದ ಗಳಿಕೆ ಅಡವಿ ಪಾಲು.

೮೯. ಅನ್ನೇಕಾರರಿಗೆ ಹನ್ನೆರಡು ದೇವರು.

೯೦. ಅನುಭವ ಇಲ್ದ ಹಾರುವಯ್ಯ ಗಡ್ಡ ಸೀಯ್ಕೊಂಡ.

೯೧. ಅನುಕರು ಹಂತೀಲಿ ಇರಬೇಕು, ಕುರುಬರು ನೇರೇಲಿ ಇರಬೇಕು.

೯೨. ಅನುರಾಧ ಮಳೆ ಬಂದರೆ ನಮ್ಮ ರಾಗಿ ನಮ್ಮದು.

೯೩. ಅಪದ್ದಕ್ಕೆ ಅಪ್ಪಣೆ ಕೊಟ್ರೆ ಬಾಯಿಗೆ ಬಂದದ್ದೇ ಮಾತು.

೯೪. ಅಪರೂಪಕ್ಕೆ ಅಪ್ಪ ಅಂದೊತ್ಗೆ,
ಕಡೇ ಕೊಟ್ಟಿಗೇಲಿ ಕೂತ್ಕೊ ಮಗ ಅಂದನಂತೆ.

೯೫. ಅಪ್ಪ ಅವ್ವನಂತ ನೆಂಟ್ರಿಲ್ಲ । ಹಿಟ್ಟು ಸೊಪ್ಪಿನಂತ ಊಟಿಲ್ಲ !

೯೬. ಅಪ್ಪ ತೋಡಿದ ಬಾವಿ ಅಂತ ಉಪ್ಪುನೀರು ಕುಡೀಬ್ಯಾಡ.

೯೭. ಅಪ್ಪನ ಅರಮನೆಗಿಂತ ಗಂಡನ ತೌರುಮನೆ ಲೇಸು.

೯೮. ಅಪ್ಪನ ಅಪ್ಪ ಅನ್ನಲಾರದ್ದು ಚಿಕ್ಕಪ್ಪನ್ನ ಅಪ್ಪಾ ಅಂದೀತೆ?

೯೯. ಅಪ್ಪನ ಎಕ್ಕಡ ಮಗ ಮೆಟ್ಟುವಂಗಾದ್ರೆ ಮಗನ್ನ ಮಾತಾಡಿಸಬ್ಯಾಡ.

೧೦೦. ಅಪ್ಪಅವ್ವನಂಥ ನಂಟರು ಇಲ್ಲ । ಸೊಪ್ಪಿನಂಥ ಊಟ ಇಲ್ಲ.

೧೦೧. ಅಪ್ಪನಿಗೆ ಲೆಕ್ಕ । ಅವ್ವನಿಗೆ ದುಃಖ.

೧೦೨. ಅಪ್ಪಂತೋರ್ ಮನೆಗೆ ಅಕ್ಕನ ಕೊಟ್ಟೊತ್ಗೆ
ತಕ್ಕೊಳ್ಳೆ ಬಡ್ಡಿ ಕಸದ ಮಂಕ್ರಿಯ ಅಂದ್ರು.

೧೦೩. ಅಪ್ಪ ಮಾಡಿದ್ದು ಮಗನ ಸಪ್ಪಕ್ ಸಮಾನ ಆಯ್ತಂತೆ.

೧೦೪. ಅಪ್ಪ ಹಾಕುದ್ ಆಲದಮರಕ್ಕೆ ಮಗ ನೇಣಾಕ್ಕೊಂಡ.

೧೦೫. ಅಮ್ಮನವರು ಪಟ್ಟಕ್ಕೇರುವಾಗ ಐನೋರು ಚಟ್ಟಕ್ಕೇರುದ್ರು.

೧೦೬. ಅಮ್ಮನೋರು ಸಾರುಸುದ್ರೆ ಅಯ್ನೋರು ಹೇತು ಮನೆ ನುಗ್ಗುದ್ರು.

೧೦೭. ಅಮ್ಮಿ ಗಂಡ ಹಮ್ಮೀರ । ಎಮ್ಮೆ ಕೊಟಗೇಲ್ ನಿಂತಿದ್ದ.

೧೦೮. ಅರಮನೆ ಗುಟ್ಟು ಅಂಗಡೀಲ್ಲಿ ರಟ್ಟು.

೧೦೯. ಅರಗು ಬಂಗಾರ ತಿಂತು । ಕೊರಗು ತನ್ನ ತಿಂತು.

೧೧೦. ಅರಸಗಿತ್ತಿ ಸೀರೆ ಅಗಸಗಿತ್ತಿ ಅಂಡಿನಮ್ಯಾಲೆ.

೧೧೧. ಅರಸು ಅಂದರೆ ಊರು ನಡಗ್ತದೆ। ಮುದುಕ ಅಂದರೆ ಗಡ್ಡ ನಡಗ್ತದೆ.

೧೧೨. ಅರಸು ಯಾರಿಗೆ ಅಪ್ಪ। ಸೂಳೆ ಯಾರಿಗೆ ಅವ್ವ ?

೧೧೩. ಅರಿಶಿಣದ ಕೂಳಿಗೆ ವರುಷದ ಕೂಳು ಹಾಳಾಯ್ತು.

೧೧೪. ಅರಸನ ಮಗಳಾದರೂ ಪುರುಷಂಗೆ ಅಡಿ.

೧೧೫. ಅರಮನೆ ಬತ್ತಕ್ಕೆ ಹೆಗ್ಗಣ ಗುದ್ದಾಡಿದ ಹಾಗೆ.

೧೧೬. ಅರಮನೆ ಮುಂದಿರಬ್ಯಾಡ। ಕುದುರೆ ಹಿಂದಿರಬ್ಯಾಡ.

೧೧೭. ಅರಬರದೇಲಿ ಹೋಗೆಡ್ತಿ। ಅವರೆಕಾಳಿನ ಸುಗ್ಗೀಲಿ ಬಾರೆಡ್ತಿ.

೧೧೮. ಅರಸನ ಕುದುರೆ ಲಾಯದಲ್ಲೆ ಮುಪ್ಪಾಯ್ತು.

೧೧೯. ಅರಿತರೆ ಮಾತ್ನಾಡು। ಮರೆತರೆ ಕೂತ್ನೋಡು.

೧೨೦. ಅರಿತವರ ಮುಂದೆ ಅಣಕ ಬ್ಯಾಡ
ಹಿರಿಯರ ಮುಂದೆ ಹಿಗ್ಗೋದ್ ಬ್ಯಾಡ.

೧೨೧. ಅರಿಯೆ ಎಂದರೆ ಅರವತ್ತು ಗುಣ। ಬಲ್ಲೆ ಎಂದರೆ ಮೈಯೆಲ್ಲಾ ನುಗ್ಗು.

೧೨೨. ಅರಿಯೆನೆಂಬುದು ಆಳಿನ ಕೆಲಸ। ಬಲ್ಲೆನೆಂಬುದು ಅರಸನ ಕೆಲಸ.

೧೨೩. ಅರೀದ ಮಳ್ಳಿ ಅಯ್ಯನ ಸೂಳೆ.

೧೨೪. ಅರ್ತೇಲಿ ಒತ್ತಿ ಹಿಡಿಬ್ಯಾಡ। ಹಬ್ಬದಲ್ಲಿ ಹೆಡ್ತಿ ಹೊಡಿಬ್ಯಾಡ.

೧೨೫. ಅರುವುಗೇಡಿಗೆ ಆರತಿ ಕೊಟ್ಟರೆ ಆರುತಿಂಗಳು ನೆಲಕ್ಕಿಡಲಿಲ್ಲ.

೧೨೬. ಅಲಲ ಅನ್ನೋ ಅಳ್ಳಿಗಿಡ ನಂಬುದ್ರೂವೆ
ಮೆತ್ತಗಿರೋ ಕಳ್ಳಿಗಿಡ ನಂಬಾರ್ದು.

೧೨೭. ಅಲ್ಲದ ಕೆಲಸಕ್ಕೆ ಹೋಗಿ ಹಲ್ಲು ಮುರುಕೊಂಡ.

೧೨೮. ಅಲ್ಲದ ದೇವರಿಗೆ ಬೆಲ್ಲದ ನೈವೇದ್ಯ.

೧೨೯. ಅಲ್ಪನ ಮುಂದೆ ಹಲ್ಲುಕಿರೀಬೇಡ। ದುಷ್ಟನ ಮುಂದೆ ಕಾಲುಕೆರೀಬ್ಯಾಡ.

೧೩೦. ಅಳತೆ ಕಲ್ಲು ಕೀಳೋದೂ ಒಂದೆ। ಹೆಂಡತಿ ತಾಲಿ ಕೀಳೋದು ಒಂದೆ.

೧೩೧. ಅರಸನ ಮುಖದ ಮೇಲಿನ ಬಟ್ಟೆ। ಅಗಸನ ತಿಕದ ಮೇಲೆ.

೧೩೨. ಅಲ್ಪ ವಿದ್ಯಾ ಮಹಾ ಗರ್ವಿ.

೧೩೩. ಅಲ್ಪನ ಸಂಗ ಅಭಿಮಾನ ಭಂಗ.



೧೩೪. ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧ ರಾತ್ರೀಲಿ ಕೊಡೆ ಹಿಡಿಸಿಕೊಂಡ.

೧೩೫. ಅಲ್ಲಿ ಕೂತು ಇಲ್ಲಿ ಕೂತು ಮಲ್ಲಕ್ಕ ಬಡವಿಯಾದಳು.

೧೩೬. ಅಲ್ಲೀದಲ್ಲೆ ಇಟ್ಟು ಮಲ್ಲಿ ಮನೆ ಸಾರಿಸಿದಳು.

೧೩೭. ಅಲ್ಲುಂಟು ಇಲ್ಲುಂಟು ಬಸ್ತಿಯೊಳಗುಂಟೆ ಶಿವಧ್ಯಾನ.

೧೩೮. ಅವರಾಡಿ ಇವರಾಡಿ ಒಂದ್ ಮಗುವಾಯ್ತು,
ಸೊಪ್ಪಿಗೆ ಸೌದೆಗೆ ನೆರವಾಯ್ತು.

೧೩೯. ಅವರೆ ಸಾಲಿಗೆ ಬೆಂಕಿ ಇಕ್ಕಿ ಹುರಿಗಾಳು ತಿಂದ್ಹಂಗೆ.

೧೪೦. ಅವಸರದಲ್ಲಿ ಅಜ್ಜಿ ಮೈನೆರೆದ್ಲು.

೧೪೧. ಅವಸ್ರಕ್ಕೆ ಆದೋಳೆ ಗರತಿ.

೧೪೨. ಅವ್ವ ಮೋಜುಗಾತಿ। ಅಪ್ಪ ಜೂಜುಗಾರ। ಅಂಬಲಿಗೆ ಉಪ್ಪಿಲ್ಲ.

೧೪೩. ಅವ್ವ ಸತ್ರೆ ಅಪ್ಪ ಚಿಕ್ಕಪ್ಪ.

೧೪೪. ಅಸಗ್ಗಿ ಕೈಯ್ಯ ಅಡುಗೆ ಉಣ್ಣೋಕಿಂತ ಹಸುಕೊಂಡಿರೋದೆ ಲೇಸು.

೧೪೫. ಅಸಲು ಇಲ್ಲದೆ ಬಡ್ಡಿಯಿಲ್ಲ। ಮೊಸರು ಇಲ್ಲದೆ ಮಜ್ಜಿಗೆಯಿಲ್ಲ.

೧೪೬. ಅಸಲೆ ಮಳೆ ಬಿಸಿಲು ಕಾದುಹೋತು,
ಮಗಿ ಮಳೆ ಮೋಡ ಕಟ್ಟಿಹೋತು.

೧೪೭. ಅಸಾಸೂರನ್ನೆಡ್ಡಿ ಕಸಾ ಸುರಿಯನತ್ರಕ್ಕೆ ಹೋದ್ಲಂತೆ.

೧೪೮. ಅಸಲೆ ಮಳೇಲಿ ಸಸ್ಲು ಬೆಟ್ಟಕೇರಿತು.

೧೪೯. ಅಳಸಾದರೆ ಅಂಬಲಿ। ಗಟ್ಟಿಯಾದರೆ ಕಡುಬು.

೧೫೦. ಅಳಿಲು ಭಕ್ತಿ ಮಳಲು ಸೇವೆ.

೧೫೧. ಅಳಿಯ ಅಲ್ಲ ಮಗಳ ಗಂಡ ಅಂದ್ಹಂಗೆ.

೧೫೨. ಅಳಿಯನ ಕೇವ್ಗೆ ಮನೆ ಕೋಳಿಯೆಲ್ಲ ಬರಿದಾದೊ.

೧೫೩. ಅಳಿಯನ ಹಂದ್ರದಲಿರೋ ಬದಲು ಮಗನ ಕೀಳೇಲಿರು.

೧೫೪. ಅಳಿಯ : ಮನಿ ತೊಳಿಯ.

೧೫೫. ಅಳಿಯ ಬರಲಿಲ್ಲಾಂತ ದೀವಳಿಗೆ ನಿಂತೀತೆ?

೧೫೬. ಅಳಿಯುವುದು ಕಾಯ ಉಳಿಯುವುದು ಕೀರ್ತಿ.

೧೫೭. ಅಲ್ತಾ ಹೋದೋಳು ಆಡ್ ಕಾದಾಳೆ?

೧೫೮. ಅಳೂದಕ್ಕೆ ಅಳೂದು ತಪ್ಪಲಿಲ್ಲ । ಚಿನಾಲಿಗೆ ಬಡತನ ತಪ್ಪಲಿಲ್ಲ.

೧೫೯. ಅಂಕೆ ಇಲ್ಲದ ಮುಕ್ಕ ಅಗಲು ದಾಟ್ತು.

೧೬೦. ಅಂಕೆಯಿಲ್ಲದ ಕಪಿ ಲಂಕೆ ಸುಟ್ಟಿತು.

೧೬೧. ಅಂಕೇಲಿದ್ದ ಹೆಣ್ಣು । ಮಜ್ಜಿಗೇಲಿದ್ದ ಬೆಣ್ಣೆ - ಎಂದೂ ಕೆಡಾಕಿಲ್ಲ.

೧೬೨. ಅಂಗರಕ್ಷೆ ಇಲ್ಲದ ಮೇಲೆ ಬಂಗಾರ ಯಾಕೆ?

೧೬೩. ಅಂಗಳದಲ್ಲಿರೋರೆಲ್ಲ ಲಿಂಗವಂತರು,
ಮಂಗ್ರ ಮಾಯ್ಲಿಲಿ ಬಂದಿದ್ರು ಕೋಳಿ ಪಿಳ್ಳೆ ಕಳ್ಳರು !

೧೬೪. ಅಂಗಳದಲ್ಲಿ ಹೇತು ಮಂಗಳ ಕಷ್ಟ ಅಂದ ಹಾಗೆ.

೧೬೫. ಅಂಗಿಮ್ಯಾಲಂಗಿ ತರವಾ ? ಹೆಂಡ್ರು ಮ್ಯಾಲೆ ಸೂಳೆ ತರವಾ?

೧೬೬. ಅಂಗೇ ಇದ್ಬೋಳ್ಗೆ ಹಳೆ ಕಂಬ್ಳೀ ಕೊಟ್ರೆ,
ಹಿತ್ಲುಗೋಗಿ ಗುದ್ಲಿ ಗುದ್ಲಿ ಮೊಳ ಹಾಕಿದ್ಲಂತೆ.

೧೬೭. ಅಂಗೈ ಹುಣ್ಣಿಗೆ ಕನ್ನಡಿ ಯಾಕೆ?

೧೬೮. ಅಂಟ ಅಂಟನಿಂದಲೇ ತಗೀಬೇಕು.

೧೬೯. ಅಂಜಿದವನ ಮೇಲೆ ಕಪ್ಪೆ ಎಸೆದ ಹಾಗೆ.

೧೭೦. ಅಂತೂ ಇಂತೂ ಕುಂತಿಮಕ್ಕಳಿಗೆ ವನವಾಸ.

೧೭೧. ಅಂಥಪ್ಪನ ಮನೆಗೆ ಇಂಥಪ್ಪ ಕಾಲಿಕ್ಕಿದಂಗೆ.

೧೭೨. ಅಂದು ಅನ್ನಿಸಿಕೊಂಡು ಛಂದಗೇಡಿ ಆಯಿತು.

೧೭೩. ಅಂದ ನೋಡಿದ್ರೆ ತಿಂದುಕೊಳ್ಳೊನ ಅನಿಸ್ತದೆ,
ಗುಣ ನೋಡಿದ್ರೆ ಗುದ್ದಿಕೊಳ್ಳೊನ ಅನಿಸ್ತದೆ.

೧೭೪. ಅಂಬಲಿ ಉಂಬವನಿಗೆ ಅಂಬಾರಿ ಹಂಬಲ್ಯಾಕೆ?

೧೭೫. ಅಂಬಲಿ ಕುಡಿಯೋನಿಗೆ ಗಡ್ಡ ನೀವೋನು ಬೇರೆ.

೧೭೬. ಅಂಬ್ಲಿಯಂಥ ಊಟಿಲ್ಲ । ಕಂಬ್ಳಿಯಂಥ ಹೊದಕಿಲ್ಲ.

೧೭೭. ಅಂಬಾರಿಯಲ್ಲಿ ಕೂತರೂ ಮುಂಗಾರು ಬಿಡಲಿಲ್ಲ.

೧೭೮. ಅಂಬೋಕೆ ಮಾಡಿದ್ದು ಶಾಸ್ತ್ರ । ಉಂಬೋಕೆ ಮಾಡಿದ್ದು ಅನ್ನ.



## ಆ

೧೭೯. ಆಕಳು ಕಪ್ಪಾದರೆ ಹಾಲು ಕಪ್ಪೆ?

೧೮೦. ಆಕಾಶ ಬೀಳುವಾಗ ಎಲ್ಲರ ತಲೆ ಒಂದೇ.

೧೮೧. ಆಕಾಶದ ಮಳೆ । ಭೂಮಿತಾಯಿ ಬೆಳೆ । ಯಾರ ಹಂಗು ನಮಗೇನು?

೧೮೨. ಆ ಗಂಡ್ಸ್ಗೆ ಈ ಹೆಣ್ಣು ತರವಲ್ಲ ಅಂದ್ರೆ ಅಸೆದಾನ ಬುಡದಲ್ಲ.

೧೮೩. ಆಗಲಾರದ ಗಂಡನಿಗೆ ಮೊಸರಲ್ಲಿ ಕಲ್ಲು ಸಿಕ್ಕಿತು.

೧೮೪. ಆಗಿಹೋದ ಮಾತಿಗೆ ಅಗಸ್ಯಾಗ ಅತ್ತರಂತ.

೧೮೫. ಆಗೋ ಪೂಜೆ ಆಗ್ತಿರಲಿ । ಊದೋ ಶಂಕಾನ ಊದಿಬಿಡ್ತೀನಿ.

೧೮೬. ಆಗ್ದೋರ್ ಸುದ್ದಿ ಹಲ್ಲೆಡೆಲೂ ಬ್ಯಾಡ.

೧೮೭. ಆಚಾರ ಬಲ್ಲದೆ ಈಚಲ ಮರ ?

೧೮೮. ಆಚಾರ ಹೇಳೋಕಾಯ್ತು । ಬದ್ನೆಕಾಯಿ ತಿನ್ನೋಕಾಯ್ತು.

೧೮೯. ಆಚಾರ ಹೇಳೋನ್ಗೆ ಹನ್ನೊಂದ್ ಮಕ್ಳು । ಒಂದ್ಕಾರ ವಿಚಾರ ಇಲ್ಲ.

೧೯೦. ಆಚಾರ್ಯರ ಮಗನಾಗಿ ಪುರಾಣಿಕನ ಅಳಿಯನಾಗಿ,
ಘೃತ ಎಂದರೆ ಅರಿಯೆನೇ ಎಮ್ಮೆ ಸಗಣಿಯ ಅಂದ.

೧೯೧. ಆಚಾರಿ ಆಳಲ್ಲ । ಏಡಿ ಬಾಡಲ್ಲ.

೧೯೨. ಆಚಾರಿ ಮಾತು ಆಚೆಗೋಗಿ ಈಚೆಗೆ ಬರೋವತ್ಗೆ ಇರಲ್ಲ.

೧೯೩. ಆಚಾರ್ಯರೇ ದಾವ ಊಡಿ ಅಂದರೆ ಕೊಡಿ ಮೂರು ಹಣ ಅಂದ.

೧೯೪. ಆಚೆಕೇರೀಲಿ ಹೆಣ್ಣು ಋತುವಾದ್ರೆ ನನಗೆ ಬಂದ ಬೋಮಾನವೇನು?

೧೯೫. ಆಟಕ್ಕೆ ತಕ್ಕ ವೇಷ । ದೇಶಕ್ಕೆ ತಕ್ಕ ಭಾಷೆ.

೧೯೬. ಆಡಿದ ಮಾತಿಲ್ಲ । ಅಳೆದ ಕೊಳಗ ಇಲ್ಲ.

೧೯೭. ಆಡಿ ತಪ್ಪಬೇಡ । ಓಡಿ ಸಿಕ್ಕಬೇಡ.

೧೯೮. ಆಡಿನ ಹಾಲು ಕುಡಿದರೆ ಆನಿಯಷ್ಟು ಬಲ.

೧೯೯. ಆಡು ಬಲ್ಲದಾ ಅವಲಕ್ಕಿ ರುಚಿಯ ?

೨೦೦. ಆಡು ಮಾರಿ ಈಡು ಕಟ್ಟಿಸ್ತೊತ್ತಿಗೆ । ಆಡೂ ಪೋಯ ಈಡೂ ಪೋಯ !

೨೦೧. ಆಡು ಮುಟ್ಟದ ಗಿಡ ಇಲ್ಲ । ಸರ್ವಜ್ಞ ಮುಟ್ಟದ ವಿಷಯ ಇಲ್ಲ.

೨೦೨. ಆಡೋರೊಂದಿಗೆ ಆಡಿ,
ಹಾರುವಯ್ಯ ಬಾಡು ತಿನ್ನೋದು ಕಲಿತುಕೊಂಡನಂತೆ.

೨೦೩. ಆಡುಂಡ ಕೈ ಅಟ್ಟುಣ್ಣಬಲ್ದ?

೨೦೪. ಆಡೋದು ಆಂಗ್ಲ ಮಾತು । ತೊಳಿಯೋದು ಎಂಜಲು ಬಟ್ಲು.

೨೦೫. ಆಡೋ ಹುಡುಗೀಗೊಂದು ಕಾಡೋ ಕೂಸು.

೨೦೬. ಆಡ್ಕೋಳ್ಳೋರ್ ಮುಂದೆ ಎಡವಿ ಬಿದ್ದಂಗೆ.

೨೦೭. ಆತುರಗಾರನಿಗೆ ಬುದ್ಧಿ ಮೋಟು.

೨೦೮. ಆತ್ರ ಮಾಡಿ ಗೋತ್ರ ಕೆಡಿಸಿಕೊಂಡ.

೨೦೯. ಆದಷ್ಟ್ ಆಯ್ತದೆ ಮಾದಪ್ಪನ ಜಾತ್ರೆ,
ಆದಂಗಾಯ್ತದೆ ಆಟಗಳ್ಳನ ಮದುವೆ.

೨೧೦. ಆದೀಕ ಅರ್ಚಕರಿಗೆ । ಕರ್ಪೂರ ಸಾಂಬ್ರಾಣಿ ಕಾಳಿಕಾದೇವಿಗೆ.

೨೧೦ಅ. ಆದೇನೆಂದರೆ ಅತ್ತೆ ಮಗಳು । ಕೊಂದೇನೆಂದರೆ ಮಾವನ ಮಗಳು.

೨೧೧. ಆನಿಗೆ ಆನಿ ಹೋಗತ್ತೈತಿ । ಬಾಲಕ್ಕೆ ಯಾಕೆ ಸ್ಯಾಣೇತನ?

೨೧೨. ಆನಿ ಬಿದ್ರೆ ಆಳೆತ್ರ.

೨೧೩. ಆನೆ ತಿನ್ನೂನ್‌ಗೆ ಆಡುಮರಿ ಅಡವೇ?

೨೧೪. ಆನೆ ಭಾರ ಆನೆಗೆ । ಇರುವೆ ಭಾರ ಇರುವೆಗೆ.

೨೧೫. ಆನೆ ಬಿದ್ರೆ ಒಂಟೆ ಉದ್ದ.

೨೧೬. ಆನೆಯಾಗಿ ಹುಟ್ಟಿ ಸೊಪ್ಪು ತಿನ್ನೋದಕ್ಕಿಂತ,
ಇರುವೆಯಾಗಿ ಹುಟ್ಟಿ ಸಕ್ಕರೆ ಮೆಲ್ಲೋದು ಲೇಸು.

೨೧೭. ಆನೆ ಸತ್ರೂ ಸಾವಿರ ಇದ್ರೂ ಸಾವಿರ.

೨೧೮. ಆನೆಯಂಥದೂ ಮುಗ್ಗರಿಸ್ತದೆ.

೨೧೯. ಆನೆ ಸತ್ತರೂ ಆಡಿಗಿಂತ ಕಡೆಯೆ?

೨೨೦. ಆನೆ ಹೋಗ್ತದೆ । ನಾಯಿ ಬೊಗಳ್ತದೆ.

೨೨೧. ಆನೆ ಹಲ್ಲು ತೋರಿಸುವುದಕ್ಕೊಂದು ತಿನ್ನುವುದಕ್ಕೊಂದು.



೨೨೨. ಆಯ ನೋಡಿ ಪಾಯ ಹಾಕು.

೨೨೩. ಆಯಸ್ಸು ಇಲ್ಲದೋರ ಸಂಗಡ ದೋಣಿ ಹತ್ತುದ್ರೆ.
ಆಳಿಗೊಂದ್ ಗುಟುಕು ನೀರು.

೨೨೪. ಆಯ್ಕೊಂಡ್ ತಿನ್ನೋ ಕೋಳಿ ಕಾಲು ಮುರದಂಗೆ.

೨೨೫. ಆಯ್ಕೊಂಡ್ ತಿನ್ನುತಿದ್ದೋನಿಗೆ ಹರಿ ರಾಗಿ ಕೊಟ್ಟಂಗೆ.

೨೨೬. ಆಯ್ಗೇಡಿ ಅತ್ತೆಗೆ ಮಾಯ್ಗಾರ ಸೊಸೆ.

೨೨೭. ಆರಕದ ಕಣ ಹೋಯ್ತು ಅನ್ನೋವತ್ಗೆ.
ಹರಿಸೇವೆ ಅನ್ನ ಹೋಯ್ತು ಅಂದಂಗೆ.

೨೨೮. ಆರಕ್ಕೇರಲಿಲ್ಲ ಮೂರಕ್ಕಿಳೀಲಿಲ್ಲ.

೨೨೯. ಆರ್ ಕೋಳಿ ಕೂದಿ ಅಗಲಲ್ಲಿ ಬಾಡಿಲ್ಲ : ಆಡಿದ್ರೆ ನಾವ್ ಹಗೆಯೋರು.

೨೩೦. ಆರು ದ್ವಾಸೆ ಕೊಟ್ರೆ ಅತ್ತೆ ಕಡೆ,
ಮೂರು ದ್ವಾಸೆ ಕೊಟ್ರೆ ಮಾವನ ಕಡೆ,
ಏಳು ದ್ವಾಸೆ ಕೊಟ್ರೆ ಹೇಳ್ದೋರ್ ಕಡೆ.

೨೩೧. ಆರಾಳು ಹಣ ಕೇಡು । ಮೋಟುಗುದ್ದಿ ಪ್ರಾಣಕ್ಕೇಡು.

೨೩೨. ಆರಿದ್ದು ಆರು ಮಂದಿಗೆ । ಬಿಸೀದು ಮೂರು ಮಂದಿಗೆ.

೨೩೩. ಆರಿದ್ರೆ ಗುಡುಗಿದರೆ ಆರು ಮಳೆ ಹೋಯ್ತು.

೨೩೪. ಆರಂದ್ರೆ ನನ್ನ ಅಂಡಿಗಾಯ್ತು । ಮೂರಂದ್ರೆ ನನ್ನ ಕುಂಡಿಗಾಯ್ತು.

೨೩೫. ಆರಂಭದ ಬುಡ ಕಷ್ಟ । ಅಧಿಕಾರದ ತುದಿ ಕಷ್ಟ.

೨೩೬. ಅರಕಲು ಸೀರೆ ಅಕ್ಕ ಬಂದ್ರೆ ಆಡ್ಕೋಳ್ಳೋರ್ ಗಡವಿಲ್ಲ,
ಗೆಜ್ಜೆ ಕಾಲಿನಕ್ಕ ಬಂದ್ರೆ ತಬ್ಬಿಕೋಳ್ಳೋರ್ ಗಡವಿಲ್ಲ.

೨೩೭. ಆಲಕ್ಕೆ ಹೂವಿಲ್ಲ ಸಾಲಕ್ಕೆ ಕೊನೆಯಿಲ್ಲ.

೨೩೮. ಆಶೆಗೆ ಅಂತ್ಯವಿಲ್ಲ ಪಾಶಕ್ಕೆ ಕಡೆಯಿಲ್ಲ.

೨೩೯. ಆಸತ್ತು ಬೇಸತ್ತು ಅಕ್ಕನಮನೆಗ್ಹೋದ್ರೆ,
ಅಕ್ಕನ ಗಂಡ ಬಂದು ಅವುಕ್ ಅಂತ ಕೈಹಿಡ್ದ.

೨೪೦. ಆಸಾದಿಗ್ಯಾಕೆ ಆರಂಭ । ದಾಸಯ್ಯನಿಗ್ಯಾಕೆ ದನಕರ?

೨೪೧. ಆಳ್ ತಡೀಬೋದು । ಅರಸ್ ತಡೀಬೋದು,
ಹೇಲ್ ತಡಿಯೋನ್ಯಾರ್ ಹೆಡ್ಡ ಬಡ್ಡಿಮಗ ?
ಉಚ್ಚೆ ತಡಿಯೋನ್ಯಾರ್ ಹುಚ್ಚ ಬಡ್ಡಿಮಗ ?

೨೪೨. ಆಳ್ ನೋಡಿದ್ರೆ ಅಲಂಕಾರ । ಕಾಲು ನೋಡಿದ್ರೆ ಕ್ಷೋಬೆರೋಗ.

೨೪೩. ಆಳಾಗಿ ದುಡಿ : ಅರಸಾಗಿ ಉಣ್ಣು.

೨೪೪. ಆಳಾಗಬಲ್ಲವ ಅರಸಾಗಬಲ್ಲ.

೨೪೫. ಆಳು ಮಾಡಿದ್ದು ಹಾಳು । ಮಗ ಮಾಡಿದ್ದು ಮಧ್ಯಮ,
ತಾನು ಮಾಡಿದ್ದು ಉತ್ತಮ.

೨೪೬. ಆಳು ಕಾಳು ಇದ್ರೂತಾನೆ ಯಮ ಬಿಟ್ಟಾನೆ?

೨೪೭. ಆಳೋ ಅರಸಿಲ್ಲ ಕೇಳೋ ಪ್ರಧಾನಿ ಇಲ್ಲ ಅಂದಂಗೆ.

## ಇ

೨೪೮. ಇಕ್ಲಾರ್ದೋಳು ಹಿತ್ತಲ್‌ಗೋದ್ಲು,
ಕೂಡಲಾರ್ದೋಳು ಕ್ವಾಣೇಗೋದ್ಲು.

೨೪೯. ಇಕ್ಕಲಾರದ ಕೈ ಎಂಜಲು.

೨೫೦. ಇಕ್ಕಿದೋರ ಕಡೆ ಚಿಕ್ಕಬೀರಕ್ಕ.

೨೫೧. ಇಕ್ಕೊಂಡುಣ್ಣೋ ಜಾಗದಲ್ಲಿ ಕದ್ದುಕೊಂಡು ತಿಂದಂಗೆ.

೨೫೨. ಇಕ್ಕೋರೂ ಅಲ್ಲ । ನೆಕ್ಕೋರೂ ಅಲ್ಲ.

೨೫೩. ಇಂಗು ತೆಂಗು ಹಾಕುದ್ರೆ ಮಂಗನೂ ಅಡಿಗೆ ಮಾಡ್ತದೆ.

೨೫೪. ಇಟಗೊಂಡಾಕಿ ಇರೂತನಕ । ಕಟಕೊಂಡಾಕಿ ಕಡೀತನಕ.

೨೫೫. ಇಟ್ರೆ ತೊಟ್ರೆ ಪುಟ್ಟೀರೀನೂ ಚಂದ್ರಿ.

೨೫೬. ಇತ್ತಿತ್ತ ಬಾ ಅಂದ್ರೆ ಹೆಗಲ ಏರಿ ಕೂತ.

೨೫೭. ಇದ್ದ ಮಕ್ಕಳಿಗೆ ಕೂಳಿಲ್ಲ । ಇನ್ನೊಂದ್ ಕೊಡೊ ಸದಾಶಿವ, ಅಂದಂಗೆ.

೨೫೮. ಇದ್ದರೆ ಈ ಊರು । ಎದ್ದರೆ ಮುಂದ್ಲೂರು.

೨೫೯. ಇದ್ದೋರು ಮೂರು ಜನದಾಗೆ ಕದ್ದೋರ್ಯಾರು?



೨೬೦. ಇದ್ದಾಕಿ ನೋಡಿ ನೋಡಿ ಇಟ್ಟಳು,
ಇರದಾಕಿ ಉಟ್ಟು ಉಟ್ಟು ಹರಿದಳು.

೨೬೧. ಇದ್ದಾಗ ಹಿರಿಯಪ್ಪ । ಇಲ್ಲದಾಗ ಕಿರಿಯಪ್ಪ.

೨೬೨. ಇದ್ದಾಗ ನೂರ್ ಸಂತೆ । ಇಲ್ದಾಗ ಸುಮ್ನೆ ಕುಂತೆ.

೨೬೩. ಇದ್ದಂಗಿರೋ ಸಿದ್ದೇಸೂರಾ.

೨೬೪. ಇದ್ದುದ್ದ ಇದ್ದಂಗೆ ಹೇಳಿದ್ರೆ ಎದ್ದುಬಂದು ಎದೆಗೊದ್ದ.

೨೬೫. ಇದ್ದದ್ದು ಒಂದಗಳು ಗಂಜ್ಯಾಗೆ ಹೋಯ್ತು.

೨೬೬. ಇದ್ದೂರಿಗೆ ಹೆಣ್ಣು ಕೊಡಲೂಬಾರದು ತರಲೂಬಾರದು.

೨೬೭. ಇದ್ದೂರಾಗೆ ಮುದ್ದೆ ಉಣ್ಣೋನು । ಸಿದ್ದಿಪುರಕ್ಹೋಗಿ ಗೆದ್ಲು ತಿಂದ.

೨೬೮. ಇಲ್ಲದ್ದ ಆಡಿ । ಇದ್ದ ಗೌರವವೂ ಹೋಯ್ತು.

೨೬೯. ಇಪ್ಪತ್ತಕ್ಕೆ ಹಾದರ । ಎಪ್ಪತ್ತಕ್ಕೆ ಬುದ್ಧಿ.

೨೭೦. ಇಬ್ಬರ ಜಗಳ ಮೂರನೆಯವನಿಗೆ ಲಾಭ.

೨೭೧. ಇಬ್ಬರ ಕೂಡಿದವಳು ಇಬ್ಬಂದಿ.

೨೭೨. ಇಬ್ಬರಿದ್ದರೆ ಏಕಾಂತ । ಮೂವರಿದ್ದರೆ ಲೋಕಾಂತ.

೨೭೩. ಇಬ್ಬೇಳೆ ಹಸಿಟ್ಟು, ಗೊಬ್ಬಳಿ ಪದಾರ್ಥ,
ಕಚ್ಚೆ ಕಳೀಸ್ಕೊಡದು ಉಚ್ಚೆ ಉಯಿಸ್ಕೊಡದು.

೨೭೪. ಇರಲಾರದೆ ಇಲಿ ಔಷಧಿ ಕುಡಿದು । ಮಕ್ಕಳ ಹೇಲ ಕದರಿ ಕುಡದಂಗೆ.

೨೭೫. ಇರಾಕ ಜಾಗ ಕೊಟ್ರೆ ಮನೆಯೆಲ್ಲಾ ನಂದೇ ಅಂತಿತ್ತಂತೆ.

೨೭೬. ಇರೂಗಂಟ ಹಿರಿಯಬ್ಬ । ಇಲ್ದೆ ಇದ್ದಾಗ ತಿರಿಹಬ್ಬ.

೨೭೭. ಇಲ್ಲದ ಬದುಕು ಮಾಡಿ ಇಲಿಗೆ ಚಣ್ಣ ಹೊಲಿಸಿದರು.

೨೭೮. ಇಲ್ಲದವನಿಗೆ ಒಂದು ಚಿಂತೆಯಾದರೆ । ಇದ್ದವನಿಗೆ ನಾನಾ ಚಿಂತೆ.

೨೭೯. ಇಲ್ಲದ್ದಕ್ಕೆ ಬಗಸ್ದ ನನ ಗಂಡ ಇಲಿ ಬಾಡ.

೨೮೦. ಇಲ್ಲದವ ಹಸಿದು ಸಾಯೋದಿಲ್ಲ । ಇದ್ದವ ಉಂಡು ಸಾಯೋದಿಲ್ಲ.

೨೮೧. ಇಲ್ಲದಾಗ ಹಲ್ಲುಬೀರನೆ ಗಂಡ.

೨೮೨. ಇಲಿ ಆಡ್ದ ಕಣಜ ಹಾಳು । ಪಡಿ ಆಡ್ದ ಮನೆ ಹಾಳು.

೨೮೩. ಇಲಿಗೆ ಹೆದರಿ ಹುಲಿಬಾಯಿಗೆ ಬಿದ್ದ.

೨೮೪. ಇಲಿ ಹೋಯ್ತು ಅಂದ್ರೆ । ಹುಲಿ ಹೋಯ್ತು ಅಂದ್ರು.

೨೮೫. ಇವೊತ್ತಿನ ಸಿರಿ ನಾಳೆ ಇರೋದಿಲ್ಲ । ಮಾಡ್ಲಾ ಚಿಕ್ಕವ್ವ ಮರಹಳ್ಳ.

೨೮೬. ಇಳ್ಳುಟಿ ಬುಟ್ಕೊಂಡ್ ಈರುಳ್ಳಿ ಮಾರಾನ್ಯಾರು ಅನ್ನೋವತ್ಗೆ,
ಇವ್ನೆ ಕಾಣೆ ನನ್ಮಗಳ ಗಂಡ ಅಂದ್ಲು.

## ಈ

೨೮೭. ಈಗ ಕಡ, ಕಡೆಗೆ ಕೊಡ.

೨೮೮. ಈಚಲುಹಣ್ಣಿನ ಕಾಲಕ್ಕೆ ಗುಳ್ಳೇನರಿಗೆ ಇಬ್ಬರು ಹೆಂಡ್ತೀರು.

೨೮೯. ಈಚಲು ಮರದ ಕೆಳಗೆ ಮಜ್ಜಿಗೆ ಕುಡದಂಗೆ.

೨೯೦. ಈಚೆ ಕೇರೀಲಿ ಉಗುದರೆ ಆಚೆ ಕೇರೀಲಿ ಹೊಸಾಳು.

೨೯೧. ಈಚೆ ಕೇರೀಲಿ ನರಿಹೋಯ್ತು ಅಂದ್ರೆ। ಆಚೆಕೇರೀಲಿ ಕರಡಿಹೋಯ್ತು ಅಂತಾರೆ.

೨೯೨. ಈಜು ಮರೀಬ್ಯಾಡ । ಜೂಜು ಕಲೀಬ್ಯಾಡ.

೨೯೩. ಈಗಿನ್ ಬುದ್ಧಿ ಆಗಿದ್ರೆ ತಂದೋಳ್ಯಾಕೆ ತೌರುಗ್ ಕಳಸ್ತಿದ್ದೆ?

೨೯೪. ಈತನಾಗಲಿ ಆತನಾಗಲಿ ಮಾತು ಒಂದಿರಬೇಕು.

೨೯೫. ಈ ಮಾರೆ ಹೊತ್ತೋಳ್ ದೇವ್ರುರ್ ಮಾಡಾಳೆ!

೨೯೬. ಈರುಳ್ಳಿ ನೀರಲ್ಲಿ ತೊಳೆದರೆ ನಾರೋದು ತಪ್ಪೀತೆ?

೨೯೭. ಈಲಿ ರುಚಿ ನೋಡ್ದೋನಿಗೆ ತೊಳ್ಳೆ ಸಪ್ಪೆ.

೨೯೮. ಈಶ್ವರ ಧರಿಸೋ ಹಾವು ಅವನ ಮಗ ಹತ್ತೋ ಇಲಿ ತಿಂದ ಹಾಗೆ.

## ಉ

೨೯೯. ಉಗುರಲ್ಲಿ ಹೋಗೋದಕ್ಕೆ ಕೊಡ್ಲಿ ತಗೊಂಡ್ರಂತೆ.

೩೦೦. ಉಗುದ್ರೂ ನನ್ನ ಉಣ್ಣೋಕೆ ಕರದ್ರು ಅಂದಂಗೆ.

೩೦೧. ಉಗುಳು ನುಂಗಿದರೆ ಹೊಟ್ಟೆ ತುಂಬೀತಾ?

೩೦೨. ಉಚ್‌ದೋನ್ ಕೆಟ್ಟ । ಒಡ್‌ದೋನ್ ಬದುಕ್ದ.



೩೦೩. ಉಚ್ಚೆ ಕುಡುದ್ರೂ ನಿನ್ನಿಚ್ಚೇಲಿ ಕುಡಿ,
ದೇಶಾಂತ್ರ ಹೋದ್ರೂ ನಿನ್ನ ಸ್ವತಂತ್ರದಿ ಹೋಗು.

೩೦೪. ಉಚ್ಚೇಲಿ ಮೀನು ಹಿಡದಂಗೆ.

೩೦೫. ಉಡಕ್ಕಿಲ್ಲದವ ಮೈಲಿಗೆಗೆ ಹೇಸ । ಉಂಬಕ್ಕಿಲ್ಲದವ ತಂಗಳಿಗೆ ಹೇಸ.

೩೦೬. ಉಣ್ಣೋಗಂಟ ಬಾಳೆ ಹಾಕ್ತಿನಿ, ಬದ್ನೆ ಹಾಕ್ತಿನಿ,
ಉಂಡಾದ್ಮೇಲೆ ನನ್ನ ಗಂಡೆ ಹಾಕ್ತಿನಿ.

೩೦೭. ಉಣ್ಣಾದು ಊರ ಗೌಡರ ಮನೆ । ಅರಸದು ಹಾರುವಯ್ಯನ ಮನೆ.

೩೦೮. ಉಣ್ಣೋದು ಒಳಕಲ್ ದಪ್ಪ । ಮುರಿಯೋದು ಮೆಣಸಿನಕಾಯ್ ದಪ್ಪ.

೩೦೯. ಉಣ್ಣೋದು ಭಂಗದ ಕೂಳು । ಆಡೋದು ಅರಸ್ನ ಮಾತು.

೩೧೦. ಉಣ್ಣೋದೆಲ್ಲ ಮಾವಾಚಾರ । ಕೊಡೋದೆಲ್ಲ ಲೆಕ್ಕಾಚಾರ.

೩೧೧. ಉಣ್ಣೋ ಬಾಯಿಗೆ ಮಣ್ಣು ಹಾಕಿದಂಗೆ.

೩೧೨. ಉಣ್ಣೋಕೆ ಹುಡುಗರು ಚೆಂದ । ಮಾತಾಡೋಕೆ ಮುದುಕರು ಚೆಂದ.

೩೧೩. ಉಣ್ಣೋಕೆ ಮೊನಗಾರ । ಗೆಯ್ಮೋಕೆ ಕೂಮ.

೩೧೪. ಉತ್ತಮನು ಎತ್ತ ಹೋದರೂ ಶುಭವೇ.

೩೧೫. ಉತ್ತು ಬಂದ ಒಕ್ಕಲಿಗನ ಕೆಣಕಬೇಡ । ಹಸಿದ ಹಾರುವನ ಕೆಣಕಬೇಡ.

೩೧೬. ಉತ್ತುವಾಗ ಬಿತ್ತುವಾಗ ಊರ್‍ಮುಂದಿದ್ರೆ,
ಕುಯ್ಯುವಾಗ ಕಟ್ಟುವಾಗ ಸರಾಗ.

೩೧೭. ಉತ್ತ ನೆಲದಲ್ಲಿ ಓಡಿಯೋ । ಕೊಟ್ ಮನೇಲಿ ಬಾಳಿಯೋ?

೩೧೮. ಉತ್ತು ಬಾಳುವವನ ಬದುಕು ಎತ್ತಲೂ ಲೇಸು.

೩೧೯. ಉತ್ತೋನ ಹೊಲಾ ಬಿತ್ತೋನು ಕೆಡಿಸಿದ.

೩೨೦. ಉದರಕ್ಕೋಸ್ಕರ ಸೆದೆಯಾದರೂ ಹುಡುಕಬೇಕು.

೩೨೧. ಉದ್ರಿ ಸೂಳೆ ಊರೆಲ್ಲಾ ತಿರುಗಿದರೂ ಒಬ್ರೂ ಸಿಗಲಿಲ್ಲವಂತೆ.

೩೨೨. ಉದ್ದು ಉಬ್ಬಿದರೆ ಮದ್ದಳೆಯಾದೀತೆ?

೩೨೩. ಉದ್ಯೋಗ ಇಲ್ಲದ ಸೂಳೆ ಮುದ್ದೇಬಿಹಾಳಕೆ ಬಂದಳು.

೩೨೪. ಉಪಕಾರಿಲ್ಲದ ಹೆಣ । ಹೊತ್ತವರ ಮೇಲೆ ಹೇತಿತು.

೩೨೫. ಉಪಕಾರ ಇಲ್ಲದ ಹೆಣಾ । ಎಣ್ಣೆಲ್ದೆ ಗೊಂದ್ಲು ಹಾಕ್ತಿತ್ತಂತೆ.

೩೨೬. ಉಬ್ಬೆ ಮಳೆ ಅಬ್ಬೆ ಹಾಲು.

೩೨೭. ಉಪಾಯ ಮೇಲೋ । ಊರುಗೋಲು ಮೇಲೋ.

೩೨೮. ಉಪ್ಪಿಕ್ಕೋನ ಮುಪ್ಪಿನ ತನಕ ನೆನಿ.

೩೨೯. ಉಪ್ಪು ತಿಂದವ ನೀರು ಕುಡಿಲಿಕ್ಕೇ ಬೇಕು.

೩೩೦. ಉಪ್ಪು ತಿಂದವನ ಮನಸ್ಸು ತುಪ್ಪದಂಗೆ ಇರಬೇಕು.

೩೩೧. ಉಬ್ಬೆ ಎಷ್ಟು ಉಬ್ಬಿ ಹೂದರೂ । ಗುಬ್ಬಚ್ಚಿ ಪುಕ್ಕ ನೆನಿಯೋದಿಲ್ಲ.

೩೩೨. ಉರಿದೋನು ಊರ್ ಬಿಟ್ಟ । ಮೆರೆದೋನು ಮನೆ ಬಿಟ್ಟ.

೩೩೩. ಉಲಕೋಟಿ ಕೈಯ್ಯಾಗ ಗಿಲಕೀ ಕೊಟ್ಟರ,
ಕುಲಕರ್ಣಿ ಹೆಣ್ತೀಗಿ ಬಸರು ಮಾಡಿದ.

೩೩೪. ಉಸಿರು ಹಿಡಿದರೆ ಡೊಳ್ಳು ಬೆಳಿಯೂದಿಲ್ಲ.

೩೩೫. ಉಳಿ ಕೊಡ್ತಿ ಇಲ್ಲದ ಬಡಗಿ ಬೆಳ್ಳಾಗೆ ನೆಲ ತೋಡ್ಕೊಂಡ್ ಕೂತ.

೩೩೬. ಉಳಿ ಸಣ್ಣದಾದ್ರು ಬೆಟ್ಟ ಸೀಳುತ್ತೈತೆ.

೩೩೭. ಉಳೋಎತ್ತು ಬರದೇಹೋಯ್ತು ಅಂತ,
ಊಟ ತಂದೋಳಿಗೆ ಹೊಡೀತಿದ್ನಂತೆ.

೩೩೮. ಉಳೋದು ಬಿಟ್ಟು ನನ್ನ ಕಳಿಸಿಕೊಡು ಬಾ ಅಂದ್ನಂತೆ.

೩೩೯. ಉಳೋನಿಗೆ ಹೊಲ । ಆಳೋನಿಗೆ ಹೆಂಡ್ರು.

೩೪೦. ಉಂಟಾದ ಮಾತು ಊರ್ಮುಂದೆ ಹೇಳಿದರೆ,
ನೆಂಟಾದ ಹೈದನಿಗೆ ಕಿಡಿ ಕೋಪ.

೩೪೧. ಉಂಟು ಮಾಡಿದ ದೇವರು ಊಟವ ಕೊಡಲಾರನೋ?

೩೪೨. ಉಂಡ ತಾಟಿಗೆ ಉಗದಂಗೆ.

೩೪೩. ಉಂಡ ಬಾಯಿ ಊಟ ಬೇಡ್ತು । ಮುಂಡೆ ಬಾಯಿ ತಿಂಡಿ ಬೇಡ್ತು.

೩೪೪. ಉಂಡ ಬಾಯಿಗೆ ಎಲೆ ಚಂದ । ದುಂಡುದೋಳಿಗೆ ರವಿಕೆ ಚಂದ.

೩೪೫. ಉಂಡ ಮನೆ ಜಂತಿ ಎಣಿಸೋನು.

೩೪೬. ಉಂಡ ಮನೆಗೆ ಎರಡು ಬಗೆಯಬೇಡ.



೩೪೭. ಉಂಡ ಮನೆಗೆ ಊಸ್ಬುಟ್ಟು । ತುಂಬಿದ ಮನೆಗೆ ಕಲ್ಲಾಕ್ದಂಗೆ.

೩೪೮. ಉಂಡರೆ ಉಬ್ಬಸ । ಹಸಿದರೆ ಸಂಕಟ.

೩೪೯. ಉಂಡವನಿಗೆ ಊಟ ಬೇಡ । ಗುಂಡುಕಲ್ಲಿಗೆ ಎಣ್ಣೆ ಬೇಡ.

೩೫೦. ಉಂಡವರೇನು ಬಲ್ಲರು ಉಪವಾಸವಿದ್ದವರ ಸುದ್ದಿ.

೩೫೧. ಉಂಡಿದ್ದೇ ಉಗಾದಿ । ಮಿಂದಿದ್ದೇ ದೀಪಾವಳಿ.

೩೫೨. ಉಂಡು ಉಟ್ಟು, ಗೆಂಡೆರೋಗವೇ?

೩೫೩. ಉಂಡೂ ತಿಂದೂ ನಿಂತಿದ್ದವಳ ಕೆಡವಿಕೊಂಡ.

೩೫೪. ಉಂಡೂಹೋದ ಕೊಂಡೂಹೋದ.

೩೫೫. ಉಂಡೋಗೊ ಮೂಳ ಅಂದ್ರೆ । ಯಾವ ಹೊಲದ ಜ್ವಾಳ ಅಂದನಂತೆ.

೩೫೬. ಉಂಡೋರ್ಗೆ ಊಟ ಹಾಕಬ್ಯಾಡ । ಬೋಳದಲೆಗೆ ಎಣ್ಣೆ ಹಾಕಬ್ಯಾಡ.

## ಊ

೩೫೭. ಊಟಕ್ಕಿಲ್ಲದ ಉಪ್ಪಿನಕಾಯಿ ಕತ್ತೆ ಶ್ಯಾಟಕ್ಕೂ ಬೇಡ.

೩೫೮. ಊಟಕ್ಕೆ ಮುಂದಿರು । ಜಗಳಕ್ಕೆ ಹಿಂದಿರು.

೩೫೯. ಊಟದಲ್ಲಿ ನೀಟಾಗಿರಬೇಕು.

೩೬೦. ಊಟ ಸಿಗೋದು ಮುಖದ ಪುಣ್ಯ । ಸೀರೆ ಸಿಗೋದು ಉಡೋರ ಪುಣ್ಯ.

೩೬೧. ಊದೋದ್ನ ಕೊಟ್ಟು ಒದರೋದ್ನ ತಕ್ಕೊಂಡಂಗೆ.

೩೬೨. ಊರ ಅಕ್ಕಿ ಊರ ಬ್ಯಾಳಿ : ಉಂಡುಹೋಗೆ ಮಾರವ್ವ.

೩೬೩. ಊರ್ ಕಟ್ಕೊಂಡ್ ನಿನಗೇನು । ಏರ್ ಕಟ್ಕೊಂಡು ಹೊಲ ಉಳು.

೩೬೪. ಊರ ತುಂಬ ಗಂಡರು । ಉಡಲಿಕ್ಕೆ ಸೀರೆ ಇಲ್ಲ.

೩೬೫. ಊರ ನೋಡಿ ಬಾ ಅಂದ್ರೆ । ತೋರಣ ಕಟ್ಟಿ ಬಂದ್ರಂತೆ.

೩೬೬. ಊರಮಕ್ಕಳು ಊರಾಗಾಡುದ್ರೆ,
ಶಿವಲಿಂಗಪ್ಪನ ಮಕ್ಳು ಸೀರ್ಯಾಗಾಡಿದ್ರು.

೩೬೭. ಊರ ಮೇಲೆ ಊರು ಬಿದ್ರೆ । ಶ್ಯಾನುಭೋಗನ ಶ್ಯಾಟಕ್ಕೇನು?

೩೬೮. ಊರಿಗೆ ಅರಸಾದ್ರೂ ತಂದಿಗೆ ಮಗ.

೩೬೯. ಊರಿಗೆ ಊಟದ ಚಿಂತೆ। ನಾಯಿಗೆ ಎಂಜಲೆಲೆ ಚಿಂತೆ.

೩೭೦. ಊರಿಗೆ ಕುಳ ಅಲ್ಲ । ಮಸಾಣಕ್ಕೆ ಹೆಣ ಅಲ್ಲ.

೩೭೧. ಊರಿಗೆ ಗೌಡನಾದರೆ ನನಗೂ ಗೌಡನೆ?

೩೭೨. ಊರಿಗೆ ಗೌಡನ ಮನೆಯಾದರೆ ತೋಳನಿಗೆ ಏನು?

೩೭೩. ಊರಿಗೆ ನೂರು ಹಂದಿ ಇರಬೇಕು । ಕೇರಿಗೊಬ್ಬ ನಿಂದಕನಿರಬೇಕು.

೩೭೪. ಊರಿಗೆ ಬಂತು ಉಗಾದಿ। ಅಗಸಗ ಬಂತು ತಗಾದಿ.

೩೭೫. ಊರಿಗೆ ಬಂದೋಳು ನೀರಿಗೆ ಬರ್ದೆ ಇರ್ತಾಳಾ?

೩೭೬. ಊರಿಗೆ ಸುಭೇದಾರನಾದ್ರೆ ಸಂತೆಗೆ ಸರದಾರನ?

೩೭೭. ಊರಿಗೆಲ್ಲಾ ಒಂದು ದಾರಿಯಾದರೆ। ಊಸುಮಾರಿಗೆ ಒಂದು ದಾರಿ.

೩೭೮. ಊರಿಗೆಲ್ಲಾ ಉಗಾದಿ। ನನ್ನ ಸಾಲಕ್ಕೆ ಬಂತಲ್ಲ ತಗಾದಿ.

೩೭೯. ಊರಿಗೆ ಬಂದ ಮಾರಿ ಉಂಡಲ್ಲದೆ ಹೋಗದು.

೩೮೦. ಊರಿದ್ದ ಕಡೆ ಹೊಲಗೇರಿ.

೩೮೧. ಊರಿನ ಬಡತನ ಅಗಸನಿಗೆ ಗೊತ್ತು,
ಊರಿನ ಸಿರಿತನ ಅಕ್ಕಸಾಲಿಗನಿಗೆ ಗೊತ್ತು.

೩೮೨. ಊರು ಉಪಕಾರ ಬಲ್ಲದೆ। ಹೂ ಸಿಂಗಾರ ಬಲ್ಲದೆ?

೩೮೩. ಊರು ಒಳ್ಳೇದು : ಉತ್ಪಾದಕರ ಕಾಟ। ನೀರು ಒಳ್ಳೇದು : ಮೊಸಳೆ ಕಾಟ.

೩೮೪. ಊರ್‌ಗೆ ಪಟೇಲಾದ್ರೆ ಸಂತೆಗೆ ಯಾವೂರ್ ಶ್ಯಾಟ?

೩೮೫. ಊರುಗ್ ಬರುವಾಗ ಒಬ್ ನಂಟ್ರು,

ರುಗ್ ಬಂದಮ್ಯಾಲೆ ಎಲ್ಲಾ ನಂಟ್ರು.

೮೬. ಊರುಗ್ ಮಾಡ್ದ ಉಪಕಾರ। ಹೆಣೇಗ್ ಮಾಡ್ದ ಸುಂಗಾರ, ಎರಡೂ ಒಂದೇ.

೩೮೭. ಊರು ಹೋಗು ಅಂತದೆ। ಕಾಡು ಬಾ ಅಂತದೆ.

೩೮೮. ಊರೆಲ್ಲಾ ಉಗಿದ್ರೂ ಮೂವರೇ ಸೈ ಉಗ್ದೋರು ಅಂದ.

೩೮೯. ಊರೆಲ್ಲಾ ಉಪ್ಪಾರ ತರುವಾಗ,
ನಮ್ಮನೆ ಬಡ್ಡಿ ಮೀಸಲ್ ನೀರಿಗೆ ಹೋದಂಗೆ.



೩೯೦. ಊರೆಲ್ಲ ನೆಂಟರು ಉಣ್ಣಕಿಕ್ಕೋರೊಬ್ಬರಿಲ್ಲ.

೩೯೧. ಊರೆಲ್ಲಾ ಹೊಗೋಳಂತೆ। ಗಾಣಿಗರಹಟ್ಟಿ ಕುರುಹು ಕಾಣಳಂತೆ.

೩೯೨. ಊರ್ನೇ ಬುಟ್ಟೋನಿಗೆ ನೀರಿನ ಹಂಗೇನು?

೩೯೩. ಊರೇಲಿ ಮದ್ವೆ ಆಯ್ತದೆ ಅಂದ್ರೆ । ವಳಕಲ್ಲೆದ್ದಿ ಕುಣೀತಿತ್ತಂತೆ.

೩೯೪. ಊರೊಳ್ಳೆದೆ ಮಗಳೆ ಅಂದ್ರೆ। ಬಾಯೊಳ್ಳೆದಾದ್ರೆ ಊರೂ ಒಳ್ಳೇದು, ಅಂದ್ನಂತೆ.

೩೯೫. ಊರ್ಗ್ಗೋದ್ ಹೊನ್ನೇಗೌಡ ಮದುವೆಯಾದ ಮೂರು ವರ್ಷಕ್ಕೆ ಬಂದ್ನಂತೆ.

೩೯೬. ಊರ್ನ್ನೋಡೊ ಹುಚ್ಚನನ್ಮಗನೆ ಅಂದ್ರೆ,
ಸೂರ್ನ್ನೋಡ್ತಿನಿ ಸ್ವಲ್ಪ ತಡಿ ಅಂದ .

೩೯೭. ಊಳೋದು ಬಿತ್ತೋದು ನಮ್ಮಿಚ್ಚೆ । ಆಗೋದು ಹೋಗೋದು ದೇವರಿಚ್ಛೆ.

## ಋ

೩೯೮. ಋಜು ಮಾರ್ಗಕ್ಕೆ ಋಗ್ವೇದ ಓದಬೇಕಾಗಿಲ್ಲ.

## ಎ

೩೯೯. ಎಕ್ಕಡ ಕಾಲ ಕಚ್ಚಿತು ಅಂತ ಅದ ನಾವು ಕಚ್ಚಕಾದೀತೆ?

೪೦೦. ಎಣ್ಣೆ ಕಂಡ ಕಡೆ ಮಗ ಹೆರೋ ಜನ.

೪೦೧. ಎಣ್ಣೆ ಬರುವಾಗ ಗಾಣ ಮುರೀತು ಅಂತ.

೪೦೨. ಎಣ್ಣೆ ಬಂದಾಗ ಕಣ್ಮುಚ್ಕೊಂಡಂತೆ.

೪೦೩. ಎತ್ತ ಹೋದ್ರೂ ಮುತ್ತಲ ಮರಕೆ ಮೂರೇ ಎಲಿ.

೪೦೪. ಎತ್ತಾಡ್ದ ನಾಯಿ ಮೊಲ ಕಚ್ಚೀತೆ?

೪೦೫. ಎತ್ತಿಕೊಂಡು ಹೋಗೋರು ಇದ್ದರೆ ಸತ್ತ ಹಾಗೆ ಬಿದ್ದೇನು.

೪೦೬. ಎತ್ತಿಗೆ ಜ್ವರ ಬಂದ್ರೆ ಎಮ್ಮೆಗೆ ಬರೆ ಹಾಕ್ದಂಗೆ.

೪೦೭. ಎತ್ತಿನ ಕೂಡ ನೊಣಾನು ಗುಡ್ಡ ಏರಿತು.

೪೦೮. ಎತ್ತಿನ ಮುಂದೆ ತೆಂಗಿನ ಕಾಯಿ ಒಡೆದಂಗೆ.

೪೦೯. ಎತ್ತಿಲ್ಲದೋನಿಗೆ ಎದೆ ಇಲ್ಲ । ಎದೆ ಇದ್ದೋನಿಗೆ ಅದೇ ಇಲ್ಲ.

೪೧೦. ಎತ್ತಿಲ್ಲದೋನಿಗೆ ಕೋಣನೇ ಸಂಜೀವ.

೪೧೧. ಎತ್ತು ಈಯ್ತು ಅಂದ್ರೆ ಕೊಟ್ಟಿಗೆಗೆ ಕಟ್ಟು ಅಂದ.

೪೧೨. ಎತ್ತು ಕರ ಹಾಕ್ತು ಅಂದರೆ ಕೊಟ್ಟಿಗೇಲಿ ಕಟ್ಟು ಅಂದ.

೪೧೩. ಎತ್ತು ಉತ್ತಮೇಲೆ ತಿಳೀತು । ಹೆಣ್ಣು ಹೆತ್ತಮೇಲೆ ತಿಳೀತು.

೪೧೪. ಎತ್ತು ಏರಿಗೆಳೀತು ಕೋಣ ನೀರಿಗೆಳೀತು.

೪೧೫. ಎತ್ತು ಎಳಸಾದರೆ ಮುದುಕ ಹೊಡಿಬೇಕು,
ಮುದಿಯಾದರೆ ಹುಡುಗ ಹೊಡಿಬೇಕು.

೪೧೬. ಎತ್ತಿನ ಹುಣ್ಣು ಕಾಗೆ ಬಲ್ದೆ । ಅದು ಬಲ್ದು ಕಿತ್ಕೊಂಡ್ ತಿನ್ನೂದ !

೪೧೭. ಎತ್ತೋರಿಲ್ಲದ ಮಕ್ಕಳ್ನ ಹೆತ್ತೇನು ಫಲ ?
ಮುಟ್ಟೋರಿಲ್ಲದ ದನಗಳನ್ನ ಕಟ್ಟೇನು ಫಲ ?

೪೧೮. ಎದ್ದಾಗ ಜುಟ್ಟು ಹಿಡಿ । ಬಿದ್ದಾಗ ಕಾಲು ಹಿಡಿ.

೪೧೯. ಎದ್ದೂ ಮಾಡ । ನೀದ್ದೆನೂ ಕೊಡ.

೪೨೦. ಎದೆಗಾರ ಗೋಣಗಲ್ಲ । ಆಯ್ಗಾರ ಮುಣಗಲ್ಲ.

೪೨೧. ಎಮ್ಮೆ ಕಾಯೋನ್ಗೆ ಹೇಲಾಟ ಹತ್ಕೊಂಡ್ರೆ,
ಕಳ್ಳೆಮ್ಮೆಗೆ ನಾಕ್ಕಾಲು ಬಂದಂಗೆ.

೪೨೨. ಎಮ್ಮೆಗೆ ಎರಡು ಕೋಡು । ಹೆಮ್ಮೆಗೆ ಎಂಟು ಕೋಡು.

೪೨೩. ಎಮ್ಮೆಯ ಮೇಲೆ ಮಳೆಗರೆದ ಹಾಗೆ.

೪೨೪. ಎಮ್ಮೆಯಂಥ ಬಡ್ಡಿಯ ಯಾಕ್ತಂದೆ ಅಂದ್ರೆ,
ಯಾಳ್ಳೇವು ತಪ್ಪಾಗ ಕುಯ್ಯೋಕೆ ಅಂದನಂತೆ.

೪೨೫. ಎರಕ ಹೊಯಿದರೂ ನರಕ ತಪ್ಪದು.

೪೨೬. ಎರಡು ಕಣ ಕಾದು ದಾಸಯ್ಯ ಕೆಟ್ಟ.

೪೨೭. ಎರಡು ಕೈಯೂ ಕೂಡುದ್ರೆ ಚಪ್ಪಾಳೆ.

೪೨೮. ಎರಡು ದೋಣಿ ಮೇಲೆ ಕಾಲಿಟ್ಟಂಗೆ.

೪೨೯. ಎರವು ಸಿರಿಯಲ್ಲ । ಬಾವು ಡೊಳ್ಳಲ್ಲ, ನೆರೆಯಕ್ಕನ ಗಂಡ ಬಾವಲ್ಲ.

೪೩೦. ಎರೆ ಹೊಲ ಇರಬೇಕು । ಕರೆ ಹೆಂಡ್ತಿ ಇರಬೇಕು.

೪೩೧. ಎಲ್ಲ ಬಲ್ಲಪ್ಪ । ಕೇಳುದ್ರೆ ಕಲ್ಲಪ್ಪ.



೪೩೨. ಎಲ್ಲಮ್ಮನ ಜಾತ್ರಾಗೆ ಅಲ್ಲಾ ಸಾಬೀನೂ ಉಧೋ ಅಂದ.

೪೩೩. ಎಲ್ಲರ ಮುಂದೆ ಹಿರಿಯ । ಹೆಡ್ತಿ ಮುಂದೆ ಹಲ್ಕಿರಿಯ.

೪೩೪. ಎಲ್ಲರೂ ಗೋಕರ್ಣಕ್ಕೆ ಹೋದರೆ,
ಗೋಕರ್ಣದವರು ಗಾಳಕ್ಕೆ ಹೋದರು !

೪೩೫. ಎಲ್ಲಾ ಬಿಟ್ಟ : ಭಂಗಿ ನೆಟ್ಟ !

೪೩೬. ಎಲ್ಲಾರ ಮನೆ ದೋಸೆ ತೂತು.

೪೩೭. ಎಲ್ಲಾರೂ ರಾಜರಾದ್ರೆ ಪಲ್ಲಕ್ಕಿ ಹೊರೋರ್ಯಾರು ?

೪೩೮. ಎಲ್ಲಿ ಬಾವ ಅಂದ್ರೂ ಆಲೆಮನೇಲಿ ಬಾವ ಅನ್ನಬ್ಯಾಡ !

೪೩೯. ಎಲುಬಿಲ್ಲದ ನಾಲಿಗೆ ಎತ್ಲಾಗಾದ್ರು ತಿರುಗ್ತದೆ.

೪೪೦. ಎಲೆ ಎತ್ತೊ ಗುಂಡ ಅಂದ್ರೆ ಉಂಡೋರೆಷ್ಟು ಜನ ಅಂದ.

೪೪೧. ಎಲೆಗೆ ಕಾಯಿ ಮರೆ । ಕಾಯಿಗೆ ಎಲೆ ಮರೆ.

೪೪೨. ಎಳೀಲಾರದ ಎತ್ತು ಮೆಳೆ ಮ್ಯಾಲೆ ಬಿತ್ತು.

೪೪೩. ಎಷ್ಟೇ ನೀದ್ರೂ ನಾಯಿ ಬಾಲ ಡೊಂಕೇ.

೪೪೪. ಎಂಜಲಿಗೆ ಹೇಸದವನು ತಂಗಳನ್ನ ಬಿಟ್ಟಾನೆ?

೪೪೫. ಎಂಜಲು ಏಳು ನೆರೆ ಕೆಡುಸ್ತು.

೪೪೬. ಎಂಟು ದಿನದ ತಂಬ್ಳ ಗಂಟ್ಲೇಲಿ ಮಡೀಕೊಂಡು,
ನಂಟ್ರು ಬಂದಿನ ಕೆಂಪಗೆ ಮಾಡ್ಕೊಂಡಂಗೆ.

೪೪೭. ಎಂತೆಂಥ ದೇವರಿಗೇ ಅಂತರಾಟ । ಕಾಲುಮುರುಕ ದೇವರಿಗೆ ಕೈಲಾಸವೇ?

೪೪೮. ಎಂದೂ ಇಲ್ಲದೋನು ಎಲೆತ್ಬಾಟ ಮಾಡಿ । ಒಂದೂ ಇಲ್ಲದಂಗೆ ಚಿಗುಟುಕೊಂಡ.

೪೪೯. ಎಂದೂ ಇಲ್ಲದ ಮಾಣಿ ಅಮಾಸೆ ದಿನ ಓದಾಕೆ ಕೂತ.

## ಏ

೪೫೦. ಏಕ್ ಶಾಸ್ತ್ರಿ ಮನೇಲಿ ಏಳು ಜನ ಮುಂಡೇರು.

೪೫೧. ಏಕಾದಶಿ ಮನೆಗೆ ಶಿವರಾತ್ರಿ ಬಂದಂಗೆ.

೪೫೨. ಏಡಿ ಇದ್ದ ಕೆರೆ ಹಾಳು । ಕೋಡುಗ ಇದ್ದ ವನ ಹಾಳು.

೪೫೩. ಏನು ಗೌಡ ಅಂದರೆ ಕಂಬಳಿಗೆ ಮೂರು ಹಣ ಅಂದ.

೪೫೪. ಏನೂ ಇಲ್ಲದವ ಎದುಕೂ ಹೇಸೂದಿಲ್ಲ.

೪೫೫. ಏನೆ ಬೋರಿ ಓಡಾಟ ಅಂದ್ರೆ,
ಶ್ಯಾನುಬೋಗರ ಮಲ್ಲಿ ದೇವರೂಟ ಅಂದ್ಲಂತೆ.

೪೫೬. ಏರ್ ಕಟ್ಕೊಂಡ್ ಹೊಲ ಉಳು ಅಂದ್ರೆ । ಕಾಲ್ ಕಟ್ಕೊಂಡ್ ಅಳ್ತಿದ್ದ.

೪೫೭. ಏಳನಾರ್ದ್ದ ನನ್ನ ಘಟವೆ । ನೀ ಎಳಂದೂರ್‌ಗೋಗೋದು ದಿಟವೆ?

೪೫೮. ಏಳಲಾರದ ಅಜ್ಜೀಗೆ ಚೇಳು ಕಡೀತು.

೪೫೯. ಏಳಲಾರದೋನಿಗೆ ಏಳುಜನ ಹೆಂಡ್ರು । ಮ್ಯಾಲೊಬ್ಬಳು ಸೂಳೆ.

೪೬೦. ಏಳ್ ಸತಿ ಉಂಡು ಎಳ್ಳುರುಕೊಂಡ್ ತಿಂದ.

೪೬೧. ಏಳು ಮದ್ಹಾನದೆಲ್ಲೆದ್ದೋಳಿಗೆ ಹೇಲೋಕೆ ತಾವು ಸಿಗದು.

೪೬೨. ಏಳು ಮೆಳೆ ಸೊಪ್ಪು ಮೇದೋಳು ಯಾತಕ್ಕೆ ಹೇಸಳು?

೪೬೩. ಏಳೋದು ಏಳು ಮದ್ದೀನ । ತರೋದು ತಂಗಳಿಟ್ಟು.

೪೬೪. ಏಳೂರ ಮಾದಿಗರು ಸೇರಿ ತೊಗಲ ಹದ ಕೆಡಿಸಿದರು.

೪೬೫. ಏಳೋದು ಏಳು ಮಧ್ಯಾಹ್ನ । ನೋಡೋದು ನಾಯಿ ಮಕ.

## ಐ

೪೬೬. ಐನೋರ ಮನೇಲಿ ಉಂಡೋರಿಲ್ಲ । ಕೈಲಾಸ ಕಂಡೋರಿಲ್ಲ.

## ಒ

೪೬೭. ಒಕ್ಕಲಿಗ ಉಬ್ಬಿದರೆ ಇಬ್ಬರು ತಬ್ಬೋಕಾಗಲ್ಲ.

೪೬೮. ಒಕ್ಕಲಿಗ ದುಡಿಯೋದು ದಂಡ್ಕೆ । ಹೊಲೆಯ ದುಡಿಯೋದು ಹೆಂಡ್ಕೆ.

೪೬೯. ಒಕ್ಕಲು ಮಗನಿಗೆ ಬಡತನ ಉಂಟೆ । ಕರ್ಕಿಪತ್ರೆ ಒಣಗೋದುಂಟೆ ?

೪೭೦. ಒಕ್ಕುಳ ಕುಡದ್ರೂ ಹೆಂಡ । ನೆಕ್ಕಿ ನೋಡಿದ್ರೂ ಹೆಂಡ.

೪೭೧. ಒಗದೇನೊ ಅಗಸ ಅಂದ್ರೆ । ಮೂಸಿ ನೋಡ್ತಿನಿ ಗೌಡ, ಅಂದನಂತೆ.

೪೭೨. ಒಗ್ಗಿಸಿಕೊಂಡ ಕತ್ತೆ ಅಗಸಗಿತ್ತಿ ಮೇಲೆ ಹತ್ತಿತಂತೆ.



೪೭೩. ಒಂಟೆ ಹೂಸು ಇತ್ತ ನೆಲಕ್ಕೂ ಅಲ್ಲ । ಅತ್ತ ಆಕಾಶಕ್ಕೂ ಅಲ್ಲ.

೪೭೪. ಒಡಕು ಬಾಯಿ । ದದ್ದು ಕೈ.

೪೭೫. ಒಡವಿ ಇದ್ದೂ ಬಡವಿ । ಗಂಡ ಇದ್ದೂ ರಂಡಿ.

೪೭೬. ಒಡ್ಡರ ಹತ್ತಿರ ಕುಬುಸ ಕೇಳಿದಂಗೆ.

೪೭೭. ಒಡೆದ ಹಾಲು ಹೆತ್ಕೊಳಲ್ಲ । ಒಡೆದ ಮನಸ್ಸು ಹೊಂದ್ಕೊಳಲ್ಲ.

೪೭೮. ಒಣಕಿ ನೋಡಿ ಒಳ್ಳೆ ಮುಚ್ಚಗೊಂಡ್ರಂತೆ.

೪೭೯. ಒಣಗಾರಿಕೆ ಅಂತ ಅಸಡ್ಡೆ ಸಲ್ಲದು । ನಾಲ್ಕು ಹನಿ ಬಿದ್ರೆ ನಾಡು ನುಂಗ್ತದೆ.

೪೮೦. ಒಣ ಮರಕ್ಕೆ ಗಿಣಿ ಕಾದಂಗೆ.

೪೮೧. ಒಣ ಮರವ ಬೆಂಕಿ ತಿಂತಂತೆ । ಹಸಿ ಮರವ ಚಿಂತೆ ತಿಂತಂತೆ.

೪೮೨. ಒಬ್ಬನಿಗಿಂತ ಇಬ್ಬರು ಲೇಸು । ಹಬ್ಬಕ್ಕಿಂತ ಮದುವೆ ಲೇಸು.

೪೮೩. ಒಬ್ಬ ಮಗಳು ಅಂತ ಸಾಕೋಹೊತ್ಗೆ । ಕಬ್ಬರಸನ ಜೊತೆ ಹೋದ್ಲು.

೪೮೪. ಒಲ್ಲದ ಗಂಡನ ಒಲಿಸ್ತಲ್ಲೋ ಸಳಿರಂಗನ ಜಾತ್ರೆ !

೪೮೫. ಒಲ್ಲದ ಮನಸಿನಲಿ ಇಲ್ಲದ್ದು ಹುಟ್ತದೆ.

೪೮೬. ಒಲಿದರೆ ನಾರಿ । ಮುನಿದರೆ ಮಾರಿ.

೪೮೭. ಒಲೆ ಕಾದ್ರೆ ನಿಲ್ಲಬಹುದು । ನೆಲ ಕಾದ್ರೆ ನಿಲ್ಲಕಾದತಾ?

೪೮೮. ಒಲೆ ಉರುಗಾದ್ರೆ ಬದನೆಕಾಯ್ ಬೇಯಲ್ವ?

೪೮೯. ಒಲೆ ಬಲ್ದೆ ಹೊತ್ತ?

೪೯೦. ಒಳಗೆ ಅಮ್ಮನ ಕಾಟ । ಹೊರಗೆ ಗುಮ್ಮನ ಕಾಟ.

೪೯೧. ಒಳಗೆ ಭಗಭಗ ಹೊರಗೆ ಝುಗಝುಗ.

೪೯೨. ಒಳಗೆ ಹೋದರೆ ಹೆಣ್ಣಾಗಬೇಕು । ಹೊರಗೆ ಬಂದರೆ ಗಂಡಾಗಬೇಕು.

೪೯೩. ಒಳಗೆಲ್ಲ ಹುಳ್ಕು । ಮ್ಯಾಲೆಲ್ಲ ಥಳ್ಕು.

೪೯೪. ಒಳ್ಳಾಗ ತಲಿ ಇಟ್ಕೊಂಡು ಒನಕೆ ಪೆಟ್ಟಿಗೆ ಅಂಜೂದ್ಯಾಕೆ?

೪೯೫. ಒಳ್ಳೆ ಗಂಡ ಇದ್ರ ಬಂಗಾರ ಯಾಕೆ ಬೇಕು?

೪೯೬. ಒಳ್ಳೆ ಮಾತಿಗೆ ಸುಳ್ಳು ಪರದಾನಿ.

೪೯೭. ಒಳ್ಳೆ ಮಾತ್ನಿಂದ ಸಗಣೆ ತಿನ್ನಿಸ್ಬೌದು,

ಕೆಟ್ಟ ಮಾತಿನಿಂದ ಬೆಲ್ಲಾನು ತಿನ್ನಿಸೋಕಾಗೋಲ್ಲ.

೪೯೮. ಒಳ್ಳೇರ ಮಾನ ಹಳ್ಳೀಲಿ ಹೋಯ್ತು.

೪೯೯. ಒಳ್ಳೆ ಶಕುನ ಅಂತ ಇಳ್ಳೆಲ್ಲಾ ಕಳ್ಳತನ ಮಾಡಿದ.

೫೦೦. ಒಳ್ಳೇದ ಒಳಗೆ ಮಡಗಿ । ಜಳ್ ದಾನ ಮಾಡಿ,
ಕೊಳ್ಳಿ ಮ್ಯಾಲೆ ತಲೆಹೋಗುವಾಗ । ಆಗ್ ಮಾಡ್ತಿನಿ ನಾನು ದಾನವ ಅಂದ.

೫೦೧. ಒಳ್ಳೇರು ಒಳ್ಳೇರು ಅಂದ್ರ । ಒಳ್ಳೇರು ಒಳ್ಳಾಗ ಉಗುಳುತಿದ್ರಂತೆ.

೫೦೨. ಒಳ್ಳೊಳ್ಳೆ ದೇವರೆಲ್ಲ ಉಳ್ಳಾಡುವಾಗ,
ಕಳ್ಳ ದೇವರು ಕಡುಬು ಬೇಡಿತು.

೫೦೩. ಒಂದು ಕಣ್ಣಿಗೆ ಸುಣ್ಣ । ಒಂದು ಕಣ್ಣಿಗೆ ಬೆಣ್ಣೆ.

೫೦೪. ಒಂದ್ ಕಣ್ಣು ಕಣ್ಣಲ್ಲ । ಒಬ್ ಮಗ ಮಗಾ ಅಲ್ಲ.

೫೦೫. ಒಂದಿಗೆ ಉಂಡರೂ ಅವರೆಕಾಳು ತಿನ್ನಬ್ಯಾಡ ಅಂದಂಗೆ.

೫೦೬. ಒಂದಿದ್ರೆ ಒಂದಿಲ್ಲ । ಹಲ್ಲಿದ್ರೆ ಕಡ್ಲೆ ಇಲ್ಲ.

೫೦೭. ಒಂದು ದಿನ ನೆಂಟ । ಎರಡನೆಯ ದಿನ ಭಂಟ । ಮೂರನೆಯ ದಿನ ಶಂಟ.

೫೦೮. ಒಂದು ಮೂಳೆ ಹಾಕಿ ಎರಡು ನಾಯಿ ಬಿಟ್ಟಂಗೆ.

೫೦೯. ಒಂದೂರ ಕಳ್ಳನ್ನ ನಂಬೂದ್ರುವೆ ಪರೂರ ಸಜ್ಜನನ್ನ ನಂಬಾರ್ದು.

೫೧೦. ಒಂದೂರ ಗೌಡ । ಮತ್ತೊಂದೂರಿಗೆ ಹೊಲೆಯ !

೫೧೧. ಒಂದ್ಹೆತ್ತೋಳ್ ಹಂದಿಗಿನ್ನ ಕಡೆಯೆ?

## ಓ

೫೧೨. ಓಡಿಹೋಗೋ ಗೌಡಗ ಜೋಡಪದ ಹಾಡಿದರು.

೫೧೩. ಓಡಿಹೋಗೋ ಬಡ್ಡಿ ಹಾಲಿಗೆ ಹೆಪ್ಪಾಕಳೆ?

೫೧೪. ಓಡೋ ನಾಯಿ ಕಂಡ್ರೆ ಅಟ್ಟೋ ನಾಯಿಗೆ ಸದರ.

೫೧೫. ಓತಿಕ್ಯಾತನಿಗೆ ಬೇಲಿಯೇ ಸಾಕ್ಷಿ.

೫೧೬. ಓದೋದ್ರ ಜೊತೆಗೆ ನನ್ನ ಮಗ ಸೇದೋದ್ನೂ ಕಲ್ತ.

೫೧೭. ಓದೋದು ಶಾಸ್ತ್ರ । ಹಾಕೋದು ಗಾಳ.



೫೧೮. ಓದು ಒಕ್ಕಾಲು । ಬುದ್ಧಿ ಮುಕ್ಕಾಲು.

೫೧೯. ಓಮ ಮಾಡಿದರೆ ಕ್ಷಾಮ ಹೋದೀತೇ?

## ಕ

೫೨೦. ಕಕ್ಕೆ ಸೊಪ್ಪಿನ ಎಸರಾದ್ರೂ ಲೆಕ್ಕದ ಮುದ್ದೆ ಬಿಡಬೇಡ.

೫೨೧. ಕಚ್ಚೆ ಭದ್ರಿದ್ರೆ ಜೀವ ವಜ್ರಿದ್ದಂಗೆ.

೫೨೨. ಕಚ್ಚೆ ಇದ್ರೆ ಕೆರೆತ । ಅಜ್ಜಿ ಇದ್ರೆ ಕೊರೆತ.

೫೨೩. ಕಟಪಟೆ ದೇವರಿಗೆ ಕಾಯಿಬಾಳೆ ಹಣ್ಣು.

೫೨೪. ಕಟ್ಟಿಕೊಟ್ಟ ಬುತ್ತಿ ಹೇಳಿಕೊಟ್ಟ ಮಾತು ಎಷ್ಟು ದಿನ ಬಂದಾತು?

೫೨೫. ಕಟ್ಟಿದೋರಿಗೆ ಒಂದ್ ಮನೆ । ಬಾಡಿಗೆದಾರನಿಗೆ ಎಂಟು ಮನೆ.

೫೨೬. ಕಟುಕನ ಮುಂದೆ ಕುರಿಮರಿ ಕಷ್ಟ ಹೇಳಿಕೊಂಡ್ಹಂಗೆ.

೫೨೭. ಕಟುಕನ ಮುಂದೆ ಬಸವನಪುರಾಣ ಹೇಳ್ದಂಗೆ.

೫೨೮. ಕಟ್ಟೆ ಹಾಕಲಿಲ್ಲ ಮೀನು ಹಿಡೀಲಿಲ್ಲ । ಎರಡು ಭಾಗ ಕೊಡು ಅಂದ !

೫೨೯. ಕಟ್ಟೋ ಕೆರೆಗೆ ಒಂದು ಕಲ್ಲಾಕು.

೫೩೦. ಕಡ ಕಾಣದ ಬಡ್ಡಿ ಕಡಿಯೋಕಂಬ ತೆಬ್ಬಿಕೊಂಡ್ಸು.

೫೩೧. ಕಡ ಹುಟ್ಟಿ ಬಡವ ಕೆಟ್ಟ.

೫೩೨. ಕಡ ಸಿಕ್ಕೋದಾದರೆ ಹಡಗ ನನಗಿರಲಿ ಅಂದ.

೫೩೩. ಕಡಾಯ ಹಾಲಿಗೆ ಕಡಾಯದಷ್ಟೆ ಹೆಪ್ಪಾಕ್ತಾರಾ?

೫೩೪. ಕಡಿ ಅಂದ್ರೆ ಕಪ್ಪೆಗೆ ಕ್ಯಾಪ । ಬಿಡಿ ಅಂದ್ರೆ ಹಾವಿಗೆ ಕ್ಯಾಪ.

೫೩೫. ಕಡೀಲಾರ್ದ ಕತ್ತಿ ಕೈಯ್ಯಾಗಿದ್ರೇನು ಒರೆಯಾಗಿದ್ರೇನು?

೫೩೬. ಕಡಿದವನ ಪಾಪ ಖಡ್ಗ ಮಾಡಿದವನಿಗುಂಟೆ?

೫೩೭. ಕಡುಕೋಪ ಬಂದಾಗ ತಡಕೊಂಡವನೆ ಜಾಣ.

೫೩೮ ಕಬ್ಬು ತಿಂದು ಕೈತೊಳದಂಗೆ.

೫೩೯. ಕಡೆಕೇರೀಲಿ ಬಡವೆ ಯಾಕಿದ್ಲು ಅಂದ್ರೆ,
ಹೇತ್ ಬಂದೋರ್ಗೆ ನೀರು ಕೊಡಾಕೆ.

೫೪೦. ಕಸ್‌ಕಪ್ಪು ಕಸ್ತೂರಿ ನನ್ನ ನೋಡೋ ಗಂಡಯ್ಯ ಅಂದ್ರೆ,
ನಾ ಹಳೇ ಗದ್ದೆ ಕಳೆ ಕಿತ್ತಿ ಏಳನಾರೆ ದಮ್ಮಯ್ಯ ಅಂದ.

೫೪೧. ಕಣ್ಣಿರೋತನಕ ನೋಡಬೇಕು। ಕೈ ನಡಿಯೋತನಕ ನೀಡಬೇಕು.

೫೪೨. ಕಣ್ಮುಚ್‌ಕೊಂಡು ಕೊಡು ಶಿವನೆ ಅಂದ್ರೆ,
ದುಡಿಯೋನೆಂಡ್ತಿ ಉಚ್ಚೆ ಕುಡಿ ಅಂದ.

೫೪೩. ಕತ್ತಿಗೆ ಲಗಾಮಿಲ್ಲ। ಸರಪಂಚಗೆ ಪಗಾರಿಲ್ಲ.

೫೪೪. ಕತ್ತೆ ಕೆಟ್ರೆ ಪಾಳುಮನೆ। ಹೆಣ್ಣು ಕೆಟ್ರೆ ತೌರುಮನೆ.

೫೪೫. ಕತ್ತೆ ಖಂಡುಗ ಹೊತ್ರೆ ಶೆಟ್ಟಿ ಅನ್ನಿಸ್ಕೊಂಡತ್ತೇ?

೫೪೬. ಕತ್ತೆಗೇನ್ ಗೊತ್ತು ಮುತ್ತಿನ ಬೆಲೆ?

೫೪೭. ಕತ್ತೆಗೂ ಕುದ್ರೆಗೂ ಸೋದರ ಮಾವನೇ?

೫೪೮. ಕತ್ತೆ ಬಲ್ಲದೇ ಬತ್ತದ ಸುಗ್ಗಿ ?

೫೪೯. ಕತ್ತೆ ಮರೀಲಿ ಚಂದ। ಅತ್ತೆ ಹೊಸದರಲ್ಲಿ ಚಂದ.

೫೫೦. ಕತ್ತೆಮುಂದೆ ಬತ್ತ ಹಾಕಿದಂಗೆ.

೫೫೧. ಕತ್ತೆ ಮೇಲೆ ಅತ್ತೆ ಏರಿದರೆ,
ಕೊಡೆ ಹಿಡಿಯೋಕೆ ಮಾವನೇ ಬರಬೇಕು.

೫೫೨. ಕತ್ತೆಯಂಥ ಅತ್ತೆ ಬೇಕು। ಮುತ್ತಿನಂಥ ಗಂಡ ಬೇಕು.

೫೫೩. ಕತ್ತೆ ಹೊತ್ಕೊಂಡ್ ಕಣಿ ಕೇಳ್ದಂಗೆ.

೫೫೪. ಕದ ತಿನ್ನೋನ್ ಹತ್ರ ಹಪ್ಪ ಕೇಳ್ದಂಗೆ.

೫೫೫. ಕದ್ದಿದ್ದು ಮದ್ಯಾನ್ನಕ್ಕಿಲ್ಲ। ಹಿರೇಮಗನ ಹಿಂಡೇಕೂಳ್ಗಿಲ್ಲ.

೫೫೬. ಕದ್ದೂ ಕಾಣದಂಗೆ ಹೋಳಿಗೆ ಕೊಟ್ರೆ ಬೆಲ್ಲ ಸಾಲ್ದು ಅಂದಂಗೆ.

೫೫೭. ಕದ್ದು ಮದುವೆ ಆಗ್ತೀನಿ। ಬಗ್ಗಿ ವಾಲಗ ಊದು ಅಂದಂಗೆ.

೫೫೮. ಕದ್ದು ಹೊಲ ಮಾಡಿ। ಬಗ್ಗಿ ಹಕ್ಕಿ ಹೊಡೆದರು.

೫೫೯. ಕನ್ನಂಬಾಡಿ ಹತ್ರ ಕಂಬ್ಳಿ ಕಿತ್ಕೊಂಡ್ರೆ .
ಬಲಮುರಿ ಹತ್ರ ಬಂದ್ ಹಲ್‌ಮುರಿ ಕಚ್ದ.

೫೬೦. ಕಪ್ಪು ಕಸ್ತೂರಿ। ಕೆಂಪು ಕಿಸುಬಾಯಿ.

೫೬೧. ಕಪ್ಪೆ ಕಂಡು ಅಪ್ಪಾ ಅಂದ್ನು। ಹಾವ್ ಕಂಡು ಹಾದ್ರಮಾಡಿದ್ನು.

೫೬೨. ಕಪ್ಪೆ ತಕ್ಕಡೀಲಾಕಿದಂಗೆ.



೫೬೩. ಕಬ್ಬು ಡೊಂಕಾದರೆ ಸಿಹಿ ಡೊಂಕೆ?

೫೬೪. ಕಬ್ಬು ತಿಂದರೆ ಬಾಯಿ ಸುದ್ದ। ಗಂಡ ಹೆಂಡತಿಗೆ ಹೊಡೆದರೆ ಮೂಗು ಸುದ್ದ.

೫೬೫. ಕಬ್ಬು ಸೀ ಅಂತ ಬುಡಮುಟ್ಟ ತಿಂದ.

೫೬೬. ಕಬರುಗೇಡಿ ಕೈಯ್ಯಾಗ ಕೊಬರಿ ಕೊಟ್ಟರೆ
ಸರುವೊತ್ತಿನಾಗ ಎದ್ದು ತಿನ್ನಕ್ ಕುಂತಿದ್ದ.

೫೬೭. ಕಮಟ ಕೊಬರಿಗೂ ಜಿಗುಟು ಬೆಲ್ಲಕ್ಕೂ ಗಂಟು.

೫೬೮. ಕರಕಾಯೊ ಹುಡುಗನ್ಗೆ ಗೌಡ್ಕೆ ಕೊಟ್ರೆ। ವಡೆಗದ್ದೆ ಕೂದು ಮೆದೆ ಹಾಕ್ದ.

೫೬೯. ಕರಡೀಗೆ ಹೆದರದೋನು ಕರೀ ಕಂಬ್ಳೀಗೆ ಹೆದರಾನೆ?

೫೭೦. ಕರಡೀಗೆ ಕೂದಲ್ಯಾವ್ದು? ಸೆಂಟ ಯಾವ್ದು?

೫೭೧. ಕರಬುಡೋ ಬೊಮ್ಮ ಅಂದ್ರೆ ಒಲ್ಲ್ಕೆ ಕಣಮ್ಮ
ಹಾಳೆ ತಗೊಳೊ ಅಂದ್ರೆ ಹಂಗೇಳಮ್ಮ.

೫೭೨. ಕರಾವು ಇದ್ದ ಮನೆ ಝುಣ ಝುಣ। ಕರಾವು ಇಲ್ಲದ ಮನೆ ನೊಣ ನೊಣ.

೫೭೩. ಕರುಬೋನ ನೆರೇಲಿರಬ್ಯಾಡ। ಹಗೆಯೋನ ಅಬ್ಬೀಲ್ ಇರಬ್ಯಾಡ.

೫೭೪. ಕರ್ಲು ಹೊಲ ಮಾಡಬ್ಯಾಡ। ಪರ್ಲು ಹೆಣ್ಣ ತರಬ್ಯಾಡ.

೫೭೫. ಕರೆದು ಹೆಣ್ಣುಕೊಟ್ರೆ ಮಲ್ನಾಗರು !

೫೭೬. ಕರೆಯೋ ಹಸಾ ಕೊಟ್ಟು ಒದೆಯೋ ಕತ್ತೆ ತಂದ ಹಾಗೆ.

೫೭೭. ಕಲ್ತವನಿಗಿಂತ ನುರಿತವ ಜಾಣ.

೫೭೮. ಕಲ್ಲಪ್ಪನೂ ಗುಂಡಪ್ಪನೂ ಕೂಡಿದರೆ ಮೆಣಸಪ್ಪನ ಗತಿ?

೫೭೯. ಕಲ್ಮಾಳ್ಗೆ ಒಳಗಿದ್ರೂ ಕೊಲ್ಲೋನೆ ಜವರಾಯ.

೫೮೦. ಕಲಿತ ಬುದ್ಧಿ ಕಲ್ಲಾಕಿದರೂ ಹೋಗಲಿಲ್ಲ.

೫೮೧. ಕಲ್ಲಿನ ಮೇಲೆ ನೆಲ್ಲು ಬಿತ್ತಿದ ಹಾಗೆ.

೫೮೨. ಕಲ್ಲುವಡ್ಡರಿಗೆ ಎತ್ತು ಕೊಡಬ್ಯಾಡ.
ಮಣ್ಣುವಡ್ಡರಿಗೆ ಹೆಣ್ಣು ಕೊಡಬ್ಯಾಡ.

೫೮೩. ಕಲ್ತುದ್ದ ಬುಡೆ ಕಲಕೇತಿ ಅಂದ್ರೆ,
ನಾ ಊರು ಬುಟ್ರೂಬುಟ್ಟೇನೂ ಕಲ್ತುದ್ ಬುಡಲ್ಲ ಅಂದ್ನು.

೫೮೪. ಕಲ್ಲೂ ಹೋಯ್ತು ಕವಣೇನೂ ಹೋಯ್ತು.

೫೮೫. ಕವಳ ಕಾಣದೋನ್ ಕಾಲು ಸುಟ್ಕೊಂಡ್ ತಿಂದ.

೫೮೬. ಕಸ ತಿನ್ನೋ ಬದಲು ತುಸು ರಸ ತಿನ್ನೋದ್ ಲೇಸು.

೫೮೭. ಕಳವು ಮಾಡಾಕ್ ಹೋದಾಗ ಕೆಮ್ಮಿದಂಗೆ.

೫೮೮. ಕಳವು, ಹಾದರ ಮೂರೇದಿನ.

೫೮೯. ಕಳ್ಳಗೇಮೆ ಗೇದು ಒಳ್ಳೇರಾಗಿ ಹಿಟ್ಟುಣ್ಣೋರು.

೫೯೦. ಕಳ್ಳತನ ಅಂಬೊ ಕಾಮಧೇನಿರುವಾಗ
ಬೇಡಿ ತಿಂಬೊ ಬಂಡಜನ್ಮ ಯಾಕೆ?

೫೯೧. ಕಳ್ಳ ದೇವರಿಗೆ ಕೊಳ್ಳಿ ದೀಪ.

೫೯೨. ಕಳ್ಳ ದೇವರಿಗೆ ಸುಳ್ಳು ಪೂಜಾರಿ.

೫೯೩. ಕಳ್ಳನವ್ವನ ಕಣಿ ಕೇಳಿದ್ಹಂಗೆ.

೫೯೪. ಕಳ್ಳನ ಗುಟ್ಟು, ಕಳ್ಳ ಬಲ್ಲ.

೫೯೫. ಕಳ್ಳನ ಮನಸ್ಸು ಹುಳ್ಳುಳ್ಳಗೆ.

೫೯೬. ಕಳ್ಳನ ಹೆಜ್ಜೆ ಕಳ್ಳನೇ ಬಲ್ಲ.

೫೯೭. ಕಳ್ಳನಿಗೆ ಕಡುನಾಲಗೆ। ಬಡ್ಡೀಗೆ ಒಡ್ಡಾಚಾರ.

೫೯೮. ಕಳ್ಳನಿಗೆ ಕಳ್ಳ ನಂಟು। ಹುಳಿಗೆ ಮೆಣಸು ನಂಟು.

೫೯೯. ಕಳ್ಳನಿಗೆ ಪಿಳ್ಳೇನೆವ। ಮಳ್ಳೀಗೆ ಮಗೀನ ನೆವ.

೬೦೦. ಕಳ್ಳಬಿದ್ರೆ ಕೈಗೆ ಸಿಕ್ಕಿದ್ ತಗೊಂಡೋಯ್ತನೆ,
ಕೊಳ್ಳಿಬಿದ್ರೆ ಏನೂ ಉಳಿಯಲ್ಲ.

೬೦೧. ಕಳ್ಳೀ ಅವ್ವನ್ನ ಕಣಿಕೇಳುದ್ರೆ ಮಗಳು ಕಳ್ಳೀ ಅಂದಾಳೆ?

೬೦೨. ಕಳ್ಳೀಗೆ ಕಡು ನಾಲಗೆ। ಹಾದರಗಿತ್ತಿಗೆ ಹಲವು ನಾಲಿಗೆ.

೬೦೩. ಕಳ್ಳೀಗೆ ನಾಚಿಕೆ ಇಲ್ಲ। ಅಂಗಾಲಿಗೆ ಹೇಸಿಕೆ ಇಲ್ಲ.

೬೦೪. ಕಳ್ಳನ ಹೆಚ್ತಿ ಎಂದಿದ್ರೂ ಮುಂಡೆ.

೬೦೫. ಕಂಕಳಲ್ಲಿ ದೊಣ್ಣೆ। ಕೈಯಲ್ಲಿ ಶರಣಾರ್ಥಿ.

೬೦೬. ಕಂಡ ಮನೆಗೆ ಕಳ್ಳ ಬಂದ। ಉಂಡ ಮನೆಗೆ ನೆಂಟ ಬಂದ.



೬೦೭. ಕಂಡ ಕಂಡ ದೇವರಿಗೆ ಕೈಮುಗಿದರೂ। ಗಂಡ ಮಾಡದೆ ಬಸುರಿಲ್ಲ.

೬೦೮. ಕಂಡ ಕಡೆ ಹೆಣ್ಣು ತರಬಾರ್ದು। ಉಂಡ ಕಡೆ ಮಲಗಬಾರ್ದು.

೬೦೯. ಕಂಡಕಂಡೋರಿಗೆಲ್ಲ ಕೈ ಮುಗಿದರೂ,
ಗಂಡಸತ್ತ ಮುಂಡೆಯ ಬೋಳಿಸದೆ ಬಿಡೋದಿಲ್ಲ.

೬೧೦. ಕಂಡವರ ಗಂಟು ಅಂದ್ರೆ ಉಂಡುಂಡೆಯಾಗಿ ನುಂಗಿದ.

೬೧೧. ಕಂಡೋರಿಗಾದರೆ ಕಬ್ಬಿಣಾನಾದ್ರೂ ಬಡಿತೀನಿ,
ನಮ್ಮನೇಲಿ ಸೀಸಾನೂ ಕಾಯಿಸಲಾರೆ ಅಂದ.

೬೧೨. ಕಂಡವರ ಮಂಡೆ ಕೂದಲ ಹೆಂಡಿರಮುಂಡಾಡಿದಂತೆ.

೬೧೩. ಕಂಡೋರ ಮನೇಲಿ ಎಷ್ಟ್‌ದಿವಸ ಗೇದ್ರು,
ಉಂಡಿಟ್ಟು, ತಿಂದ ಬದನೆಕಾಯಿ.

೬೧೪. ಕಂಡೋರ್ ವಡವೆ ಇಕ್ಕೊಂಡು ನೀರೊಳಗೆ ನೆಳ್ ನೋಡ್ದ.

೬೧೫. ಕಂಡೋರಿಗೆ ಕದ ಕೊಟ್ಟು। ಬೆಳಗಾನ ನಾಯಿ ಹೊಡೆದ.

೬೧೬. ಕಂದನ ಬರದಾಗೆ ಮಂಗನನ್ನೇ ಸುಟ್ಕೊಂಡ್ ತಿಂದರಂತೆ .

೬೧೭. ಕಂತೆಯಂತೆ ಬೊಂತೆ.

೬೧೮. ಕಂದನ್ನ ಹೆರಲಿಲ್ಲ। ಕೈ ಬೀಸಿ ನಡೀಲಿಲ್ಲ.

೬೧೯. ಕಾಕು ಮಾತು ಆಡಬೇಡ। ಪೋಕ ವಿದ್ಯೆಗೆ ಹೋಗಬೇಡ.

೬೨೦. ಕಾಗಿ ತನ್ನ ಚಂದಕ್ಕೆ ಕೋಗಿಲೆ ಜರೀತಿತ್ತಂತೆ.

೬೨೧. ಕಾಗುಣಿತ ಬಾರದವನಿಗೆ ಕಾವ್ಯ ಹೇಳೋದು ಹ್ಯಾಗೆ?

೬೨೨. ಕಾಗೆ ಕೋಗಿಲೆಯ ಹಾಗೆ ಇದ್ದರೂ ರಾಗದಲ್ಲಿ ಭೇದವಿಲ್ಲವೆ?

೬೨೩. ಕಾಟಕ್ಕೆ ಕಣಿ ಕೇಳ್ತೊತ್ತಿಗೆ,
ತೋಟದ ಮುನಿಯಪ್ಪ ನಂದು ಅಂತ ಬಂದನಂತೆ.

೬೨೪. ಕಂದಾಯ ಬತ್ತಲ್ಲೊ ಕಾಟಣ್ಣ ಅಂದ್ರೆ,
ತೋಟ ಮಾರೊ ಮೋಟಣ್ಣ ಅಂದ.

೬೨೫. ಕಾಡಿಗೋದ್ರೆ ಕೈತುಂಬ। ಊರಿಗೋದ್ರೆ ಒಳಿಡಿ.

೬೨೬. ಕಾಡುಹಂದಿ ಹೊಲ ಮೇದರೆ। ಊರುಹಂದಿ ಕಿವಿ ಕುಯ್ದರಂತೆ.

೬೨೭. ಕಾಡು ಸೊಕ್ಕಿದರೆ ಆಡು ಬಿಡು । ಊರು ಸೊಕ್ಕಿದರೆ ಕೊಂಕಣಿ ಬಿಡು.

೬೨೮. ಕಾಣದ ನಾಯಿ ಕನಸು ಕಾಣೊವತ್‌ಗೆ
ಏಳಬಾರದ ನಾಯಿ ಎದ್‌ಕೂತ್ಕೊತ್ತು.

೬೨೯. ಕಾಣದ ನೆಂಟ ಬಂದ ಅಂತ ಕೋಣ ಹಾಲ್ ಕರದಾತೆ?

೬೩೦. ಕಾಣಬಾರದ್ದ ಕಂಡು ಕ್ಯಾಣನ ಹಾಲು ಕುಡಿದಂಗಾಯ್ತು.

೬೩೧. ಕಾಮಾಲೆ ರೋಗದೋನಿಗೆ ಕಂಡದ್ದೆಲ್ಲ ಹರಿಷಿಣ.

೬೩೨. ಕ್ಷಾಮದಲ್ಲಿ ಕ್ಷೋಬೆಗೆ ಕಡಿಮೆಯೆ?

೬೩೩. ಕಾರ್ಯವಾಸಿ ಕತ್ತೆ ಕಾಲ್ ಕಟ್ಟು.

೬೩೪. ಕಾರದ ಗಂಡ । ಕರ್ಮದ ಮಿಂಡ.

೬೩೫. ಕಾರಿನಲ್ಲಿ ಕರಕೊಂಡು ಹೋಗಿ ಕಾಡಿನಲ್ಲಿ ಬಿಟ್ಟಂಗೆ.

೬೩೬. ಕಾಲಕ್ಕೆ ತಕ್ಕ ಕೋಲ । ದೇಶಕ್ಕೆ ತಕ್ಕ ಭಾಷೆ.

೬೩೭. ಕಾಲಿದ್ದೋರ್ ಕೈಲಾಸಕ್ಕೆ ಹೋದ್ರೆ । ನೀನೆಲ್ಲಿ ಹೋಗ್ತಿ ಮರುಳಾಮೆ?

೬೩೮. ಕಾಲು ನಿಲ್ದೆ ಒಬ್ರ ಮನೇಗೆ ಹೋದ್ರೆ.
ಬಾಯಿ ನಿಲ್ದೆ ಒಂದ್ ಮಾತು ಬತ್ತದೆ.

೬೩೯. ಕಾಲಿಗ್ ಬಿದ್ದು ಕಾಲುಂಗ್ರ ಬಿಚ್ಚಿಕೊಂಡ್ರಂತೆ.

೬೪೦. ಕಾಸಿಗೆ ತಕ್ಕ ಕಜ್ಜಾಯ । ಮೀಸೆಗೆ ತಕ್ಕ ಮುಖ.

೬೪೧. ಕಾಸಿಗೆ ಹೋಗಿ ತಂಗಿದರೂ ಕಾಸಿನ ಆಸೆ ಬಿಡಲಿಲ್ಲ.

೬೪೨. ಕಾಸಿದ್ರೆ ಕಡ್ಲೆ । ಕಾಸಿಲ್ದೆ ಇದ್ರೆ ನಡ್ಲೆ.

೬೪೩. ಕಾಸು ಕೊಟ್ಟು ಕಡ್ಲೆ ತಗೊಳಾಕೆ । ಯಾವ್ ಶೆಟ್ಟಿ ಅಂಗಡಿಯಾದ್ರೆ ಏನು?

೬೪೪. ಕಾಸು ಬಿಟ್ಟವ । ದೇಶ ಬಿಟ್ಟಾನು.

೬೪೫. ಕಾಸೂ ಕೇಡು । ತಲೆಯೂ ಬೋಳು.

೬೪೬. ಕ್ಯಾಣನಿಗೆ ಕೊಸಿಯೊ ಸಂಕ್ಟ । ಎಮ್ಮೆಗೆ ಈಯೊ ಸಂಕ್ಟ.

೬೪೭. ಕ್ಯಾಣನ ಮುಂದೆ ಕಿನ್ನುಡಿ ಬಾರಿಸಿದಂಗೆ.

೬೪೮. ಕ್ಯಾಣೆ ಕೊಲ್ಲಾಪುರ । ನಡುಮನೆ ನಂಜನಗೂಡು.

೬೪೯. ಕ್ಯಾಡುಗನ ಹೆತ್ತು । ನೋಡು ನನ್ನ ಭಂಗ ಅಂದಂಗೆ.



೬೫೦. ಕಿಚಡಿಗುಪ್ಪಿಲ್ಲ । ಕಿಸ್ಕೊಂಡ್‌ಬಿದ್ರೆ । ನೋಡೋರ್ ದಿಕ್ಕಿಲ್ಲ.

೬೫೧. ಕಿಚ್ಚ ನುಂಗಾವ । ನುಚ್ಚ ಬಿಟ್ಟನೆ ?

೬೫೨. ಕಿತ್ತೋದೋಳ್ ಕಿವಿ ಕೂದಿ ಕತ್ತೆ ಮ್ಯಾಲ್ ಕುಂಡುಸಿದ್ರೆ,
ಅಂಗೂ ಕಿತ್ತೋದೋಳು ಅಂತರೆ,
ಇಂಗೂ ಕಿತ್ತೋದೋಳು ಅಂತಾರೆ,
ಮತ್ತೊಂದು ಬೀದಿಗೆ ನಡಿಯಪ್ಪ ಅಂದ್ಲು.

೬೫೩. ಕಿನಾಸಿ ಕಿಪ್ಪಲಲ್ಲಾದರೂ ಇದ್ದೇನು,
ಧಾರಾಳಗಾರನ ಮನೇಲಿ ಇರಲಾರೆ ಅಂತಾಳೆ ಲಕ್ಷ್ಮಿ.

೬೫೪. ಕಿರಿದಾಗಿ ಬಿತ್ತಿ । ಹಿರಿದಾಗಿ ಬೆಳೆ.

೬೫೫. ಕಿರದೂರಲ್ಲಿ ಮೆರೀಬೇಡ । ಮೆರೆದೂರಲ್ಲಿ ತಿರೀಬೇಡ.

೬೫೬. ಕಿವಿ ಕಿತ್ತರೂ ಕಿರಿ ಮಗ ಲೇಸು.

೬೫೭. ಕಿವುಡಿ ಆದರೇನು ಬುಗುಡಿ ಇಡಬಾರದ?

೬೫೮. ಕಿವುಡ ಅಟ್ಟ । ಮೂಗ ಉಂಡ.

೬೫೯. ಕಿವುಡ ಕಿಚಿಡಿ ಬೇಡಿದರೆ । ಗೌಡ ಹಚಡ ಬೇಡಿದನಂತೆ.

೬೬೦. ಕಿವುಡನ ಕುಟ್ಟೆ ಕಣಿ ಹೇಳ್ದಂಗೆ.

೬೬೧. ಕುಕ್ಕದ ಬಟ್ಟೆಗೆ ಕೂರೆ ಹೆಚ್ಚು । ಕೂಡಿದ ಬಾಳಿಗೆ ಮಾತು ಹೆಚ್ಚು.

೬೬೨. ಕುಚೇಷ್ಟೆಯಿಲ್ಲದೆ ಪ್ರತಿಷ್ಠೆ ಬಾರದು.

೬೬೩. ಕುಚೋದ್ಯದ ಅರಸನಿಗೆ ಕುಲಗೇಡಿ ಪ್ರಧಾನಿ.

೬೬೪. ಕುಟುಕು ಇದ್ದರೆ ಮೆಟಕು । ಮೆಟಕು ಇದ್ದರೆ ಮೆಡೆಗಾರಿಕೆ.

೬೬೫. ಕುಟುಕು ಮಳೆ ಬೇಡ । ಲೊಟಕು ಗಂಡ ಬೇಡ
ಹಿಟ್ಟಿಕ್ಕಿ ಮೆಣಸರಿಯೋ ಬಡ್ಡಿ ಮೊದ್ಲೆ ಬೇಡ.

೬೬೬. ಕುಲ್ಡಿರಲಿ ಕುಂಟಿರಲಿ ಮನೆ ಹೆಂಡತಿ ಲೇಸು.

೬೬೭. ಕುಡುದೋನು ಬಲ್ನೆ ಪಿಸುಮಾತ ?

೬೬೮. ಕುತ್ತಿಗೆ ಕೊಯ್ಯುವ ಊರಲ್ಲಿ ಸುಲುದುಬಿಟ್ಟಿದ್ದೇ ಗುಣ.

೬೬೯. ಕುದುರೆಗೆ ಕಡಿವಾಣದ ಸನ್ನೆ । ಕತ್ತೆಗೆ ದೊಣ್ಣೆ ಸನ್ನೆ.

೬೭೦. ಕುರಿ ಕಾಯ್ತೀಯ ತೋಳ ಅಂದೋರ್ಗೆ, ಸಂಬಳವೇ ಬೇಡ ಅಂತಂತೆ.

೬೭೧. ಕುರಿ ಮುಂದೆ ಹರೆ ಬಡದಂಗೆ.

೬೭೨. ಕುರಿ ಮೇದುತ್ತಾವು ಕರೀಗೆ ಮೇವಿಲ್ಲ.

೬೭೩. ಕುರುಕ್‌ತಿಂಡಿ ತಿಂದೋಳ್‌ಗೆ ಇರೂಕ್ ಬಾರ.

೬೭೪. ಕುರುಡ ತನ್ನ ತಿಕ ಸವುರಿ । ಎಲ್ರುದೂ ಹಂಗೆ ಅದೆ ಅಂತಿದ್ನಂತೆ.

೬೭೫. ಕುರುಡನ ಹೆಂಡತಿಗೆ ಹರನೇ ಕಾವಲು.

೬೭೬. ಕುರುಡೇಟು ತರಡಿಗೆ ತಗುಲಿತು.

೬೭೭. ಕುರುಬ ಕೂಡಿ ಕೆಟ್ಟ । ದೊಂಬ ಅಗಲಿ ಕೆಟ್ಟ.

೬೭೮. ಕುರುಬ ಹೆಗಲ ಮ್ಯಾಲೆ ಕುರಿ ಹೊತ್ಕೊಂಡ್ ಊರೆಲ್ಲಾ ಹುಡುಕಿದನಂತೆ.

೬೭೯. ಕುರುಬನಿಗೆ ಕುಲವಿರಬಾರದು । ಹುರುಳಿ ಹೊಲಕೆ ಗೊಬ್ಬರ ಬಾರದು.

೬೮೦. ಕುಲಕರ್ಣಿ ಮನೆಗೆ ಹೋದರೆ,
ಕುಂಪ್ರುಸಿ ಮೂರುರೂಪಾಯಿ ದಂಡ ತಗೊಂಡ್ನಂತೆ.

೬೮೧. ಕುಲಕ್ಕೆ ತಕ್ಕ ಬುದ್ಧಿ । ಅನ್ನಕ್ಕೆ ತಕ್ಕ ಲದ್ದಿ.

೬೮೨. ಕುಲ ಬಿಟ್ಟರೂ ಛಲ ಬಿಡಬಾರದು.

೬೮೩. ಕುಲಹೀನನಾದರೂ ವರಹೀನನಾಗಬಾರದು.

೬೮೪. ಕುಳ್ಳ ಕೊಳ್ಳೇಗಾಲ ಕೆಡಿಸಿದ.

೬೮೫. ಕುಂಟಿ ನೀರಿಗೆ ಕಳ್ಸಿ ಎಂಟಾಳ್ ಬಾಳ್‌ಗೆಟ್ರು.

೬೮೬. ಕುಂಟು ಕುದುರೆಗೆ ಗಂಟು ಲಗಾಮು.

೬೮೭. ಕುಂಟೆತ್ತಿಗೆ ನೆಪ್ಪುರಿದದ್ದೇ ನೆವ.

೬೮೮. ಕುಂಟೆತ್ತಿಗೆ ಕೊಳಕು ನೀರು ಪಂಚಾಮೃತ.

೬೮೯. ಕುಂಡ, ಸೌದೆ ಒಡುದ್ರೆ ಕೊಡ್ಲಿ ಮುಕ್ಕು.

೬೯೦. ಕುಂಡಿ ಮೇಲೆ ಒದ್ರೆ ದವಡೆ ಹಲ್ಲುದುರಿದೊ ಅಂದಂಗೆ.

೬೯೧. ಕುಂಡೆ ಬೆಳೆದರೆ ಗೌಡನಾದನೆ?

೬೯೨. ಕುಂಡುಂಗೆ ದೀಪ ಸೇರ್ದ್ವೇಹೋದ್ರೆ । ಹೊಲಕ್ಕೆ ಹಳ್ಳಾಕದೇ ಬ್ಯಾಡವೇ?

೬೯೩. ಕುಂತರೆ ಕುರುಬ । ನಿಂತರೆ ಕಿರುಬ.



೬೯೪. ಕುಂತಿರೋದಕ್ಕಿಂತ ಕೂಲಿಮಾಡೋದು ಲೇಸು.

೬೯೫. ಕುಂಬಳಕಾಯಿ ಕಳ್ಳ ಅಂದ್ರೆ । ಹೆಗಲು ಮುಟ್ಟಿ ನೋಡಿಕೊಂಡ.

೬೯೬. ಕುಂಬಳ ಕೂದು ಸಾಕು । ನುಗ್ಗೆ ಮುರುದು ಸಾಕು । ಮಕ್ಕಳ ಹೊಡೆದು ಸಾಕು.

೬೯೭. ಕುಂಬಾರನ ಆವಿಗೇಲಿ ತಾಮ್ರದ ಚೊಂಬು ಹುಡುಕಿದ ಹಾಗೆ.

೬೯೮. ಕುಂಬಾರನಿಗೆ ವರ್ಷ । ದೊಣ್ಣೆಗೆ ನಿಮಿಷ.

೬೯೯. ಕೂಡಿ ಕಾಡೋದ್ಕಿಂತ ಕಾಡಿ ಕೂಡೋದು ಲೇಸು.

೭೦೦. ಕೂಡಿ ಉಂಡ ಬಳಿಕ ಕುಲ ಎಣಿಸಬಾರದು.

೭೦೧. ಕೂತಿರಲಾರದವ ಕಡಜದ ಗೂಡಿಗೆ ಕೈ ಹಾಕಿದಂಗೆ.

೭೦೨. ಕೂತು ಉಣ್ಣೋನಿಗೆ ಕುಡಿಕೆ ಹೊನ್ನು ಸಾಲದು.

೭೦೩. ಕೂರೆಗೆ ಹೆದರಿ ಸೀರೆ ಬಿಚ್ಚಾಕ್ತಾರಾ ?

೭೦೪. ಕೂಲಿ ಬಾಳ್ವೆ ಸೂಳಿ ಬಾಳ್ವೆ ಒಂದೇ.

೭೦೫. ಕೂಳಿದ್ವರೆ ಕಾಗೆ ಎಷ್ಟು?

೭೦೬. ಕೂಳು ಕುತ್ತ । ನೀರು ಪಿತ್ತ । ಎರಡೂ ಬಿಟ್ಟರೆ ಸತ್ತ.

೭೦೭. ಕೂಳು ಚೆಲ್ಲಿದರೆ ಕಾಗೆಗೇನು ಕಮ್ಮಿ ?

೭೦೮. ಕೆಟ್ಟಡಿಗೆ ಅಟ್ಟವಳೆ ಜಾಣೆ । ಹೊಟ್ಟೆ ಹಸಿದಾಗ ಉಂಡವನೆ ಜಾಣ.

೭೦೯. ಕೆಟ್ಟೋರ ಸಂಗ ಹತ್ತಣ ಕೊಟ್ಟು ಬಿಡು :
ಒಳ್ಳೋರ ಸಂಗ ಹತ್ತಣ ಕೊಟ್ಟು ಮಾಡು.

೭೧೦. ಕೆಟ್ಟು ಪಟ್ಟಣ ಸೇರು । ಬಿಟ್ಟು ಹಳ್ಳಿ ಸೇರು.

೭೧೧. ಕೆಟ್ಟು ನೆಂಟರ ಸೇರಬೇಡ । ಕೊಟ್ಟ ದಾನ ತಿರುಗಿ ಕೇಳಬೇಡ.

೭೧೨. ಕೆಬ್ಬೆ ಹೊಲ ಮಾಡಿ ಕಿಬ್ರಿಗೆ ಹಿಟ್ಟಿಲ್ಲ.

೭೧೩. ಕೆಮ್ಮೋ ಎತ್ತು ಕೊಟ್ಟು ಗುಮ್ಮೋ ಎತ್ತು ತಗೊಂಡಂಗೆ.

೭೧೪. ಕೆಮ್ಮೋಳಾದ್ರು ನಮ್ಮೋಳೆ ವಾಸಿ.

೭೧೫. ಕೆರದ ಅಳತೆಗೆ ಕಾಲು ಕುಯ್ಯಿಸಿದ ಹಾಗೆ.

೭೧೬. ಕೆರೆ ಒಂದಿಗೆ ಮುನಿಸಿಕೊಂಡು ತಿಕ ತೊಳೀಲಿಲ್ಲವಂತೆ.

೭೧೭. ಕೆರೆ ನೀರ್ಗೆ ದೊರೆ ಅಪ್ಪಣೆಯೆ?

೭೧೮. ಕೆರೆ ಜೊತೆ ಕತ್ತೆ ಮುನಿಸಿಕೊಂಡ್ರೆ
ಅಂಗಳದ ಗರಿಕೆ ತಲೆ ಕೀಳಿಸ್ಕೊಳ್ಳೋದೆ ತಪ್ಪು.

೭೧೯. ಕೆಲಸಿಲ್ಲದವಳು ಮನಸಿಲ್ಲದವನ ಮೂತಿ ನೋಡುತ್ತಿದ್ದಳು.

೭೨೦. ಕೆಲಸಕ್ಕೆ ಮಾತ್ರ ಕರೀಬ್ಯಾಡ । ಊಟಕ್ಕೆ ಮಾತ್ರ ಮರೀಬ್ಯಾಡ.

೭೨೧. ಕೆಳಗೆ ಬಿದ್ರೂ ಮೀಸೆ ಮಣ್ಣಾಗಲಿಲ್ಲವಂತೆ.

೭೨೨. ಕೆಂಪು ಸೀರೆ ಉಟ್ಟಿರೋಳೆ ನನ್ನೆಂಡ್ರು ಅಂದಂತೆ.

೭೨೩. ಕೇಡುಗಾಲಕ್ಕೆ ಕೋಡಗಬುದ್ಧಿ.

೭೨೪. ಕೇಡುಗಾಲಕ್ಕೆ ನಾಯಿ ಮೊಟ್ಟೆ ಇಕ್ತು.

೭೨೫. ಕೇಡುಗಾಲಕ್ಕೆ ಬುದ್ಧಿಲ್ಲ । ಮರಣಕ್ಕೆ ಮದ್ದಿಲ್ಲ.

೭೨೬. ಕೇಮಿಲ್ಲದ ಕುಂಬಾರ ಕೂತ್ಗೊಂಡು ಮಗಳ ಕುಂಡಿ ತಟ್ದ.

೭೨೭. ಕೇಳುವವನಿಗೆ ಹೇಳುವವನು ದೊರೆ.

೭೨೮. ಕ್ಷೇಮವಿಲ್ಲದಿದ್ದರೂ ಹೇಮದಾಸೆ ಬಿಡ.

೭೨೯. ಕೈ ಕೆಸರಾದರೆ ಬಾಯಿ ಮೊಸರು.

೭೩೦. ಕೈಗೆ ಅಂಟಾದರೆ ಬಾಯಿಗೂ ಅಂಟೆ?

೭೩೧. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ.

೭೩೨. ಕೈತುಂಬ ಗೆಯ್ಮಿ । ಬಾಯಿತುಂಬ ಉಣ್ಣು.

೭೩೩. ಕೈ ಬಾಯಿ ಕಚ್ಚೆ ಮೂರು ಭದ್ರವಾಗಿದ್ರೆ,
ಮೂಲೋಕದಲ್ಲೂ ಸೈ ಅನ್ನಿಸ್ಕೊಬಹುದು.

೭೩೪. ಕೈಸರಿಯಾಗಿರದಿದ್ದರೆ ಕಳ್ಳ । ಹೊಟ್ಟೆಗಿರದಿದ್ದರೆ ಬಡವ.

೭೩೫. ಕೈಲಾಗ್ದೋನು ಮೈ ಪರಚಿಕೊಂಡ.

೭೩೬. ಕೈಲಿ ಕಾಸಿಲ್ಲ : ಅಂಗಡಿಯವಗೂ ನನಗೂ ಮಾತಿಲ್ಲ.

೭೩೭. ಕೈಲಿ ಕಿಸೀದ ಗಂಡ ಮಲಗೋಹೊತ್ತಿಗೆ ಮುನಿಸಿಕೊಂಡ.

೭೩೮. ಕೈಲಿ ಬ್ಯಾಟ್ರಿ । ಮನೇಲಿ ಲಾಟ್ರಿ.

೭೩೯. ಕೈ ಹುಣ್ಣಿಗೆ ಕನ್ನಡಿ ಯಾಕೆ?

೭೪೦. ಕೊಟ್ಟ ದೇವರು ಕೊಂಡುಹೋದರೆ ಕುಟ್ಟಿಕೊಂಡು ಅಳೋದು ಯಾಕೆ?



೭೪೧. ಕೊಟ್ಟಣ ಕುಟ್ಟಿ ಮಿಂಡನ ಸಾಕಿದಂತೆ.

೭೪೨. ಕೊಟ್ಟ ಸಾಲ ಕೇಳ್ದೆ ಹೋಯ್ತು,
ಮಾಡಿದಬದುಕು ನೋಡ್ದೆ ಹೋಯ್ತು.

೭೪೩. ಕೊಟ್ಟೋನು ಕೋಡಂಗಿ । ಈಸ್ಕೊಂಡೋನು ಈರಭದ್ರ.

೭೪೪. ಕೊಟ್ಟಿದ್ದು ತನಗೆ । ಬಚ್ಚಿಟ್ಟಿದ್ದು ಪರರಿಗೆ.

೭೪೫. ಕೊಟ್ರೆ ಕೊಂಡ್ರೆ ಗೆಳತಿ । ಕೊಡದಿದ್ರೆ ಸವತಿ.

೭೪೬. ಕೊಟ್ಟು ಕೆಟ್ಟವನಿಲ್ಲ । ತಿರಿದು ಬದುಕಿದವನಿಲ್ಲ.

೭೪೭. ಕೊಟ್ಸಾಲ್ಗೆ ಹೆಣ್ಣು । ಬೆಟ್ಟಸಾಲ್ಗೆ ಮಳೆ.

೭೪೮. ಕೊಟ್ಟು ಕುದೀಬಾರದು । ಇಟ್ಟು ಹಂಗಿಸಬಾರದು.

೭೪೯. ಕೊಟ್ಟು ಕೆಟ್ಟೋನಿಲ್ಲ । ಇಟ್ಟು ಬದುಕಿದೋನಿಲ್ಲ.

೭೫೦. ಕೊಟ್ಟೋರ ವಡವೆ ಕೊಡಲಿಲ್ಲ । ನೆಟ್ಟ ಮರಕೆ ನೀರುಯ್ಯಲಿಲ್ಲ.

೭೫೧. ಕೊಡಲಿಗೆ ಹೆದರದ ಮರ ಕಾವಿಗೆ ಹೆದರೀತೆ ?

೭೫೨. ಕೊಡದೇ ಇರೋನ ಕೊಸರು ನೋಡು.

೭೫೩. ಕೊಡಲಿ ಕಾವು ಕುಲಕ್ಕೆ ಮೂಲ.

೭೫೪. ಕೊಡೋದ್ ಮೂರು ಕಾಸು । ಕ್ಯಾಣೆ ತುಂಬ ಹಾಸು.

೭೫೫. ಕೊಳಕು ಹಾರುವಯ್ಯ ಜಪ ಮಾಡಿದಂಗೆ.

೭೫೬. ಕೊರಮನಿಗೊಂದೂರೇ । ಕೊಕ್ರೆಗೊಂದ್ ಕೆರೆಯೇ ?

೭೫೭. ಕೊಂದ ಪಾಪ ತಿಂದು ಪರಿಹಾರ.

೭೫೮. ಕೊಂಡರೆ ಇಲ್ಲ ಕೊಸರಿದರೆ ಬಂದತ್ತೇ?

೭೫೯. ಕೋಟಿ ಸುಳ್ಳು ಹೇಳಿ ಒಂದು ಕನ್ಯಾದಾನ ಮಾಡು.

೭೬೦. ಕೋಟಿ ವಿದ್ಯದಾಗ ಮೇಟಿ ವಿದ್ಯವೆ ಮೇಲು.

೭೬೧. ಕೋಣಗಳ ಹೋರಾಟ ಗಿಡಕ್ಕೆ ಮೂಲ.

೭೬೨. ಕೋಣೆ ಗೆದ್ದೋಳು ಕೋಟೆ ಗೆದ್ದಾಳು.

೭೬೩. ಕೋತಿ ಕೈಗೆ ಮಾಣಿಕ್ಯ ಕೊಟ್ಟಂಗೆ.

೭೬೪. ಕೋತಿ ತಾನ್ ಕೆಡದೂ ಅಲ್ದೆ ವನಾನೆಲ್ಲಾ ಕೆಡುಸ್ತು.

೨೬೫. ಕೋಪದಲ್ಲಿ ಕೂದ ಮೂಗು ಶಾಂತಿಯಲ್ಲಿ ಬಂದೀತೆ?

೨೬೬. ಕೋಮಟಿಗ ಕೊಡ । ಜೈನಿಗ ಬಿಡ.

೨೬೭. ಕೋಳಿ ಕಾಲಿಗೆ ಗೆಜ್ಜೆ ಕಟ್ಟಿದರೆ ತಿಪ್ಪೆ ಕೆರಿಯೋದ ಬಿಡ್ತದ?

೨೬೮. ಕೋಳಿ ಕೇಳಿ ಮೆಣಸು ಅರೀತಾರ?

೨೬೯. ಕೋಳಿಗೆ ಸಿರಿಬಂದು ಜ್ವಾಳವಲ್ದು,
ನಮ್ಮತ್ತೆಗೆ ಸಿರಿಬಂದು ನಮ್ಮಾವನ್ನೇ ವಲ್ಲು.

೨೭೦. ಕೋಳಿ ತಿಂದೋನು ಹೋಳಿಗೆ ಮುಟ್ಟುತಾನ?

೨೭೧. ಕೋಳಿಕಳ್ಳಿ ಮನೆ ಹಣ್ತೆ ಮಿಣ್ಕಮಿಣ್ಕ ಅಂತಿತ್ತಂತೆ.

೨೭೨. ಕೋಳಿ ಸಾಕಿ ಕೊಠಾರ ಹಾಳಾಯಿತು.

## ಖ

೨೭೩. ಖಂಡಿತವಾದಿ ಲೋಕ ವಿರೋಧಿ.

೨೭೪. ಖಂಡುಗ ಹಾಲಿಗೆ ಸೊಲಿಗೆ ಹೆಪ್ಪು.

೨೭೫. ಖಂಡುಗ ಹೊತ್ತುಕೊಂಡು ಕಣಿ ಕೇಳ್ದಂಗೆ.

೨೭೬. ಖಂಡುಗ ನೀರು ಹುಯ್ಕೊಂಡರೂ ಮಂಡೆಮ್ಯಾಲೆ ನಿಲ್ಲೂದಿಲ್ಲ.

೨೭೭. ಖೂನಿ ಮಾಡೋನಿಗೆ ಕತ್ತಲೇನು ಬೆಳಕೇನು?

## ಗ

೨೭೮. ಗಡ್ಡಕ್ಕೆ ಬೆಂಕಿ ಬಿದ್ದಾಗ ಬಾವಿ ತೋಡಿದ್ಹಂಗೆ.

೨೭೯. ಗಡಿಗೇಲಿ ಎಣ್ಣೆ ಇರೋತನಕ ಗರ್ತಿ ಕಣ್ಣಿಗೆ ನಿದ್ದೆ ಇಲ್ಲ.

೨೮೦. ಗತಿಯಿಲ್ಲದ ಮುಂಡೆ ಗೌಡ್ನತ್ರ ಸಂಕ್ಟ ತೋಡ್ಕೊಂಡ್ರೆ,
'ಹಿತ್ಲು ಬಾಗ್ಲು ಹಾಕ್ಬ್ಯಾಡ ರಾತ್ರಿಗೆ ಬರ್ತೀನಿ' ಅಂದನಂತೆ.

೨೮೧. ಗರತಿಗೆ ಹಾದರ ಸಲ್ಲ । ಸೂಳೆಗೆ ವ್ರತ ಸಲ್ಲ.

೨೮೨. ಗಳಿಸಿಟ್ಟವ ನುಂಗಿ ಸಾಯಲಿಲ್ಲ । ಸಾಲ ಇದ್ದವ ಹರಿದು ಸಾಯಲಿಲ್ಲ.

೨೮೩. ಗಳಿಸಿದವನ ಗಂಟ್ನ ಬಳಸ್ಕೋನ್ ಮುಕ್ದ.

೨೮೪. ಗಾಣಗಿತ್ತಿ ಅಯ್ಯೊ ಅಂದ್ರೆ ಮಗೀನ ನೆತ್ತಿ ತಣ್ಣಗಾದತ್ತೆ?



೨೮೫. ಗಾಣಿಗನ ಮೇಲೆ ಸಿಟ್ಟು ಬಂದು ಒಣರೊಟ್ಟಿ ತಿಂದಂಗೆ.

೨೮೬. ಗಾಳಿ ಗುದ್ದಿ ಮೈ ನೋಯಿಸಿಕೊಂಡಂಗೆ.

೨೮೭. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ?

೨೮೮. ಗಿಣಿ ಸಾಕಿ ಗಿಡುಗನ ಕೈಗೆ ಕೊಟ್ಟಂಗೆ.

೨೮೯. ಗುಟ್ಟು ಮಾತು ಗುಮಾನದಲ್ಲಿರಲಿ । ಗುಡಿಸಲಲ್ಲಿಷ್ಟು ತಾವಿರಲಿ.

೨೯೦. ಗುಡ್ಡಕೆ ಕಲ್ಲು ಹೊತ್ತಂತೆ । ಸಮುದ್ರಕೆ ನೀರು ಹೊತ್ತಂತೆ.

೨೯೧. ಗುಡ್ಡದ ಸೀಮೆ ದನ ತರಬೇಕು । ಕಂಡ ಕಡೆ ಹೆಣ್ಣು ತರಬೇಕು.

೨೯೨. ಗುಬ್ಬಿ ಮ್ಯಾಲೆ ಬ್ರಹ್ಮಾಸ್ತ್ರವೆ । ತಬ್ಬಲಿ ಮ್ಯಾಲೆ ಹಾರಾಟವೆ?

೨೯೩. ಗುರು ಇಲ್ಲದ್ದು ಮಠ ಅಲ್ಲ । ಹಿರಿಯರಿಲ್ಲದ್ದು ಮನೆ ಅಲ್ಲ.

೨೯೪. ಗುರು ಕೊಟ್ಟ ಜೋಳಿಗೆ ಅಂತ ಗೂಟಕ್ಕೆ ಹಾಕಿದರೆ ಊಟ ಹಾಕೀತೇ?

೨೯೫. ಗುರು ನಿಂತು ಉಚ್ಚೆ ಉಯ್ದರೆ । ಶಿಷ್ಯ ಓಡಾಡಿಕೊಂಡು ಉಯ್ದ.

೨೯೬. ಗುರುವಿಗೆ ಗುಟುಕು ನೀರು । ಶಿಷ್ಯನಿಗೆ ಎಣ್ಣೆಮಜ್ಜನ.

೨೯೭. ಗುರುವಿನಂತೆ ಶಿಷ್ಯ । ತಂದೆಯಂತೆ ಮಗ.

೨೯೮. ಗೂಳೂರು ಊಬತ್ತಿ ಏಳೂರು ಊಟ ಕೆಡಸ್ತು.

೨೯೯. ಗೆಜ್ಜೆ ಕಟ್ಟಿದ ಮೇಲೆ ಲಜ್ಜೆ ಯಾಕೆ?

೩೦೦. ಗೆದ್ದ ಎತ್ತಿನ ಬಾಲ ಹಿಡಿಯೋರ ಎದ್ದು ಮುಖ ನೋಡಬಾರ್ದು.

೩೦೧. ಗೆದ್ದರೆ ಆಡೋದಕ್ಕೆ ಅನ್ನೋದು । ಸೋತರೆ ನೋಡೋದಕ್ಕೆ ಅನ್ನೋದು.

೩೦೨. ಗೆಯ್ಮಿಲ್ಲ, ಗೆತ್ನಿಲ್ಲ : 'ಗಂಡಿಲಿ ಪಾಲು ನನಗಿರಲಿ' ಅಂದ.

೩೦೩. ಗೆಳೆತನದ ಗುಣ ಬಡತನದಲ್ಲಿ ನೋಡು.

೩೦೪. ಗೇದುಣ್ಣೋರವ್ವನ್ನ ಕುಂತಿರೋರು ತೇದು ಕುಡಿದರು.

೩೦೫. ಗೋಕುಲದಲ್ಲಿ ಏಕಾಂತವೆ? ಸಂತೆಯಲ್ಲಿ ಶಾಂತಿಯೆ?

೩೦೬. ಗೌಡನ ಸೂಳಿ ಅಂದ್ರ ಗಂಗಾಳ ಮಾರಿ ಸಕ್ಕರೆ ಹಂಚಿದಳು.

೩೦೭. ಗೌಡ ಮಾತಾಡ್ತಾ ಮಾತಾಡ್ತಾ ಅವರೆಕಾಯಿ ಕೂದನಂತೆ.

೩೦೮. ಗಂಗೆಗೆ ಭೇದವಿಲ್ಲ । ಲಿಂಗಕ್ಕೆ ಹೊಲೆಯಿಲ್ಲ.

೩೦೯. ಗಂಗೆಗೆ ಹೋದರೂ ತಂಬಿಗೆ ಮೇಲೆ ಜ್ಞಾನ.

೮೧೦. ಗಂಜಿ ಕುಡಿದರೂ ಗಂಡನ ಮನಿ ಲೇಸು.

೮೧೧. ಗಂಟು ಇದ್ದವರಿಗೆ ನೆಂಟರ ಕೊರತಿಲ್ಲ.

೮೧೨. ಗಂಟು ಪರರ ಕೈಲಿ ಕೊಟ್ಟು ಸೊಂಟಾ ಮುರಿಸಿಕೊಂಡ.

೮೧೩. ಗಂಡ ಗಂಡಾಗುಂಡಿ । ಹೆಡ್ತಿ ಭೆಂಗಾಬಿಂಗಿ.

೮೧೪. ಗಂಡ್ನಲ್ ಗುಣವಿಲ್ಲ । ಕೆಂಡದೇಲ್‌ತನುವಿಲ್ಲ । ಗಡಗೇಲ್ ಅಕ್ಕಿಲ್ಲ,
ಅಯ್ಯಯ್ಯೋ ಬದ್ಕೆ - ನಾ ಬಂದುದ್ದೆ ಇದ್ಕೆ !

೮೧೫. ಗಂಡನ ಗುದ್ದಿಗೆ ಗುಡ್ಡ ಕೇಳ್ವಂಗ್ ಕಿರುಚಿಕೊಂಡ್ಳು
ಮಿಂಡನ ಗುದ್ದಿಗೆ ಮಿಸುಕಾಡ್ದೆ ಇದ್ಳು.

೮೧೬. ಗಂಡನ ಬಯಸಿ ಬಯಸಿ ಗುಂಡೇನಹಳ್ಳಿಗೆ ಹೋದ್ರೆ,
ಗಂಡಾಮಾಲೆಯೋನ್ ಸಿಕ್ಕಿದನಂತೆ.

೮೧೭. ಗಂಡನದು ತಿಂದು ಮಿಂಡನ ಚಾಕ್ರಿ ಮಾಡಿದಳು.

೮೧೮. ಗಂಡ ಬೈದರೆ ಹುಚ್ಚು । ಮಿಂಡ ಬೈದರೆ ಮೆಚ್ಚು.

೮೧೯. ಗಂಡ ಮೂಸಂಡಿ । ಹೆಂಡ್ರು ಪ್ರಚಂಡಿ.

೮೨೦. ಗಂಡ ಸತ್ತಮೇಲೆ ಹೆಂಡತಿ ಬುದ್ಧಿವಂತೆ.

೮೨೧. ಗಂಡಸಿಗೇಕೆ ಗೌರಿದುಃಖ । ಹೆಂಗಸಿಗೇಕೆ ಮಾರಿದುಃಖ?

೮೨೨. ಗಂಡಹೆಂಡಿರ ಜಗಳ ಉಂಡು ಮಲಗೋತನಕ,
ಸೂಳೆಮಿಂಡನ ಸರಸ ಕೊಂಡುಹೋಗೋತನಕ.

೮೨೩. ಗಂಡ ಹೆಂಡಿರ ಜಗಳದಾಗ ಕೂಸು ಬಡವಾಯ್ತು.

೮೨೪. ಗಂಡಸಿನ ಕೈಲಿ ಕೂಸಿರಲ್ಲ । ಹೆಂಗಸಿನ ಕೈಲಿ ಕಾಸಿರಲ್ಲ.

೮೨೫. ಗಂಡನ ಕರಕೊಂಡು ಜಾತ್ರಿಗೆ ಹೋಗಬ್ಯಾಡ,
ಮಕ್ಳ ಕರಕೊಂಡು ಮದ್ವೆಗೆ ಹೋಗಬ್ಯಾಡ.

೮೨೬. ಗಂಡಾ ಅಂತ ಕಟ್ಕೊಂಡ್‌ನಲ್ಲೆ ಗೆಂಡೆರಾಮ್ನ,
ಮಗಾ ಅಂತ ಎತ್ಕೊಂಡ್‌ನಲ್ಲೆ ಸೋರೆಬುಂಡೆಯ.

೮೨೭. ಗಂಧುಡಿ ಹಾಕ್ವಾಗ ಗಮಗಮ,
ಎದ್ದು ರಾಗಿ ಬೀಸುವಾಗ ಜುಮಜುಮ.



೮೨೮. ಗುಂಡ್ಗೆ ರೋಗಕ್ಕೆ ಗುಂಡೇ ಮದ್ದು.

೮೨೯. ಗೊಂಬೆಗೆ ಕೈಮುಗಿದರೂ ನಂಬಿಕೆ ಇರಬೇಕು.

## ಘ

೮೩೦. ಘಟ್ಟ ಮೇರುವಲ್ಲ । ಅಟ್ಟ ಸ್ವರ್ಗವಲ್ಲ.

೮೩೧. ಘಟ್ಟದ ಶೆಟ್ಟಿಗೆ ಉಪ್ಪಿನ ಬರವೇ?

## ಚ

೮೩೨. ಚಂಡಾಲ ದೇವರಿಗೆ ಹೆಂಡ ಕುಡಿಯೋ ಪೂಜಾರಿ.

೮೩೩. ಚಪ್ಪರಕ್ಕೆ ಗತಿ ಇಲ್ಲದವ ಉಪ್ಪರಿಗೆ ಬೇಡಿದ.

೮೩೪. ಚರ್ಮ ತೊಳೆದರೆ ಕರ್ಮ ಹೋದೀತೆ?

೮೩೫. ಚಾಡಿ ಮಾತಿನಿಂದ ಚಾವಡಿ ಹಾಳಾಯ್ತು.

೮೩೬. ಚಾತುರ್ಯ ಬಲ್ಲವನಿಗೆ ಚಾಚೂ ಚಿಂತಿಲ್ಲ.

೮೩೭. ಚಿಗಳಿ ತಿಂದೋಳು ಚಿಗತುಕೊಂಡಳು,
ಬಿಸ್ಕತ್ ತಿಂದೋಳು ಬಳ್ಳಕೊಂಡಳು.

೮೩೮. ಚಿನ್ನದ ಹರಿವಾಣವಾದರೂ ಮಣ್ಣಿನ ಗೋಡೆಗೆ ಒರಗಬೇಕು.

೮೩೯. ಚಿಕ್ಕ ಮಡಕೆ, ಚೊಕ್ಕ ಭೋಜನ.

೮೪೦. ಚಿಂತಿಲ್ಲದವನಿಗೆ ಸಂತೇಲೂ ನಿದ್ದೆ ಬಂತು.

೮೪೧. ಚೇಳಿನ ಮಂತ್ರ ಬಾರದವ ಹಾವಿನ ಹುತ್ತದಲ್ಲಿ ಕೈ ಹಾಕಿದ.

೮೪೨. ಚೊಕ್ಕಟಗಾತಿ ಮನೇಲಿ ಚಿಗಟ ಮೂಗಂಡುಗ.

೮೪೩. ಚೋಟುದ್ದ ಕೂಸಿಗೆ ಗೇಣುದ್ದ ಕುಲಾವಿ.

೮೪೪. ಚೋರ ಗುರು ಚಂಡಾಳ ಶಿಷ್ಯ.

೮೪೫. ಚೌಡಿ ಬಿಡಿಸೋನೆ ಹೆಣ ಹೊತ್ತಂಗೆ.

೮೪೬. ಚಂದ್ಕೆ ನಾಮ ಇಕ್ಕಿಸ್ಕೊಳ್ಳೋಕೆ ಮೇಲ್‌ಕ್ಯಾಟೆಗೆ ಹೋದ.

೮೪೭. ಚಿಂತೆ ಮುಪ್ಪು ಸಂತೋಷ ಹರೆವು.

೮೪೮. ಚೆಂದುಳ್ಳಿ ಹೆಣ್ಣಿಗೆ ಒಡವ್ಯಾಕೆ ಹೊಸ ರಾಗಿ ಹಿಟ್ಟಿಗೆ ಎಸರ್ಯಾಕೆ?

೮೪೯. ಚೇಳಿಗೆ ಮುತ್ತು ಕೊಟ್ಟಂಗೆ, ಚೆಲ್ಲುಮುಕ್ಕನ ಸಂಗ.

## ಛ

೮೫೦. ಛಲವಾದಿ ಸಂಗಡ ಹಟವಾದಿ ಸೇರಿದ ಹಾಗೆ.

## ಜ

೮೫೧. ಜಗಳಿಲ್ಲದ ಜಂಗಮಯ್ಯ ಅಂದ್ರೆ,
ಕಿವಿಹರಕಮುಂಡೆ ಭಿಕ್ಷಾ ನೀಡು ಅಂದನಂತೆ.

೮೫೨. ಜಟ್ಟಿ, ಜಾರಿ ಬಿದ್ದರೆ ಅದೂ ಒಂದು ಪಟ್ಟು.

೮೫೩. ಜನ ನೋಡಿ ಬೇಡಬೇಕು । ಜಾಗ ನೋಡಿ ಉಗುಳಬೇಕು.

೮೫೪. ಜನ ಮರಳೋ ಜಾತ್ರೆ ಮರುಳೋ.

೮೫೫. ಜಗಲೀ ಹಾರದವ ಗಗನ ಹಾರ್‍ಯಾನೆ?

೮೫೬. ಜಗ ಹೊರೋಳಿಗೆ ಮಗ ಭಾರವೇ?

೮೫೭. ಜಗಳಗಾತಿ ಮಗಳನರಿಯಳು। ಮಾಟಗಾತಿ ಮಗನರಿಯಳು.

೮೫೮. ಜಂಗಮನ ಹೆಂಡತಿ ಜಾಣೆಯಾದರೆ ಜಗಕ್ಕೆ ಬಂದ ಭಾಗ್ಯವೇನು?

೮೫೯. ಜಂಗಮಕ್ಕೆ ಕುಲವಿಲ್ಲ । ಗಂಗೆಗೆ ಹೊಲೆಯಿಲ್ಲ.

೮೬೦. ಜಳ್ಳು ಬೆಳ್ಳು ಸುಳ್ಳು ಹೇಳೋದು ಕಲ್ತ.

೮೬೧. ಜಾಣಗೆ ಮಾತಿನ ಪೆಟ್ಟು । ಕತ್ತೆಗೆ ಲತ್ತೆ ಪೆಟ್ಟು.

೮೬೨. ಜಾಣನಿಗೆ ಕಣ್ಸನ್ನೆ । ಕೋಣನಿಗೆ ದೊಣ್ಣೆ ಸನ್ನೆ.

೮೬೩. ಜಾಣನಿಗೆ ಜಗಳವಿಲ್ಲ । ರಾಗಿ ಉಂಡೋನಿಗೆ ರೋಗವಿಲ್ಲ.

೮೬೪. ಜಾತಿ ಕೆಟ್ರ್ಯೋದ್ರು ಊಟ ಚೆನ್ನಾಗಿರಬೇಕು.

೮೬೫. ಜಾತಿಗೆ ಜಾತಿ ವೈರಿ । ನೀರಿಗೆ ಪಾಚಿ ವೈರಿ.

೮೬೬. ಜಾತಿಗೆ ಭೇದವಾದರೂ ನೀತಿಗೆ ಭೇದವಿಲ್ಲ.

೮೬೭. ಜಾತಿ ಬಿಟ್ಟರೂ ನೀತಿ ಬಿಡಬಾರದು.

೮೬೮. ಜಾಪಾಳದ ಮಾತ್ರೆಗೆ ನೇಪಾಳಕ್ಕೆ ಹೋಗಬೇಕೇ?

೮೬೯. ಜಾಲಿ ಬಿತ್ತಿ ಕಾಲಿಗೆ ಮೂಲ ಮಾಡಿಕೊಂಡಂಗೆ.



೮೭೦. ಜಾರೆಗೆ ನೀತಿಲ್ಲ । ಮಾರಿಗೆ ಕರುಣೆಲ್ಲ.

೮೭೧. ಜೀನ ಗಳಿಸಿದ್ದ ಜಾಣ ಉಂಡ.

೮೭೨. ಜ್ಯೋತಿ ಇದ್ದಲ್ಲಿ ಭೀತಿಯಿಲ್ಲ.

೮೭೩. ಜೇನು ಬಿಚ್ಚಿದೋನು ಕೈ ನೆಕ್ಕದೆ ಇರ್‍ತಾನೆಯೇ?

೮೭೪. ಜೇನು ಸವಿ ಅಂತ ಮೇಣ ಸಹ ತಿಂದ ಹಾಗೆ.

## ಟ

೮೭೫. ಟೊಂಕ ಮುರಿದರೂ ಬಿಂಕ ಮುರಿಯಲಿಲ್ಲ.

೮೭೬. ಟೊಳ್ಳು ಮಾತು ಸುಳ್ಳಿಗಿಂತ ಕಡೆ.

## ಠ

೮೭೭. ಠಿಕಾಣಿ ಇಲ್ಲದವ ಮುಖ ಮುಚ್ಚಿಕೊಂಡ.

## ತ

೮೭೮ ತಗ್ಗಿ ಬಾಳಿದವ ನಾಳೆ ಎದ್ದು ಬಾಳ್ಯಾನು.

೮೭೯. ತಗ್ಗಿದವ ಜಯಿಸಿಯಾನು । ಹಿಗ್ಗಿದವ ಕುಗ್ಗಿಯಾನು.

೮೮೦. ತಡವ ಮಾಡುವವನ ಗೊಡವೆ ಬೇಡ.

೮೮೧. ತಣಿಗೆ ಹೋಯ್ತು ಅಂತ ಚೊಂಬು ಕೊಟ್ಟು ಕಣಿಕೇಳ್ದಂಗೆ.

೮೮೨. ತಣ್ಣೀರಾದರೂ ತಣಿಸಿಕೊಂಡು ಕುಡಿ.

೮೮೩. ತನ್ನಕ್ಕನ ಅರಿಯದವಳು । ನೆರಮನೆಯ ಬೊಮ್ಮಕ್ಕನ ಬಲ್ಲಳೇ?

೮೮೪. ತನ್ನ ಜ್ವಾಳ ಮಂದಿಗೆ ಕೊಟ್ಟು । ಗೌಡರ ಜ್ವಾಳ ಹಾಡಾಡಿ ಬೀಸಿದರಂತೆ.

೮೮೫. ತನ್ನ ನೀಯತ್ತು ತನಗೇ ಬರ್ಕತ್ತು.

೮೮೬. ತನ್ನನ್ನು ಆಳದವನು ಲೋಕ ಆಳ್ತಾನೆಯೇ?

೮೮೭. ತನ್ನ ಬಲ ತೆಂಗಿನ ಫಲ । ಅನ್ಯರ ಬಲ ಮಾವಿನ ಫಲ.

೮೮೮. ತನ್ನ ಬಲವೇ ಬಲ । ರಾಗಿ ಫಲವೇ ಫಲ.

೮೮೯. ತನ್ನ ಬೆನ್ನು ತನಗೆ ಕಾಣದು। ಕನ್ಯೆ ಕನಸ ಅನ್ಯರು ಕಾಣರು.

೮೯೦. ತನುವು ಇದ್ದ ಕಡೆ ತಾವರೆ। ಮನವು ಇದ್ದ ಕಡೆ ದೇವರು.

೮೯೧. ತನ್ನೂರಲಿ ರಂಗ । ಪರೂರಲಿ ಮಂಗ.

೮೯೨. ತನ್ನೂಸು ಹೊನ್ನೂಸು । ಮಗಳೂಸು ಮಾಣಿಕ್ಯ । ಸೊಸೆ ಹೂಸು ಕಸಿಪಿಸಿ !

೮೯೩. ತಪ್ಪು ಮಾಡದವರಿಲ್ಲ । ತುಪ್ಪ ಉಣದವರಿಲ್ಲ.

೮೯೪. ತಬ್ಬಲಿ ತಲೆ ಬೋಳಿಸಿಕೊಂಡರೆ ಆನೆಕಲ್ಲು ಮಳೆ ಬಂತು.

೮೯೫. ತಬ್ಬಲಿಗೆ ತಲೆಯೆಲ್ಲಾ ಮಾತು । ಜರಡಿಗೆ ಮೈಯೆಲ್ಲಾ ತೂತು.

೮೯೬. ತಬ್ಬಲಿಗೆ ತಲೆಯೆಲ್ಲಾ ಮಾತು । ಗೊಬ್ಬಿಗೆ ಮೈಯೆಲ್ಲಾ ಮುಳ್ಳು.

೮೯೭. ತಬ್ಬಲಿ ದೇವರಿಗೆ ತಂಬಿಟ್ಟಿನ ನೈವೇದ್ಯ.

೮೯೮. ತಮ್ಮಡಯ್ನೆ ತಿರುಕೊಂಡ್ ತಿಂತಿದ್ನಂತೆ
ಮಗ ಗೊನೆಮ್ಯಾಗ್ಲ ಹಣ್ಣ ಕೇಳಿದ್ನಂತೆ.

೮೯೯. ತಂಟರು ತಲೆಗ್ಯಾಕೆ ತಾಳೆ ಹೂವು?

೯೦೦. ತರುಬರೊ ಮಗಳು ಮನೆ ಕಳ್ಳಿ.

೯೦೧. ತಲಿ ಬೋಳಿಸಿದರೆ ಸುಳಿ ಹೋದೀತೆ?

೯೦೨. ತಳಿಗೆ – ಚೊಂಬು ಹೋದ ಮೇಲೆ ಮಳಿಗೇ ಬಾಗಿಲು ಮುಚ್ಚಿದ ಹಾಗೆ.

೯೦೩. ತಲೆಗೆ ಹೊರೆಯಾಗಿ ತಂದ ನನ ಗಂಡ ತೊಗ್ರಿ ಪುಳ್ಳೇಯ.

೯೦೪. ತಲೆ ಮೇಲೆ ಬಂದದ್ದು ಎಲೆ ಮೇಲೆ ಹೋಯ್ತು.

೯೦೫. ತಂಗಳುಂಡ ಬಡ್ಡಿ ಗಂಡನ ಹಸಿವೆ ಅರಿಯಳು.

೯೦೬. ತಂದ್ಯಾಕಿ ತಮಾಸೆ ನೋಡಿದ ಹಾಗೆ.

೯೦೭. ತಂತ್ರಗಾರನನ್ನು ಕುತಂತ್ರಗಾರ ಗೆದ್ದಂಗೆ.

೯೦೮. ತಿಂದರೆ ದಕ್ಕದು ಮಂದಿ ಹಣ.

೯೦೯. ತಿಂದು ಸೊಕ್ಕಿದ ಸನ್ಯಾಸಿ ಮಠ ಸುಟ್ಟ.

೯೧೦. ತುಂಟ ಕುದುರೆಗೆ ಗಂಟು ಲಗಾಮು.

೯೧೧. ತುಂಬಿದ ಕೆರೇನೂ ನಂಬಿದ ಮನೇನೂ ಒಡೀಬಾರ್ದು.

೯೧೨. ತುಂಬಿ ತುಂಬಿ ಒಯ್ದರೂ ಹಂಬಲ ಮಾತ್ರ ಹೋಗದು.

೯೧೩. ತುಂಬಿದ ಪಟ್ಟಣದಲಿ ಕಂಡ್ಯ ತುಂಡಂಗಿಯೋನ ಅಂದಂಗೆ.

೯೧೪. ತಾ ಕದೀಲಿಲ್ಲ । ಅರಸಗೆ ಅಂಜಲಿಲ್ಲ.



೯೧೫. ತಾ ಕಳ್ಳ ಪರರ ನಂಬ.

೯೧೬. ತಾನು ಎಡವಿಬಿದ್ದು ನೆಲ ಗೆಂಡೆ ಅಂದಂಗೆ.

೯೧೭. ತಾನೂ ತಿನ್ನ ಪರರಿಗೂ ಕೊಡ.

೯೧೮. ತಾನು ಬಾಳಲಾರದೆ ವಿಧಿ ಬಯ್ದಂತೆ.

೯೧೯. ತಾನು ಸಾಯಬೇಕು ಸ್ವರ್ಗ ಕಾಣಬೇಕು.

೯೨೦. ತಾನೆದ್ದು ಮಾಡದೆ ಬದುಕಿಲ್ಲ । ಬಾಣೆದ್ದು ಹುಯ್ಯದೆ ಮಳೆಯಿಲ್ಲ.

೯೨೧. ತಾನೊಂದು ಬಗೆದರೆ ದೈವವೊಂದು ಬಗೆಯಿತು.

೯೨೨. ತಾಮ್ರದ ದುಡ್ಡು ತಾಯಿ ಮಗನ್ನ ಕೆಡಿಸ್ತಂತೆ.

೯೨೩. ತಾಯಿ ಇದ್ದರೆ ತೌರು । ನೀರಿದ್ದರೆ ಕೆರೆ ಬಾವಿ.

೯೨೪. ತಾಯಿ ಇರಬೇಕು ಅಥವಾ ಬಾಯಿ ಇರಬೇಕು.

೯೨೫. ತಾಯಿಗಿಂತ ಹಿತವರು ಇಲ್ಲ । ಸಕ್ಕರೆಗಿಂತ ಸವಿ ಇಲ್ಲ.

೯೨೬. ತಾಯಿಗ್ಗಂಡ ದೇವರಿಗೆ ನಾಯಿಬುದ್ಧಿ ಪೂಜಾರಿ.

೯೨೭. ತಾಯಿಗಿಂತ ಬಂಧುವಿಲ್ಲ । ಉಪ್ಪಿಗಿಂತ ರುಚಿ ಇಲ್ಲ.

೯೨೮. ತಾಯಿಗೆ ಸೇರದ್ದು ನಾಯಿಗೂ ಸೇರದು.

೯೨೯. ತಾಯಿ ಮಾತ ಕೇಳದವ ನಾಯಿತಿಕದ ಹುಲ್ಲು.

೯೩೦. ತಾಯಿದ್ರೆ ತೌರೆಚ್ಚು । ತಂದಿದ್ರೆ ಬಳಗೆಚ್ಚು.

೯೩೧. ತಾಯಿಲ್ದೆ ಇರಬೌದು ನೆರಿಲ್ದೆ ಇರಕಾದತೇ?

೯೩೨. ತಾಯಿಯಂಗೆ ಮಗಳು । ನೂಲ್ನಂಗೆ ಸೀರೆ.

೯೩೩. ತಾಯಿ ಸೂಳೇ ಮಗಳೂ ಸೂಳೆ ಆದ್ರೆ ಎಡೆಬಾನ ಉಣ್ಣೋರ್ಯಾರು?

೯೩೪. ತಾರಕ್ಕೆ ಮೂರು ಸೇರು ಉಪ್ಪಾದರೂ ತರೋದಕ್ಕೆ ಗತಿ ಬೇಡವೋ?

೯೩೫. ತಾರು ಮಾರು ಮಾಡುವವಗೆ ಯಾರು ತಾನೆ ನಂಬ್ಯಾರು?

೯೩೬. ತಾಳಿದವ ಬಾಳಿಯಾನು । ತೂಗಿದವ ನೀಗಿಯಾನು.

೯೩೭. ತಾಳ ಹಾಕಕ್ಹೋಗಿ ತರಡು ಸಿಕ್ಕಿಸಿಕೊಂಡಂಗೆ.

೯೩೮. ತ್ಯಾಜ್ಯ ಮಾಡಿ ವ್ಯಾಜ್ಯ ಆಡಿದ.

೯೩೯. ತಿಕ ನೆಚ್ಚಬ್ಯಾಡ । ಅವರೆಕಾಳ್ ತಿನ್ನಬ್ಯಾಡ.

೯೪೦. ತಿಕ ಮಕ ಒಂದೆ ತಿಪ್ಪಾಭಟ್ಟರಿಗೆ.

೯೪೧. ತಿಕೆಚ್ಚಿದೋಳಿಗೆ ತಿಂಗ್ಳಿಗೆ ಮೂರೊಲೆ.

೯೪೨. ತಿಟ್ಟಿನಲ್ಲಿ ತಾಯಿ । ಹಳ್ಳದಲ್ಲಿ ಹೆಂಡತಿ.

೯೪೩. ತಿನ್ನೋಕ್ಹಿಟ್ಟಿಲ್ಲ । ತಿಕ್ಕೆ ಬಟ್ಟೆಲ್ಲ । ಜುಟ್ಟಿಗೆ ಮಲ್ಲಿಗೆಹೂವು !

೯೪೪. ತಿನ್ನೋದು ತಿರಿಕೆಹಿಟ್ಟು । ಮಲಗೋದು ಮಾರಿಗುಡಿ.

೯೪೫. **ತಿಪ್ಪೇಮ್ಯಾಲೆ ಮಲಗಿ ಉಪ್ಪರಗಿ ಕನಸು ಕಂಡರು.**

೯೪೬. ತಿರ್ಪಾಡಿ ಮನೆಗ್ಹೋಗಿ ತಿನ್ನಕ್ಕಿಟ್ಟಿಲ್ದೆ ಬಂದ್ಹಂಗೆ.

೯೪೭. **ತಿರಿಯೋಕೆ ಬಂದವ ಕರಿಯೋ ಹಸ ಕೇಳಿದ್ನಂತೆ.**

೯೪೮. ತಿರುಕನಿಗೆ ಎರಕೊಂಡದ್ದೇ ಹಬ್ಬ.

೯೪೯. ತಿರುಕನ ಬಳಿಗೆ ತಿರುಕ ಹೋದರೆ ಮರುಕ ಬರುವುದೆ?

೯೫೦. ತಿರುಕ ಹೆಡ್ತಿ ಕಟ್ಕೊಂಡ್ ಕ್ವಾಣೆಗೂ ಮನೆಗೂ ಲವ್ವಲವ್ವ ಅಂತ ತಿರುಗ್ತಿದ್ದ.

೯೫೧. **ತಿರುಗಿ ತಿರುಗಿ ತಿಮ್ಮಪ್ಪನತ್ರ ಹೋದರೆ ತಿರಿದುಂಬೋದು ತಪ್ಪೀತೆ?**

೯೫೨. ತಿರುಕೊಂಡ್ ತಿಂದ್ರೂ । ಕರಕೊಂಡ್ ಉಣ್ಣು.

೯೫೩. ತಿರುಕೊಂಡ್ ತಿನ್ನೋರವ್ವನ್ನ ಬಳಸ್ಕೊಂಡ್ ಬೈದ್ರು.

೯೫೪. ತಿರುಮಲ ದೇವರಿಗೆ ಹೋಗಿ ಮಲಮೂತ್ರ ಬಯಸಿದಂಗೆ.

೯೫೫. ತಿವಿದುಕೊಂಡರೆ ಬಂದೀತೆ ತಿಮ್ಮಪ್ಪನ ದಯೆ?

೯೫೬. ತಿಂಗಳ ಮಗು ಬಿಂಗಿಯಂಗೆ.

೯೫೭. ತೀರಾ ಮುಳುಗಿದೋನಿಗೆ ಮಳೆಯೇನು ಚಳಿಯೇನು?

೯೫೮. ತುಡುಮುಡುಕಿ ಜೀವ । ತುಪ್ಪದ ಗಡಿಗೇಲು ನಿಲ್ಲುದಿಲ್ಲ,
ಎಣ್ಣೆ ಗಡಿಗೇಲೂ ನಿಲ್ಲುದಿಲ್ಲ.

೯೫೯. ತುತ್ತು ತೂಕ ಕೆಡಿಸ್ತು । ಮಾತು ಮನೆ ಕೆಡುಸ್ತು.

೯೬೦. ತುತ್ತು, ಹೆತ್ತ ತಾಯೀನ ಮರೆಸಿತು.

೯೬೧. ತುರುಬು ಹಿಡಿದು ತುಪ್ಪ ಕುಡಿಸಿದರೂ : ಅತ್ತಿ ಅತ್ತೀನೆ ಸೊಸಿ ಸೊಸೀನೆ !

೯೬೨. ತುರುಬು ಇಲ್ಲದವಳಿಗೆ ತಾಳೆ ಹೂವೇ?

೯೬೩. ತುಪ್ಪದ ಮಾತಿಗೆ ಒಪ್ಪಿಕೊಂಡು ತಿಪ್ಪೆ ಪಾಲಾದ.



೯೬೪. ತುಪಾಕಿ ಹೊಟ್ಟೇಲಿ ಪಿರಂಗಿ ಹುಟ್ಟಿದ ಹಾಗೆ.

೯೬೫. ತುಂಬಿದ ಕೊಡ ತುಳುಕೋದಿಲ್ಲ.

೯೬೬. ತೃಷೆ ಇಲ್ಲದವ ಋಷಿಗೆ ಸಮಾನ.

೯೬೭. ತೂಗಿ ತಿಂದು ತಿಣುಕಿ ಹೇತನಂತೆ.

೯೬೮. ತೆಂಗಿನಮರ ಏರೋನ ತಿಕ ಎಲ್ಲೀತನಕ ಹಿಡಿಯೋದು?

೯೬೯. ತೊತ್ತಿಗ್ಯಾಕೆ ತುಪ್ಪದ ಚಿಂತೆ । ಕೊತ್ತಿಗ್ಯಾಕೆ ಸಂತೆ ಚಿಂತೆ?

೯೭೦. ತೊನ್ನು ಹಿಡಿದವ ಹೊನ್ನು ಖರ್ಚು ಮಾಡಿದರೆ ಹೋದೀತೆ?

೯೭೧. ತೋಟದ ಮೂಳನಿಗೆ ಯಾತರ ಸಿರಿ ಅಂದರೆ,
ನೇತಾಡುವ ಎರಡು ಬದನೆಕಾಯಿ ಸಿರಿ.

೯೭೨. ತೋಡಿದ ಬಾವಿಗೆ ಜಲವೇ ಸಾಕ್ಷಿ । ಮಾಡಿದ ಪಾಪಕ್ಕೆ ಮನವೇ ಸಾಕ್ಷಿ.

೯೭೩. ತೋಳ ಹಳ್ಳಕ್ಕೆ ಬಿದ್ದಾಗ ಆಳಿಗೊಂದು ಕಲ್ಲು.

೯೭೪. ತೊಂಡು ಮುಂಡೆಗೆ ಗಂಡನೇನು? ಮಿಂಡನೇನು?

೯೭೫. **ತೌರು ತಿನ್ನೋದು ಕಲಿತುಕೊಂಡರೆ । ತೌಡು ತಿನ್ನೋದು ಬತ್ತದೆ.**

೯೭೬. ತೌರುಮನೆ ತುಪ್ಪ ಅನ್ನಕ್ಕಿಂತ ಗಂಡನಮನೆ ಗಂಜಿ ಲೇಸು.

## ದ

೯೭೭. ದಕ್ಕೀತು ಎಂದು ತಕ್ಕದಲ್ಲದ ಮಾಡಬಾರದು.

೯೭೮. ದಗರಿ ಬಾಡಲ್ಲ । ದರವೇಸಿ ಗಂಡನಲ್ಲ.

೯೭೯. ದಗೆಯೆಂಬುದು ಹಗೆಯೇ ಸರಿ.

೯೮೦. ದಣಿದ ಎತ್ತಿಗೆ ಮಣವೂ ಭಾರ.

೯೮೧. ದಡ್ಡನಿಗ್ಯಾಕೆ ಬಡ್ಡಿ ಚಿಂತೆ । ಮಡ್ಡನಿಗ್ಯಾಕೆ ಮಣದ ಚಿಂತೆ?

೯೮೨. ದತ್ತಕ ಮಗ ಮಗಾ ಅಲ್ಲ । ಜಾಲಿಗಿಡ ನೆರಳಲ್ಲ.

೯೮೩. ದನದ ಮನಸ್ಸೂ । ದಾಯಾದಿ ಮನಸ್ಸೂ ಯಾರು ಬಲ್ಲರು?

೯೮೪. **ದಬ್ ದುಬ್ ಅನ್ನುವಾಗ ನಗ ಬತ್ತು,
ಬಡ್ಡಿ ಸೂಳೆ ಅನ್ನುವಾಗ ಅಳ ಬತ್ತು .**

೯೮೫. ದಂಡಕ್ಕೈತಿ । ದೋಷಕ್ಕೈತಿ । ಹಿರೇಮಗನ ಮದ್ವೆಗಿಲ್ಲ.

೯೮೬. ದಂಡಿನಲ್ಲಿ ಸೋದರಮಾವನೇ?

೯೮೭. ದಂಡಿಗೋದೋನ್ಹೆಂಡ್ರು ಎಂದಿದ್ರೂ ಮುಂಡೆ.

೯೮೮. ದಂಡಿನಲ್ಲಿ ಕೇದದ್ದು ಹಾದರವಲ್ಲ, ಬರದಲ್ಲಿ ಕದ್ದದ್ದು ಕಳವಲ್ಲ.

೯೮೯. ದಾಕ್ಷಿಣ್ಯಕ್ಕೆ ಬಸುರಾಗಿ ಹೆರೋಕೆ ತಾವಿಲ್ಲ.

೯೯೦. ದಾನಕ್ಕಿಂತ ದೊಡ್ಡದಿಲ್ಲ । ದಾನ ಮಾಡಿ ಕೆಟ್ಟೋರಿಲ್ಲ.

೯೯೧. ದಾನದ ಮನಿ ಮುಂದೆ ಶ್ವಾನ ಕಟ್ಟಿದರು.

೯೯೨. ದಾನ ದಾನಕ್ಕಿಂತ ಅನ್ನದಾನ ಮೇಲು.

೯೯೩. ದಾನಿಲ್ಲದ ಮನೆ ದೊಡ್ಡದಾದರೇನು?

೯೯೪. ದಾಯಾದಿ ಇದ್ದ ಕಡೆ ಬೆಂಕಿ ಹುಡುಕಬೇಕಾಗಿಲ್ಲ.

೯೯೫. ದಾರೀಲಿ ಹೋಗೋನ್ನ ಅಪ್ಪಾ ಅಂದ್ರೆ,
ಯಾರಿಗೆ ಹುಟ್ಟಿದೋ ಮಗನೆ ಅಂದನಂತೆ.

೯೯೬. ದಾರೀಲಿ ಹೋಗೋನು ಸತ್ತದ್ದಕ್ಕೆ ದನ ಕಾಯೋನು ಅತ್ತಂಗೆ.

೯೯೭. ದಾಸ ನಂಟನಲ್ಲ । ದೋಸೆ ಊಟವಲ್ಲ.

೯೯೮. ದಾಸಯ್ಯ ಎತ್ತ? ದನ ಕರ ಎತ್ತ?

೯೯೯. ದಾಸರ ಆಟ ಆಟಲ್ಲ । ದೋಸೆ ಊಟ ಊಟಲ್ಲ.

೧೦೦೦. ದಿನಾ ಸಾಯೋರಿಗೆ ಅಳೋರ್‍ಯಾರು?

೧೦೦೧. ದೀಪಾವಳೀಲಿ ದನ ಕೆಣಕಬ್ಯಾಡ । ಸುಗ್ಗೀಲಿ ಹೊಲೆಯನ ಕೆಣಕಬ್ಯಾಡ.

೧೦೦೨. ದುಗ್ಗಾಣಿ ಮುಂಡೆ ಹತ್ತಿರ ದೋಸೆಗೆ ಹೋದ ಹಾಗೆ.

೧೦೦೩. ದುಡಿತವೇ ದುಡ್ಡಿನ ತಾಯಿ.

೧೦೦೪. ದುಡ್ಡಿನ ಆಸೆಗೆ ಬೆಲ್ಲ ಮಾರಿ ಗೋಣಿಚೀಲ ನೆಕ್ಕಿದ.

೧೦೦೫. ದುಡೀಬೇಕು ಇಲ್ಲ । ಕೆಡೀಬೇಕು.

೧೦೦೬. ದುಡ್ಡೂ ದಂಡ । ತಲೆಯೂ ಬೋಳು.

೧೦೦೭. ದುಡ್ಡು ಮಾತಾಡುವಾಗ ದಿಟ ಮೂಕವಾಯ್ತು.

೧೦೦೮. ದುರುಳನ ಕಂಡಾಗ ಸುಮ್ಮನೆ ತೆರಳಬೇಕು.

೧೦೦೯. ದುಷ್ಟರ ಕಂಡರೆ ದೂರವಿರು.



೧೦೧೦. ದೂತತ್ವ ಮಾಡುವವನಿಗೆ ಭೀತತ್ವ ಸಲ್ಲದು.

೧೦೧೧. ದೂರದ ಬೆಟ್ಟ ನುಣ್ಣಗೆ.

೧೦೧೨. ದೂರದ ಮದ್ದು ಕಾಯಿಲೆಗಾಗೊಲ್ಲ.

೧೦೧೩. ದೂರನ್ನು ಎದುರಿಗೆ ಆಡು । ಹೊಗಳನ್ನು ಹಿಂದೆ ಆಡು.

೧೦೧೪. ದೆಸೆ ಕಡಿಮಿ ಆದಾಗ ಕಸಬರಗಿ ಎದ್ದು ಬಡೀತು.

೧೦೧೫. ದೆಸೆಗಾಲ ಒಂದಿದ್ರೆ ದಶದಿಕ್ಕು ನಡುಗ್ತಾವೆ.

೧೦೧೬. ದೈನ್ಯವಾಗಿ ಬೇಡೋದಕ್ಕಿಂತ ದೈವಾಧೀನವಾಗೋದೆ ಲೇಸು.

೧೦೧೭. ದೇವರ ಮಗನಾದರೂ ಮಾಡಿದ್ದೇ ಉಣಬೇಕು.

೧೦೧೮. ದೇವರು ವರ ಕೊಟ್ರೂ ಪೂಜಾರಿ ಕೊಡ.

೧೦೧೯. ದೇಶಾಂತ್ರ ಹೋದ್ರೂ ಸ್ವತಂತ್ರವಾಗಿ ಹೋಗು.

೧೦೨೦. ದೊಡ್ಡವನಾಡಿದರೆ ಆಟ । ಬಡವನಾಡಿದರೆ ಬಂಡಾಟ.

೧೦೨೧. ದೊಡ್ಡವನುಂಡರೆ ಮದ್ದು । ಬಡವನುಂಡರೆ ಹೇಸಿಗೆ.

೧೦೨೨. ದೊಡ್ಡವರ ಮನೆ ಮಾತು ಚಂದ । ಬಡವರ ಮನೆ ಊಟ ಚಂದ.

೧೦೨೩. ದೊಡ್ಡೋರ ಮಕ್ಕಳಿಗೆ 'ಹೋಗಿ - ಬನ್ನಿ',
ಬಡವರ ಮಕ್ಕಳಿಗೆ 'ಹೋಗ್ಲ - ಬಾರ್ಲ'

೧೦೨೪. ದೊಡ್ಡೋರು ಹಗೇವ್ ತಗಿಯೋವತ್ಗೆ ಬಡವ್ನ ಕಣ್ಣು ನೆಟ್ಟಗಾದೊ.

೧೦೨೫. ದೊಡ್ಡೋರ್ ತಿಕ ಅಡ್ಡ ಮೊಳ ! .

೧೦೨೬. ದೊಡ್ಡೋರ ಹೆಂಡತಿ ಎಲ್ಲರಿಗೂ ಅತ್ತೆ.

೧೦೨೭. ದೊಡ್ಡೋರ ಹೆಂಡ್ತಿ ದೊಡ್ಡೋಳಾದ್ರೆ,
ನನ್ನ ಬುಡಕ್ಕೆ ಬಂದ ಐಶ್ವರ್ಯ ಏನು?

೧೦೨೮. ದೊರೆ ಅರುಗಿನ ಮನೆ ಬೇಡ । ತೊರೆ ಅರುಗಿನ ತೋಟ ಬೇಡ.

೧೦೨೯. ದೊಂಬರಾಟ ಆಡ್ಬೋದು । ಮಕ್ಕಳಾಟ ಆಡೋಕಾಗಲ್ಲ !

೧೦೩೦. ಧರ್ಮಕ್ಕೆ ದಟ್ಟಿ ಕೊಟ್ರೆ ಹಿತ್ಲಿಗೆ ಹೋಗಿ, ಗುದ್ದಿ ಗುದ್ದಿ ಮೊಳ ಹಾಕ್ದ.

೧೦೩೧. ಧರ್ಮ ಮಾಡಿದರೂ ಮರ್ಮ ತಿಳಿಯಬೇಕು.

೧೦೩೨. ಧೈರ್ಯವಿದ್ದರೆ ದೈವ ಸಹಾಯ.

೧೦೩೩. ಧಾನ್ಯ ಹೆಚ್ಚಿದವನಿಗೆ ಮಾನ್ಯ ಬರುವುದು.

# ನ

೧೦೩೪. ನಕ್ಕರೆ ಸಾಯೋ ಬಡ್ಡಿ ಮಕ್ಕಳ್ಹೆತ್ತಾಳೆ?

೧೦೩೫. ನಡದಾಗ ಸೀರಿ ಹರಿಬಾರದು । ನಡಬರಕ ಸಿರಿ ಇರಬಾರದು.

೧೦೩೬. ನಡೀತಾ ಇದ್ರೆ ನಂಟು । ಬೆಳಗ್ತಾ ಇದ್ರೆ ಕಂಚು.

೧೦೩೭. ನಡೆಯುವವ ಎಡವುತಾನೆ । ಬರೆಯುವವ ತಪ್ಪುತಾನೆ.

೧೦೩೮. ನನ್ ಕೋಳಿಯಿಂದ್ಲೇ ಬೆಳಕರಿಯೋದು ಅಂದಂಗೆ.

೧೦೩೯. ನನಗ ನಿನಗ ಹಿತ ಇಲ್ಲ । ನಿನ್ನ ಬಿಟ್ಟು ನನಗೆ ಗತಿ ಇಲ್ಲ.

೧೦೪೦. ನನ್ನಂಗೆ ಉಣ್ಣೋರಿಲ್ಲ । ನನ್ನ ಗಂಡನಂಗೆ ನಳ್ಳೋರಿಲ್ಲ.

೧೦೪೧. ನನ್ನ ಸಾಕ್ದೋರ್ ಕಣ್ಣಿಂಗೋದ್ರೆ ಚಟ್ಟಿಹಾಲು ಎಂದಿಗೆ ಕುಡ್ದೇನು ಅಂದ್ಲು.

೧೦೪೨. ನನ್ನೆಂಡ್ರು ಪದ್ಮಾವತಿ ಪಟ್ನದಸೂಳೆ ಅಂದ.

೧೦೪೩. ನನ್ನೋರ್ ಬಂದ್ರೆ ಮುಳುಗ್ ಬಾ । ಅನ್ನಿಗರು ಬಂದ್ರೆ ತೇಲ್‌ಬಾ.

೧೦೪೪. ನಮ್ಮನೆ ಅಕ್ಕಿ ಕೊಟ್ಟು ತಿಮ್ಮಕ್ಕನ ಪ್ರಸಾದವೇ?

೧೦೪೫. ನಮ್ಮನೆ ರಾಗಿಕಲ್ಲು ತಿರುಗಿದರೆ ಊರೆಲ್ಲ ನಂಟ್ರು.

೧೦೪೬. ನಮ್ಮಪ್ಪನ ಮನೆಯೋರು ದಪ್ಪಸ್ಥಾನದೋರು,
ಒಪ್ಪೊರ್ರು ಕಿತ್ತಿ ಒಲ್ಗಿಕ್ಕೊಂಡ್ರು.

೧೦೪೭ ನಮ್ಮ ಸಿಟ್ಟು ನಮಗೆ ತಿಂತದ । ನಮ್ಮ ಸಮಾಧಾನ ಅವರಿಗೆ ತಿಂತದ.

೧೦೪೮. ನರ್ಮದೆಗೆ ಹೋದರೆ ಕರ್ಮ ತಪ್ಪೀತೇ?

೧೦೪೯. ನಮಾಜ ಮಾಡಾಕ ಹೋಗಿ ಮಸೀದಿ ಕೊಳ್ಳಿಗಿ ಬಿತ್ತಂತ.

೧೦೫೦. ನಯವಾಗಲಿ ಭಯವಾಗಲಿ ಇಲ್ಲದವ ಧರ್ಮವೇನು ಮಾಡ್ಯಾನು?

೧೦೫೧. ನಯಾ ಇದ್ದಲ್ಲಿ ಭಯಾ ಇಲ್ಲ.

೧೦೫೨. ನರಕಕ್ಕೆ ನವದ್ವಾರ ನಾಕಕ್ಕೆ ಒಂದೇ ದ್ವಾರ.

೧೦೫೩. ನರಕದಲ್ಲಿ ಬಿದ್ದವಗೆ ಹರಕು ಬಟ್ಟೆಯಾದರೇನು?

೧೦೫೪. ನರಿಗೆ ಯಜಮಾನ್ಕೆ ಕೊಡೋವತ್ಕೆ ಊರ ಕೋಳೀನ್ನೆಲ್ಲ ತಿಂತಂತೆ.

೧೦೫೫. ನರಿ ಮಾತು ಕಲ್ತು, ತನ್ನ ಹೇಲು ತಾನೆ ತಿಂತು.

೧೦೫೬. ನರಿ ಕೂಗು ಗಿರಿಗೆ ಮುಟ್ಟೀತೆ?



೧೦೫೭. ನರಿಗೇಳೋಹೊತ್ಗೆ ನರಿ ಬಾಲಕ್ಕೇಳಿತಂತೆ.

೧೦೫೮. ನವಗ್ರಹ ಕಾಡುವಾಗ ಸ್ವಂತಗ್ರಹವೇನು ಮಾಡೀತು?

೧೦೫೯. ನವುಲ ನೋಡಿ ಕೆಂಬೂತ ಪುಕ್ಕ ತರಕೊಂಡಂಗೆ.

೧೦೬೦. ನಷ್ಟ ಬಿದ್ದರೂ ಭ್ರಷ್ಟನಾಗಬಾರದು.

೧೦೬೧. ನಳ್ಳಿ ಬಿಲಕ್ಕೆ ನರಿ ಕಾವಲಾಕ್ದಂಗೆ.

೧೦೬೨. ನಳ್ಳಿ ರಾಗಕ್ಕೆ ನರಿ ತಲೆ ತೂಗಿದ ಹಾಗೆ.

೧೦೬೩. ನಂಟ್ರು ಮನೇಗೆ ಮೂಲ । ಕುಂಟೆತ್ತು ಹೊಲಕ್ಕೆ ಮೂಲ.

೧೦೬೪. ನಾಗರೀಕನ ಮಾನ ನಾಡಲ್ಲಿ ಹೋಯಿತು.

೧೦೬೫. ನಾಗಮಂಗಲಕ್ಕೆ ದಾರಿ ಯಾವುದು ಅಂದರೆ ನಾಲಿಗೆಯೇ ದಾರಿ.

೧೦೬೬. ನಾಚಿಕೆ ಕೆಟ್ಟೋಳಿಗೆ ನಾಲ್ಕು ಕಡೆ ಬಾಗಿಲು.

೧೦೬೭. ನಾಚಿಕೆ ಇಲ್ದ ಅಳಿಯ ನಾಗರಹಬ್ಬಕೆ ಬಂದ ಅನ್ನೋವತ್ಗೆ,
ಹಬ್ಬುಕ್ಕೆ ಬರ್ಲಿಲ್ಲ, ನೇಗ್ಲು ತುಂಡಿಗೆ ಬಂದೆ ಅಂದ.

೧೦೬೮. ನಾಚಿಕೆ ಇಲ್ಲದ ಅತ್ತೆ ಅಳಿಯನ ಜೊತೆ ಉಂಡ್ಳು.

೧೦೬೯. ನಾಟಿ ರಾಗವಾದರೂ ಪಾಠವಿಲ್ಲದೆ ಬಾರದು.

೧೦೭೦. ನಾಡೆಲ್ಲಾ ಬಿಟ್ಟರೂ ಸುಡುಗಾಡು ಬಿಡದು.

೧೦೭೧. ನಾಡಿ ನಿಂತಮೇಲೆ ಕಾಡು ಪಾಲು.

೧೦೭೨. ನಾಣ್ಯ ಇದ್ದವ ನಾಯಕ । ನಾದ ಇದ್ದವ ಗಾಯಕ.

೧೦೭೩. ನಾಣ್ಯವಿಲ್ಲದವ ನೊಣಕ್ಕಿಂತ ಕಡೆ.

೧೦೭೪. ನಾದವಿದ್ದರೆ ಗಂಟೆ । ವಾದವಿದ್ದರೆ ತಂಟೆ.

೧೦೭೫. ನಾನು ಹಿಡಿದ ಮೊಲಕ್ಕೆ ಮೂರೇ ಕಾಲು ಅಂದಂಗೆ.

೧೦೭೬. ನಾಮದೋನು ನಮಿಸೋವತ್ಗೆ ಊಬತ್ತಿಯೋನ್ ಉಂಡಾಯ್ತು.

೧೦೭೭. ನಾಮರ್ದ ಅಂದ್ರೆ ನನಗರ್ಧ ಅಂದನಂತೆ.

೧೦೭೮. ನಾಮವಿದ್ದವಗೆ ಕಾಮ ಕಡಿಮೆಯೇ?

೧೦೭೯. ನಾಮವಿದ್ದಾಗ್ಲೂ ನಂಬಿಕೆ ಇರಬೇಕು.

೧೦೮೦. ನಾಮವಿಲ್ಲದ ಅರಸನಿಗೆ ನೇಮವಿಲ್ಲದ ಪ್ರಧಾನಿ.

೧೧೮೧. ನಾಯಿ ಮೊಲೇಲಿ ಖಂಡುಗ ಹಾಲಿದ್ರೇನು?

೧೧೮೨. ನಾಯಿ ಕಂಡು ಬೊಗುಳ್ತನೆ। ನರಮನ್ಸ ಕಾಣದೆನೆ ಬೊಗುಳ್ತನೆ.

೧೧೮೩. ನಾಯಿಗಿರೋ ನಿಯತ್ತು ನರನಿಗಿಲ್ಲ.

೧೧೮೪. ನಾಯಿ ತನ್ನ ಬಾಲಕ್ಕೆ ನಾರಾಯಣ ಅಂತಿತ್ತಂತೆ.

೧೧೮೫. ನಾಯಿ ಬಲ್ಲದೆ ದೇವರ ಜಗಲಿಯ?

೧೧೮೬. ನಾಯಿ ಹಸಿದಿತ್ತು। ನುಚ್ಚು ಹಳಸಿತ್ತು.

೧೧೮೭. ನಾಯಿ ಹೆತ್ತು ನಾಡಮೇಲೆ ಎಸೆಯಿತು.

೧೧೮೮. ನಾಲಗೆ ಚನ್ನಾಗಿದ್ರೆ ನಾಡೆಲ್ಲಾ ಚನ್ನ.

೧೧೮೯. ನಾಳೆ ಅಂದವರ ಮನೆ ಹಾಳು.

೧೧೯೦. ನಾಶವಾಗೋವರೆಗೆ ಆಶೆ ಬಿಡದು.

೧೧೯೧. ನ್ಯಾಯವಿಲ್ಲದವ ನಾಯಿಗಿಂತ ಕಡೆ.

೧೧೯೨. ನಿಗದಿ ಇದ್ದವಗೆ ಪಗದಿ ಇದ್ದೀತು.

೧೧೯೩. ನಿಚ್ಚ ಬರೊ ಅಳಿಯ ನುಚ್ಚಿಗಿಂತ ಕಡೆ.

೧೧೯೪. ನಿಜ ಆಡಿದರೆ ನಿಷ್ಠುರ। ಸುಳ್ಳಾಡಿದರೆ ಮತ್ಸರ.

೧೧೯೫. ನಿತ್ಯ ಪಯಣ ಬುತ್ತಿಗೇಡು.

೧೧೯೬. ನಿತ್ಯ ಸಾಯೋರಿಗೆ ಅಳೋರ್‍ಯಾರು?

೧೧೯೭. ನಿತ್ಯಮುಂಡೆ ಪಟ್ಟಣದಲ್ಲಿ ಎಚ್ಚರವಿದ್ದವನೇ ಜಾಣ.

೧೧೯೮. ನಿಪುಣನಾದವನು ಕೃಪಣನಾಗಬಾರದು.

೧೧೯೯. ನಿಯತ್ತಿದ್ದವನಲ್ಲಿ ನ್ಯಾಯ ಚಂದ.

೧೨೦೦. ನಿಶ್ಚಯಕ್ಕೆ ಪಕ್ಷಪಾತವೆ?

೧೨೦೧. ನಿಷ್ಠೆಯಿದ್ದವನಿಗೆ ನಷ್ಟವಿಲ್ಲ.

೧೨೦೨. ನೀಚ ಮುಂಡೆಗೆ ನಿದ್ರೆ ಕೇಡು,
ಅವಳ ಹಿಂದೆ ಹೋದರೆ ನಾಚಿಗ್ಗೇಡು.

೧೨೦೩. ನೀತಿಗೆಟ್ಟೋನ್ನ ನಂಟು ನಸುಗುನ್ನಿ ಅಂಟು.

೧೨೦೪. ನೀನೆಕಣೊ ಶೆಟ್ಟಿ ಅಂದ್ರೆ ಅಂಡು ಮಗುಚಿ ಅಳೆದನಂತೆ.



೧೨೦೫. ನೀಚನ ಸಂಗ ಈಚಲ ನೀರು ನಾಚಿಕೆ ಕೆಡಿಸಿದುವು.

೧೨೦೬. ನೀತಿಯುಳ್ಳವನ ಮನೆ ದೀಪದಲ್ಲಿ ಜಾತಿ ಭೇದವೇನು?

೧೨೦೭. ನೀತಿಯುಳ್ಳವನು ಖ್ಯಾತಿಪಟ್ಟಾನು.

೧೨೦೮. ನೀರಲ್ಲಿದ್ದ ಮೀನು ನೀರು ಕುಡಿತೋ ಇಲ್ಲವೋ ಹೇಳೋರ್‍ಯಾರು?

೧೨೦೯. ನೇಮವುಳ್ಳವನನ್ನು ಕಂಡರೆ ಯಮನಿಗೂ ಭಯ

೧೨೧೦. ನೀರಲ್ಲಿ ವಾಸ : ಮೊಸಳೆ ಜೊತೆ ದ್ವೇಷ.

೧೨೧೧. ನೀರಲ್ಲಿ ಹೋಮ ಮಾಡಿದ ಹಾಗೆ.

೧೨೧೨. ನೀರ್ಗಣ್ಣೆ ಊರು ಹಾಳುಮಾಡಿದ್ಲು.

೧೨೧೩. ನೀರಾಗ ಮುಳುಗಿದವನಿಗೆ ಮಳಿ ಏನು? ಚಳಿ ಏನು?

೧೨೧೪. ನೀರಾದ್ರೂ ಮಜ್ಗಿ । ಹುಚ್ಚಿಯಾದ್ರೂ ತಾಯಿ.

೧೨೧೫. ನೀರಿದ್ರೆ ಊರು । ನಾರಿದ್ರೆ ಮನೆ.

೧೨೧೬. ನೀಲೀರ ಹಟ್ಟೀಲಿ ನಿಜವುಂಟೆ । ನೀರು ಕಡೆದರೆ ಬೆಣ್ಣೆ ಉಂಟೆ?

೧೨೧೭. ನಿಶೇದವನ ಮಾತು ಕಿಸೇದಾಗ.

೧೨೧೮. ನುಚ್ಚ ಉಂಡ ಮಗ ಇಚ್ಚೇದಾಗ ಇರತಾನ,
ಹಾಲುಬಾನ ಉಂಡ ಅಳಿಯ ಬೀದೀಲಿ ನಿಂತ ಬೊಗಳತಾನ.

೧೨೧೯. ನುಡಿ ಪುರಾತನದು, ನಡಿ ಕಿರಾತನದು.

೧೨೨೦. ನುಂಗಲಾರದವನ ಗಂಟ್ಲುಗೆ ಕಡುಬು ತುರುಕಿದಂಗೆ.

೧೨೨೧. ನೂಕುವವನ ಮನೆ ಊಟಕ್ಕಿಂತ ಬೋಕಿಯ ಊಟ ಲೇಸು.

೧೨೨೨. ನೂತನಗಾತಿ ಮನೇಲಿ ಆತೆ ಅವುತಾಡ್ತಿದ್ದೊ !

೧೨೨೩. ನೂರು ಜುಟ್ಟು ಹೊಂದ್ಕೊಂಡಿರ್‍ತಾವೆ । ಮೂರು ಜಡೆ ಹೊಂದೋದಿಲ್ಲ.

೧೨೨೪. ನೂರು ಸುಳ್ಳು ಹೇಳಿ ಒಂದು ಲಗ್ನ ಮಾಡು.

೧೨೨೫. ನೂಲು ಹಿಡಿದು ಜೋಲುವವನ ಕಾಲು ಹಿಡಿದು ನೇತಾಡಿದ.

೧೨೨೬. ನೂಲೂ ಹೆಂಡತೀನ ಬಿಟ್ಟು ಹೇಲೂ ಸೂಳೀನ ತಂದ.

೧೨೨೭. ನೆಕ್ಕುವ ನಾಯಿಗೆ ಲಿಂಗವೇನು ಪೀಠವೇನು?

೧೨೨೮. ನೆಗಡಿ ಬಂತಂತ ಮೂಗು ಕೊಯ್‌ಕೊತ್ತರಾ?

೧೧೨೯. ನೆಗಡಿಯಂಥ ರೋಗವಿಲ್ಲ । ಬುಗುಡಿಯಂಥ ಒಡವೆಯಿಲ್ಲ.

೧೧೩೦. ನೆತ್ತಿಮ್ಯಾಲ್ ಬಾಯಿದ್ರೆ ಇನ್ನೊಂದ್ ದಪ ಉಂಬೆ ಅಂದ.

೧೧೩೧. ನೆನಪಿಲ್ಲದ ಕೆಲಸ ಹಣಕಿದರೆ ಆದೀತೆ?

೧೧೩೨. ನೆಯ್ಗೆ ನೆಯ್ತಿದ್ದೋನ ತಿಕ ಎತ್ಲೂ ಬೆತ್ತಲೆ.

೧೧೩೩. ನೆರಮನೇದಕ್ಕೆ ನೆಗೆದು ಮುತ್ತಿಕ್ಕಿದಂಗೆ.

೧೧೩೪. ನೆರ್ಮನೆ ಗಂಡ್ಸು ಗಂಡ್ಸಲ್ಲ । ದಿಂಡಗ ಪದಾರ್ಥಲ್ಲ.

೧೧೩೫. ನೆರಮನೆ ದೋಸೆ ತೂತಾದರೆ, ತನ್ನ ಮನೆ ಕಾವಲೀನೆ ತೂತು.

೧೧೩೬. ನೆರಮನೆ ದ್ವಾಸೆಗೆ ನಮ್ಮನೇಲೆ ಕಾಯಾಲ್ ಕಾಸಿದಂಗೆ.

೧೧೩೭. ನೆರೆ ಊರು ನೆಂಟರಿಗಿಂತ, ಒಂದು ಊರಿನ ಹೊಲೆಯ ಲೇಸು.

೧೧೩೮. ನೆರೆ ನೆಚ್ಚಿ ತೊರಿ ಹಾಯಬೇಡ.

೧೧೩೯. ನೆರೆಮನೆ ಬದುಕಿಗೆ ಹೆಗ್ಗಣ ಗುದ್ದಾಡಿದೊ.

೧೧೪೦. ನೆರ್ಮನೆ ಪರ್ಬಿಗೆ ನಮ್ಮನೇಲಿ ಶಾವಿಗೆ ಒತ್ತಿದಂಗೆ.

೧೧೪೧. ನೆರೂರಿನ ಬೆಳ್ಳನಿಗೆ ಕೊಡೋದ ತನ್ನೂರಿನ ಕಳ್ಳನಿಗೆ ಕೊಡೋದು ಲೇಸು.

೧೧೪೨. ನೆಲದಲ್ಲಿ ಉಣ್ಣುವವನ ಸಂಗಡ ಎಲೆ ಕೇಳಿದ ಹಾಗೆ.

೧೧೪೩. ನೆಲಕ್ಕೆ ಬಗ್ನ ಹಾಕೊ ಅಂದ್ರೆ । ಯಾವ್ತಾವ ಅಂತ ಬಗ್ಗಿ ಬಗ್ಗಿ ನೋಡ್ದ.

೧೧೪೪. ನೆಲ ನಂಬಿದವನ ಕುಲ ಕೇಳಬೇಡ.

೧೧೪೫. ನೆಲದ ಗುಣ ನೀರಿಗೆ। ನಾಡಿನ ಗುಣ ಜನರಿಗೆ.

೧೧೪೬. ನೆಲ ಬಲವಂತನಿಗೆ । ಕುಲ ನೇಮವಂತನಿಗೆ.

೧೧೪೭. ನೆಲ್ಲಕ್ಕಿಗೇ ಠಿಕಾಣೆಲ್ಲ ಪಲ್ಲಕ್ಕಿ ಏರುವುದು ಹೌದೊ?

೧೧೪೮. ನೆಲೆಯಿಲ್ಲದ ಮಾತು ಹೊಲೆಗಿಂತ ಹೆಚ್ಚು.

೧೧೪೯. ನೇಣು ಹಾಕಿಕೊಳ್ಳುವವನ ಹತ್ತಿರ ಕೋಣ ಕೇಳಿದ ಹಾಗೆ.

೧೧೫೦. ನೋಡಿಕೊಂಡು ಬಾ ಅಂದ್ರ ಮಾಡಿಕೊಂಡೇ ಬಂದ.

೧೧೫೧. ನೋಡದೆ ಆಡಿದರೆ ಕೇಡು ತಪ್ಪದು.

೧೧೫೨. ನೋಡ್ತಾ ನೋಡ್ತಾ ಹೋದ್ರೆ ಮನೆ ಹೆಂಡ್ತಿ ಕುರುಡಿ.

೧೧೫೩. ನೋಡಿ ತಿಳಿಯಬೇಕು । ಮಾಡಿ ಕಲಿಯಬೇಕು.

೧೧೫೪. ನೋಡೋಕೆ ಮಳ್ಳಿ । ಕೆಲಸಕ್ಕೆ ಕಳ್ಳಿ.



## ಪ

೧೧೫೫. ಪಕ್ಷ ಪಾಂಡವರಲ್ಲಿ । ಊಟ ಕೌರವರಲ್ಲಿ.

೧೧೫೬. ಪಗಡಿ ಆಡಿ ಗಂಡಸು ಕೆಟ್ಟ । ಪುಗಡಿ ಆಡಿ ಹೆಂಗಸು ಕೆಟ್ಟಳು.

೧೧೫೭. ಪಗಡೆ ಆಡಿ ಪಾಂಡವರು ಕೆಟ್ರು,
ಕವಡೆ ಆಡಿ ಹೆಣ್ಮಕ್ಳು ಕೆಟ್ರು,
ಇಸ್ಪೀಟಾಡಿ ಇದ್‌ಬದ್ದೋರೆಲ್ಲಾ ಕೆಟ್ರು.

೧೧೫೮. ಪಟ್ಟಣ ಆಳೋ ಅಪ್ಪನಿಗಿಂತ ಕೊಟ್ಟಣ ಕುಟ್ಟೊ ಅವ್ವ ಲೇಸು.

೧೧೫೯ ಪಡೆದವಳಿಗೆ ಪಟ್ಟೆ ಸೀರೆ । ಪಡೀದವಳಿಗೆ ಮುತ್ತುಗದ ಹಾಳೆ.

೧೧೬೦. ಪಣ ಕಟ್ಟುವವನ ಹತ್ತಿರ ಹೆಣಗಬಹುದು
ಹಣ ಕೂಡಿಸುವವನ ಹತ್ತಿರ ನಿಲ್ಲಲಾಗದು.

೧೧೬೧. ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು.

೧೧೬೨. ಪ್ರಧಾನಿಯಾದವನಿಗೆ ನಿಧಾನವಿರಬೇಕು.

೧೧೬೩. ಪ್ರಸ್ತಾಪಕ್ಕೆ ಬಾರದ ಗಾದೆ । ಪ್ರಸ್ತಕ್ಕೆ ಆಗದ ಕಜ್ಜಾಯ.

೧೧೬೪. ಪತಿಶೂನ್ಯಳಾದರೂ ಮತಿಶೂನ್ಯಳಾಗಬಾರದು.

೧೧೬೫. ಪದವಿ ಬಂತೊ ಪಟೇಲ ಅಂದ್ರೆ । ಚಪ್ಪಲಿ ತಗೊಂಡ್ ಛತ್ರಿ ಹಿಡಿದನಂತೆ.

೧೧೬೬. ಪತ್ಯ ಹಾಕುವವನ ಬೆರಳು ಕಚ್ಚಿದ ಹಾಗೆ.

೧೧೬೭. ಪತ್ಯ ಮಾಡಿ ಪಿತ್ತ ಹೆಚ್ಚಿತು.

೧೧೬೮. ಪರಸ್ಥಳವೋ? ಪರದಾಟವೋ?

೧೧೬೯. ಪರಮೇಶನಾದರೂ ಸ್ಮಶಾನ ತಪ್ಪಲಿಲ್ಲ.

೧೧೭೦. ಪರರ ಒಡವೆ ಸಿಕ್ಕಿದರೆ,
ಹರಕಾದರೇನು? ಮುರುಕಾದರೇನು? ತುರುಕ ಬಿಟ್ಟಾನೆ?

೧೧೭೧. ಪಂಗಡ ಆದವ ಸಂಗಡ ಬಂದಾನೆ?

೧೧೭೨. ಪಂಚಾಂಗ ಹೋದ್ರೆ ನಕ್ಷತ್ರ ಹೋಯ್ತೆ?

೧೧೭೩. ಪಂಚಾಯಿತಿಗೆ ಪಗಾರಿಲ್ಲ । ಕತ್ತೆಗೆ ಮೂಗುದಾಣೆಲ್ಲ.

೧೧೭೪. ಪಂಜರದಲ್ಲಿ ಕಾಗೆ ಇಟ್ಟರೆ ಪಂಚಮಸ್ವರ ಕೊಟ್ಟೀತೆ?

೧೧೭೫. ಪಂಡಿತಾ ಎಂದರೆ ಹೆಂಡತಿ ಕೊಟ್ಟುಹೋಗು ಅಂದ.

೧೧೭೬. ಪಂಡಿತನಾದರೂ, ಕಂಡಾಪಟ್ಟೆ ಆಡಿದರೆ, ಕುಂಡೆ ಪೆಟ್ಟು ತಿನ್ನಬೇಕಾದೀತು.

೧೧೭೭. ಫಲಾ ಹಾಕಿ ಪಾಪ ಕಳಿ । ಕುಲಾ ನೋಡಿ ಹೆಣ್ಣು ಕೊಡು.

೧೧೭೮. ಪಾತ್ರಧಾರನಿಗೆ ಸೂತ್ರಧಾರನೇ ಆಧಾರ.

೧೧೭೯. ಪಾದಕ್ಕೆ ತಕ್ಕ ಪಾಪೋಸು । ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ.

೧೧೮೦. ಪಾದಕ್ಕೆ ಬಿದ್ದರೂ ನಾಗಪ್ಪ ಕಚ್ಚದೇ ಬಿಡ.

೧೧೮೧. ಪಾಪಿ ಗಳಿಸಿದ್ದು ಪರರ ಪಾಲು,
ಪುಣ್ಯವಂತ ಗಳಿಸಿದ್ದು ತನ್ನೋರ ಪಾಲು.

೧೧೮೨. ಪಾಪಿ ಸಮುದ್ರ ಹೊಕ್ಕರೂ ಮೊಣಕಾಲುದ್ದ ನೀರು.

೧೧೮೩. ಪಾಯಸ ಇದ್ದುತ್ತಾವು ನೊಣ । ಮಸಾಣ ಇದ್ದುತ್ತಾವು ಹೆಣ.

೧೧೮೪. ಪ್ಯಾಲಿ ಕೈಯಾಗ ತಾಳಿ ಕೊಟ್ರೆ,
ತಾಲಿ ಮುರಸಿ ವಾಲಿ ಮಾಡಿಸಿಕೊಂಡಿತು.

೧೧೮೫. ಪ್ರಾಣ ಸ್ನೇಹಿತನಾದರೂ ಮೀನಿನ ಬುಟ್ಟಿಗೆ ಕೈ ಹಾಕಬೇಡ.

೧೧೮೬. ಪಿತೂರಿ ಮಾಡುವವನಿಗೆ ಪಿತೃವೇನು ಮಾತೃವೇನು ?

೧೧೮೭. ಪಿರಂಗಿ ಗುಣ ಪರಂಗಿ ಅರಿಯನೆ?

೧೧೮೮. ಪ್ರೀತಿ ಇದ್ದರೂ ನಿಯಮ ನೀತಿ ಬಿಡಬೇಡ.

೧೧೮೯. ಪುಗಸಟ್ಟೆ ಕೊಟ್ಟ ದನವ ಹಾರುವಯ್ಯ ಹಲ್ಲಿಡಿದು ನೋಡ್ದ.

೧೧೯೦. ಪುಗಸಟ್ಟೆ ಪುನುಗು ಸಿಕ್ರೆ ತಿಕ ಮಕಕೆಲ್ಲಾ ಬಳ್ಕಂಡ್ರಂತೆ.

೧೧೯೧. ಪುಟ್ಯಾನ ಜ್ವಾಳ ತೀರಿದ್ರೂ ಹೊಟ್ಯಾನ ಹಾಡು ತೀರಲಿಲ್ಲ.

೧೧೯೨. ಪುಡಿಮಕ್ಕಳು ಇದ್ದ ಮನೆ ಕೆಲ್ಸಾಯ್ತು,
ಪುಳ್ಳೆಸೌದೆ ಇದ್ದ ಮನೆ ಅಡಿಗಾಯ್ತು.

೧೧೯೩. ಪುಣ್ಯವಿಲ್ಲದವನು ಹುಣ್ಣಿಮೆಗೆ ಹೋದ್ರೂ ಒಂದೇ ಅಮಾಸೆಗೆ ಹೋದ್ರೂ ಒಂದೇ.

೧೧೯೪. ಪುಣ್ಯಕ್ಕೆ ಸೀರಿ ಉಡಿಸಿದರೆ ಹನ್ನೆರಡು ಮೊಳ ಅದ ಅಂದ್ಲು.

೧೧೯೫. ಪುಣ್ಯ ಬಂದಾಗ ದೊಣ್ಣೆ ತಕ್ಕೊಂಡ್ರಂತೆ.



೧೧೯೬. ಪುಣ್ಯವಂತ ಮಾಡಿದ್ದೇ ಯಾಗ । ವೈದ್ಯ ಹೇಳಿದ್ದೇ ರೋಗ.

೧೧೯೭. ಪುಣ್ಯವಂತರ ಊರ ಮ್ಯಾಲ ಮಳಿ । ಪಾಪಿಷ್ಠರ ಊರ ಮುಂದೆ ಹೊಳಿ.

೧೧೯೮. ಪುನಗನ ಬೆಕ್ಕು ತನ್ನ ವಾಸ್ನೆ ಅರೀದೆ ಕಾಡೆಲ್ಲಾ ತಿರುಗಿ ತಿರುಗಿ ಸಾಯ್ತಂತೆ.

೧೧೯೯. ಪುರಾಣ ತಿಳಿಯದಿದ್ದರೆ ನಾರಾಯಣ ಎನ್ನಲಿಕ್ಕೇನು?

೧೨೦೦. ಪುರಾಣ ಹೇಳಿದರೆ ಪುಷ್ಪ ಬಿದ್ದಾವೆ?

೧೨೦೧. ಪುರುಷನ ಪುಣ್ಯ ನಾರಿ ಭಾಗ್ಯ.

೧೨೦೨. ಪುಸ್ತಕದಲ್ಲಿರೊ ಬದನೆಕಾಯಿ ಸಾರಿಗೆ ಬಂದಾತೆ?

೧೨೦೩. ಪುಜಾರಿ ಪುಯ್ ಅಂದ್ರ ಊರ ದೇವರೆಲ್ಲ ಎದ್ದು ಕುಳಿತುವಂತೆ.

೧೨೦೪. ಪೂಜೆಮಾಡೋರು ಕಂಡ್ರೆ ದೇವರು ಘನ,
ಇಕ್ಕೋರ ಕಂಡ್ರೆ ಉಣ್ಣೋರು ಘನ.

೧೨೦೫. ಪೂರ್ವಿಕರು ಹೇಳಿದ್ದೇ ಪುರಾಣ ಊರ್ವಿಕರು ಹೇಳಿದ್ದೇ ಗಾದೆ.

೧೨೦೬. ಪೆದ್ದಯ್ಯಗೆ ಸಿರಿ ಬಂದು ಸ್ವಾಮಿಗದ್ಗೇನೆ ನಂದು ಅಂದ.

೧೨೦೭. ಪೇಟೆಯಲ್ಲಿರೋನಿಗೆ ಬೇಟೆ ಸುದ್ದಿ ಯಾಕೆ?

೧೨೦೮. ಪೋರೀನ ಕಟಿಗೊಂಡು ಬ್ಯಾರೆ ಆಗಬಾರದು,
ಹೋರೀನ ಕಟಿಗೊಂಡು ಹೊಲ ಮಾಡಬಾರದು.

೧೨೦೯. ಪೋರಿ ಮನಿ ಮಾಡಲಿಲ್ಲ । ಪಾರ ಹೊಲ ಮಾಡಲಿಲ್ಲ.

೧೨೧೦. ಪೋಲಿಮುಕ್ಕನಿಗೆ ತಾಲಿ ಕಟ್ಟಿದರೆ । ಪೋಲಿ ಪೋಲೀನೇ ತಾಲಿ ತಾಲೀನೇ !

## ಬ

೧೨೧೧. ಬಕ್ಕೊಂಡೋದ್ರೆ ಶಾನುಭೋಗ ಕಂದಾಯ ತಕ್ಕೋಳದ ಬುಟ್ಟಾನೆ?

೧೨೧೨. ಬಗಿಸಿಕೊಂಡು ಭಾವನತ್ರ ಹೋಗೋವತ್ಗೆ ಗಿಜಿರ್‌ಗಣ್ ಮಗ ಹುಟ್ತು.

೧೨೧೩. ಬಗ್ಗಿದ ಬೆನ್ನಿಗೆ ಬಂಡೆ ಹೇರಿದರು.

೧೨೧೪. ಬಟ್ಟೆ ಬೆಳ್ಳಗೆ। ಹೊಟ್ಟೆ ತೆಳ್ಳಗೆ.

೧೨೧೫. ಬಡತನ ಬಂದರೂ ದೊಡ್ಡತನ ಹೋಗಬಾರದು.

೧೨೧೬. ಬಡವನ ಕೋಪ ದವಡೆಗೆ ಮೂಲ.

೧೨೧೭. ಬಡವನ ಹೆಂಡ್ರು ಊರಿಗೆಲ್ಲಾ ಸೊಸೆ.

೧೨೧೮. ಬಡವನಿಗೆ ಮಕ್ಕಳು ಹೆಚ್ಚು । ಕಹಿಸೋರೆಗೆ ಫಲ ಹೆಚ್ಚು.

೧೨೧೯. ಬಡವನಿಗ್ಯಾಕೆ ಯಡೂರ ಜಾತ್ರೆ ?

೧೨೨೦. ಬಡವರ ಕಂಡ್ರೆ ತಿರುಕರಿಗೂ ಆಡ್ಕೆ.

೧೨೨೧. ಬಡದೇವರ ಕಂಡ್ರೆ ಬಿಲ್ಪತ್ರೆ ಬುಸ್ ಅಂತು.

೧೨೨೨. ಬಡವರಿಗೆ ಮೈಯೆಲ್ಲಾ ಹೊಟ್ಟೆ.

೧೨೨೩. ಬಡವರಿಗ್ಯಾಕೆ ಬೇಕು ಹೆಡಿಗೆ ಜಾತ್ರೆ?

೧೨೨೪. ಬಡವಾ ನೀ ಮಡಿಗ್ದಂಗಿರು.

೧೨೨೫. ಬಡ್ಡಿ ಆಸೆಗೆ ಗಂಟ ಕಳಕೊಂಡ,
ಮಿಂಡಗಾರನ ಆಸೆಗೆ ಗಂಡನ್ನ ಕಳಕೊಂಡ್ಳು.

೧೨೨೬. ಬಡಾಯಕ್ಕೊಂದು ಕಡಾಯ ತಂದು,
ಕಡಾಯ್ದೋನ್ ಬಂದು ಲಡಾಯ ಮಾಡ್ದಾಗ,
ಅದನ್ನೇ ತಗೊಂಡೋಗಿ ಅಡ ಮಡಿಗ್ದ.

೧೨೨೭. ಬಡಾಯಕೋರನ ಮನ್ಯಾಗ ಕುಡೀಲಿಕ್ಕೆ ನೀರಿಲ್ಲದಿದ್ರೂ,
ತರಕ್ಕೆ ಮೂರಿಡಿ ಸಕ್ರೆ ಇಡು ಅಂತಿದ್ದ.

೧೨೨೮. ಬಡಾಯ ನೋಡಿದ್ರೆ ಕಡಾಯದ ಗಾತ್ರ,
ಕಡಾಯ ಬಗ್ಗಿ ನೋಡಿದ್ರೆ ವಕ್ಕುಳರಾಗಿಲ್ಲ.

೧೨೨೯. ಬಣ್ಣದವನಿಗೆ ಒಂದು ಗುದ್ದು ಹೆಚ್ಚು.

೧೨೩೦. ಬತ್ತಲೆ ಇರೋ ಊರಿನಲ್ಲಿ ಬಟ್ಟೆ ತೊಟ್ಟೋರೆ ಹುಚ್ಚರು.

೧೨೩೧. ಬತ್ತಲೆಯಾದ ಮಾತ್ರದಿಂದ ದಿಗಂಬರನಾದಾನೇ?

೧೨೩೨. ಬತ್ತಿದ ಕೆರೇಲಿ ಬದನೆ ಹಾಕಿದರೆ ಕದನಕ್ಕೆ ಮೂಲ.

೧೨೩೩. ಬದ್ಕಿದ್ರೆ ಬಾಯ್ ಬಡ್ಕೊತ್ತರೆ । ಕೆಟ್ರೆ ತಿಕ ಬಡ್ಕೊತ್ತರೆ.

೧೨೩೪. ಬದ್ಕಿದ್ರೆ ಬಡಾಸಾಬಿ ಕೆಟ್ರೆ ಫಕೀರ್‌ಸಾಬಿ.

೧೨೩೫. ಬಯಸಿ ಬಯಸಿ ಬಾಳು ಹೊಕ್ಕರೆ ಬಯ್ಯೋ ಗಂಡ ಸಿಕ್ಕಿದ.

೧೨೩೬. ಬಯ್ತಾ ಹೇಳ್ದೋರ್ ಬದ್ಕೊಕ್ಹೇಳುದ್ರು,
ನಗ್ತಾ ಹೇಳ್ದೋರ್ ಕೆಡೊಕ್ಹೇಳಿದ್ರು.



೧೨೩೭. ಬರಗೆಟ್ಟ ದೇವರಿಗೆ ಪರ ಮಾಡ್ದಂಗೆ.

೧೨೩೮. ಬರಗಾಲದಲ್ಲಿ ಅಧಿಕ ಮಾಸ !

೧೨೩೯. ಬರೀ ಕೈಗಿಂತ ಕಡೆಯೆ ಹಿತ್ತಾಳೆ ಕಡಗ?

೧೨೪೦. ಬರೀ ವಿಭೂತಿ ಭಕ್ತರ ಕೆಡಿಸ್ತು.

೧೨೪೧. ಬರೀ ಪುಟ್ಟಿ । ಬೇವಿನ ಸೊಪ್ಪು । ಮೊದ್ಲೆ ಬೆಳಗು । ಪೂಜಾರಪ್ಪ.

೧೨೪೨. ಬರೀ ಬಡಾಯ ವಳ್ಗೆ ಲಡಾಯ.

೧೨೪೩. ಬರೀ ಮಾತಿನ ಚೆನ್ನಕ್ಕ, ಬಾಯೆಲ್ಲ ಅಪರಂಜಿ.

೧೨೪೪. ಬರೀ ಮಾತಿನ ಗಂಡ, ಬುಗುಡಿ ಮಾಡಿಸೋದ್ ದಿಟವೇ?

೧೨೪೫. ಬರೀ ಮಾತ್ನೋಳೆ, ಬ್ಯಾಳೆ ರಸದೋಳೆ?

೧೨೪೬. ಬರುವಾಗ ನರಿ : ಬಂದ ಮೇಲೆ, ಹುಲಿ.

೧೨೪೭. ಬರುವುದು ಕಡಿಮೆಯಾದರೂ ತೆರುವುದು ತಪ್ಪಲಿಲ್ಲ.

೧೨೪೮. ಬರೋ ಮಳೆ ಬಂದಾಗಲೇ ಖಾತ್ರಿ,
ಹೆರೋ ಬಸುರಿ ಹೆತ್ತಾಗಲೇ ಖಾತ್ರಿ.

೧೨೪೯. ಬಲ ಕಡಿಮೆಯಾದಾಗ ನೆಲ ಎದ್ದು ಬಡೀತು.

೧೨೫೦. ಬಲಗಾರ ಬಡವನ್ನ ಕೆಡಿಸಿದ್ರೆ। ಭಗವಂತ ಬಲಗಾರ್ನ ಕೆಡಿಸ್ತಾನೆ.

೧೨೫೧. ಬಲವಿದ್ದದ್ದು ಲಯವಾದ ಮೇಲೆ ಭಯಪಡುವುದೇ ಸರಿ.

೧೨೫೨. ಬಲ್ಲವನೇ ಬಲ್ಲ ಬೆಲ್ಲದ ಸವಿಯ.

೧೨೫೩. ಬಲ್ಲವನಾದರೂ ಕಲ್ಲು ತಗುಲಿದರೆ ತಲ್ಲಣಿಸದೆ ಇರನು.

೧೨೫೪. ಬಲ್ಲವರು ಬಂಗಾರ ಮಾಡುದ್ರು । ಅರೀದವರು ಅರವಿ ಮಾಡಿದ್ರು.

೧೨೫೫. ಬಲಿ ತಿಂಬುವನ ಕೂಡೆ ಕುಲ ಕೇಳುವುದೇನು?

೧೨೫೬. ಬಲೆಗೆ ಸಿಕ್ಕದ್ದು ಕೋಲಿಗೆ ಸಿಕ್ಕೀತೆ?

೧೨೫೭. ಬಸ್ರೀಲಿ ಗೇದುಣ್ಣು । ಬಾಣ್ತೀಲಿ ಕುಂತುಣ್ಣು.

೧೨೫೮. ಬಹುಮಾನಕ್ಕೆ ಬಳುದಿಕ್ಕಿ, ಹಿತ್ತಲಿಗೆ ಹೋದಳಂತೆ ಕೈನೆಕ್ಕಕೆ.

೧೨೫೯. ಬಳಗ ಇದ್ದೋಳ್ ಬಳಗ ತೆಬ್ಕೊಂಡ್ರೆ,
ಬಳಗ ಇಲ್ದೋಳ್ ಗಳಗೆ ತೆಬ್ಕೊಂಡ್ಲಂತೆ.

೧೨೬೦. ಬಳ್ಳೆಸೊಪ್ಪಿಗೆ ಬಾಯಿ ಕಿಸಿದಂಗೆ.

೧೨೬೧. ಬಂಗಕ್ಕೆ ನಿಂಗಿ ತರೋವತ್ಗೆ ಗಂಗ್ಯ ಚೊಂಬು ಒಂದಾದೊ.

೧೨೬೨. ಬಂಗಿ ಕುಡಿಯೋನಿಗೆ ಹಂಗು ಯಾರದು?

೧೨೬೩. ಬಂಗಾರವಿದ್ದರೆ ಸಿಂಗಾರ । ಸೈನ್ಯವಿದ್ದರೆ ಸರದಾರ.

೧೨೬೪. ಬಂಜೆ ಮನೆ ಚಂದ । ಬಸ್ತಿ ಗುಡಿ ಚಂದ.

೧೨೬೫. ಬಂಟರಲ್ಲಿ ತಂಟೆ ಹೆಚ್ಚು । ನೆಂಟರಲ್ಲಿ ಗರ್ವ ಹೆಚ್ಚು.

೧೨೬೬. ಬಂಡವಾಳ ಮೂರ್ ಕಾಸು । ಬಡಿವಾರ ಆರ್ ಕಾಸು.

೧೨೬೭. ಬಂದದ್ದ ಬಿಡಬಾರದು । ಬಾರದ್ದ ಬಯಸಬಾರದು.

೧೨೬೮. ಬಂದಬಂದವರು ನಿಂದಿಸಿದರೆ ಗಂಡಸತ್ತ ದುಃಖ ಬಿಟ್ಟುಹೋದೀತೆ?

೧೨೬೯. ಬಂದಷ್ಟೆ ಸಾಕು ಬಂಡಳ್ಳಿ ಸುಂಕ.

೧೨೭೦. ಬಾಡಟ್ಟೆ ಮನೆಗೆ ಬಡನಾಯಿ ಸುಳಿದಂಗೆ.

೧೨೭೧. ಬಾಡಿನಂಗಡೀಲಿ ಬಡಿದಾಡಿದ್ರು । ಹೆಂಡದಂಗಡೀಲಿ ಒಂದಾದ್ರು.

೧೨೭೨. ಬಾಡಿಗೆ ಮನೆ । ಕೂಡಿಕೆ ನೆಂಟರು । ಎರಡೂ ಸಾಕು.

೧೨೭೩. ಬಾಡಿನ ಮುಂದೆ ಬಳ್ಳೇ ಸೊಪ್ಪೆ?

೧೨೭೪. ಬಾಡು ಬೆಯ್ದೆ ಕೆಡ್ತು । ಮೀನು ಬೆಂದ್ ಕೆಡ್ತು.

೧೨೭೫. ಬಾಡು ಹಿಟ್ಟಿಗೂ ಬರಾಬರಿ । ಸೊಪ್ಪು ಹಿಟ್ಟಿಗೂ ಸರಾಸರಿ.

೧೨೭೬. ಬಾತವನು ಬದುಕೋದಿಲ್ಲ । ಸೀತವನು ಸಾಯೋದಿಲ್ಲ.

೧೨೭೭. ಬಾಯಾರಿಕೆ ಬಂದಾಗ ಬಾವಿ ತೋಡಿದ ಹಾಗೆ.

೧೨೭೮. ಬಾಯಾರಿದೋನ ಬಳಿಗೆ ಭಾಗೀರಥಿ ಬಂದಂಗೆ.

೧೨೭೯. ಬಾಯಿದ್ದೋರು ಬರದೇಲಿ ಗೆದ್ರು.

೧೨೮೦. ಬಾಯಿ ತಡೀಲಾರದೋಳು ಭಾವನೊಂದಿಗೆ ಉಂಡ್ಳು.

೧೨೮೧. ಬಾಯಿ ಒಳ್ಳೇದಾದ್ರೆ ಊರೂ ಒಳ್ಳೇದು.

೧೨೮೨. ಬಾಯಿಂದ ಬೆದರಿಸಿ ಹೂಸು ಮರೆಸಿದ ಹಾಗೆ.

೧೨೮೩. ಬಾಯಿಗೆ ರುಚಿ ತಿಕಕ್ಕೆ ಪಜೀತಿ.

೧೨೮೪. ಬಾಯಿ ಬೆಳ್ಳುಳ್ಳಿ ಕಾಣದಾಗ ಮುಕುಳಿ ಲವಂಗ ಬೇಡುತಿತ್ತಂತೆ.



೧೨೮೫. ಬಾವಿಯಲ್ಲಿ ಬಿದ್ದರೂ ಬಂಚೋತ್ ಅನ್ನೋದು ಬಿಡ.

೧೨೮೬. ಬಾಳ ಮಾತಾಡೋನು ಬಾಳ್ವೆ ಮಾಡ್ತಾನ ?

೧೨೮೭. ಬಾಳು ತಪ್ಪಿದ ಬಳಿಕ, ಬಳೆಯ ಯೋಚನೆ ಯಾಕೆ?

೧೨೮೮. ಬಾಳೆ ಕಡಿಯೋಕೆ, ನನ ಗಂಡ ಗೂಳಿಯಂಗೆ,
ಗೊಬ್ಬಿ ಕಡಿಯೋಕೆ ತಬ್ಲಿಯಂಗೆ.

೧೨೮೯. ಬಾಳೆಗೆ, ಕಾಳಿಯಾದರೇನು । ಬೋಳಿಯಾದರೇನು । ನೀರೆರೆದರೆ ಸಾಕು.

೧೨೯೦. ಬಾಳೆ ಕಳಿತರೆ ರುಚಿ । ಜೇನು ಹುಳಿತರೆ ರುಚಿ । ಹಾಲು ಕಾದರೆ ರುಚಿ.

೧೨೯೧. ಬಾಳೋರ್‌ಗೊಂದು ಮಾತು । ಬಾಳೆಗೊಂದ್ ಗೊನೆ.

೧೨೯೨. ಬಾಳೊಮನೆಗೊಂದು ಬೊಗಳೊ ನಾಯಿ.

೧೨೯೩. ಬ್ಯಾಸತ್ತು ಬ್ಯಾರಾದ್ರೆ, ಪಾಲಿಗೆ ಬಂದಳು ಅತ್ತೆ.

೧೨೯೪. ಬ್ಯಾಳೆಕಾತಿ ಮನೇಲಿ ಏಳೆಮ್ಮೆ ಕರಿತಿದ್ವೊ.
ಬ್ಯಾಳೆ ಅಗ್ರಿಸೋಕೆ ಬೆಣ್ಣೆಲ್ಲ.

೧೨೯೫. ಬಿಕ್ಕಿ ಬಿಕ್ಕಿ ಅತ್ತರೆ ಬೀಸುವಕಲ್ಲು ತಿರುಗೀತೆ?

೧೨೯೬. ಬಿಟ್ಟೆ ಬರೋದಾದ್ರೆ, ನನಗೂ ಒಬ್ಬಿರಲಿ, ನಮ್ಮಪ್ಪನಿಗೂ ಒಬ್ಬಿರಲಿ ಅಂದ.

೧೨೯೭. ಬಿಟ್ರೆ ಸಿಕ್ಕ । ಹಿಡುದ್ರೆ ದಕ್ಕ.

೧೨೯೮. ಬಿಡೂ ಬಿಡಲಾರ ಬಿಟ್ಕೊ ಮಲಗಲಾರ.

೧೨೯೯. ಬಿತ್ರಿ ಕೈಯ್ಯಾಗ ಕತ್ತಿ ಕೊಟ್ರೆ, ಮುಗಿಲ್ ನೋಡಿ ಮೂಗು ಕುಯ್ಕೊಂಡ್ರು.

೧೩೦೦. ಬಿದ್ದಿದ್ದೋನ್‌ಗೆ ಬಿಸಿ ಹಿಟ್ಟಿಕ್ಕಿದ್ರೆ ಎದ್‌ಬಂದ್ ಎದೆಗೊದ್ದ.

೧೩೦೧. ಬಿಸಾಕಿದ್ದ ಹಳೇ ಕಂಬ್ಳಿ ಚಳಿಗಾಲಕ್ಕೆ ಬೇಕಾಯ್ತು.

೧೩೦೨. ಬಿಸಿ ತುಪ್ಪ, ನುಂಗಲಿಕ್ಕೂ ಬರೋದಿಲ್ಲ । ಉಗುಳಲಿಕ್ಕೂ ಬರೋದಿಲ್ಲ.

೧೩೦೩. ಬೀದಿಮಕ್ಕಳು ಬೆಳದೊ । ಕ್ವಾಣೆಮಕ್ಕಳು ಕೊಳೆತೊ,
ಹಾದಿಮಕ್ಕಳು ಹರಿದಾಡ್ವೊ.

೧೩೦೪. ಬೀರಪ್ಪನ ಪರಸೇಲಿ, ಕುಂತಿದ್ದೋನ್ಗು ಮೂರು ಸಟುಗ ।
ಕುಣಿದಾಡ್ದೋನ್ಗೂ ಮೂರು ಸಟುಗ.

೧೩೦೫. ಬೀರ್‍ಯೇಕೆ ಮೂರು ಬ್ಯಾಳೆಕಾಳ್ಹಾಕಿ,
ಬಿಳಿಗಿರಿರಂಗನಬೆಟ್ಟಕೋದ್ನು ಅಗ್ರಾಣೆ ಕಲ್ಲು ತರೋಕೆ.

೧೩೦೬. ಬೀಸೋಳಿಗೆ ಮುಕ್ಕುದ್ದಷ್ಟೇ ಲಾಭ.

೧೩೦೭. ಬೀಸ್ನಾರ್ದ್ದ ಮುಕ್ಕುಂಗೆ ಬಿಸಿಟ್ಟಿಲ್ಲ । ಕುಟ್ನಾರ್ದ್ದ ಮುಕ್ಕುಂಗೆ ಕೂಳಿಲ್ಲ.

೧೩೦೮. ಬೀಸೋ ದೊಣ್ಣೆ ತಪ್ಪಿಸಿಕೊಂಡರೆ ಸಾವಿರ ವರ್ಷ ಆಯಸ್ಸು.

೧೩೦೯. ಬುಕ್ಕರಾಯ ಮೆಚ್ಚಿ ಬೆಕ್ಕಿನ ಮರಿ ಕೊಟ್ಟ.

೧೩೧೦. ಬುಟ್ಟಿ ಒಡವೆಗಿಂತ । ಬಟ್ಟ ಕುಂಕುಮ ಲೇಸು.

೧೩೧೧. ಬುಡುಬುಡುಕೆಯವನ ಮಾತು, ಬುಡತನಕ ಸುಳ್ಳು.

೧೩೧೨. ಬುತ್ತಿ ಉಂಡ ಬಾಯಲ್ಲ । ಎತ್ತಿನ ಮ್ಯಾಲೆ ಕೂತ ತಿಕವಲ್ಲ.

೧೩೧೩. ಬುದ್ಧಿ ಇಲ್ಲದವನ ಸ್ನೇಹ ಇದ್ದ ಮಾನಕ್ಕೆ ಹಾನಿ.

೧೩೧೪. ಬುದ್ಧಿ ಭೂಲೋಕ ಆಳುದ್ರೆ । ಅದೃಷ್ಟ ಹೋಯ್ತು ಕತ್ತೆಕಾಯಾಕೆ.

೧೩೧೫. ಬೆಕ್ಕು ಕೊಂದದ್ದು ಹೇಳಲಿಲ್ಲ । ಕಾಶಿಗೆ ಹೋದದ್ದೇ ಹೇಳಿದರು.

೧೩೧೬. ಬೆಕ್ಕಿಗೆ ಚೆಲ್ಲಾಟ । ಇಲಿಗೆ ಪ್ರಾಣಸಂಕಟ.

೧೩೧೭. ಬೆಕ್ಕಿಲ್ಲದ ಮನೇಲಿ, ಇಲಿ ರಾಗ ಹಾಡ್ತಿತ್ತಂತೆ.

೧೩೧೮. ಬೆಕ್ಕು ಕಣ್ಮುಚ್ಚಿ ಹಾಲು ಕುಡದಂಗೆ.

೧೩೧೯. ಬೆಟ್ಟ ಅಗೆದು ಇಲಿ ಹಿಡ್ದಂಗೆ.

೧೩೨೦. ಬೆಡಗಿ ಗಂಡ ಹಿಡುದ್ರೂ ನಿಲ್ಲ । ಪೊರ್ಕೆ ತಗೊಂಡ್ ಬಡುದ್ರೂ ನಿಲ್ಲ.

೧೩೨೧. ಬೆಣ್ಣೆ ಮನ್ಯಾಗೆ ಇಟುಕೊಂಡು, ತುಪ್ಪಕ್ಕೆ ಮನೆಮನೆ ತಿರುಗಿದರಂತೆ.

೧೩೨೨. ಬೆಣ್ಣೆ ತಿಂದು ನುಣ್ಣಗಾದ ಬಾಯಿಗೆ, ಸುಣ್ಣ ಹಿಡಿಸೀತೆ?

೧೩೨೩. ಬೆನ್ನುಜ್ಜಿ ಬೆಟ್ಟದ ಗಾತ್ರ ಪಾಪ ಕಳ್ಕೊ.

೧೩೨೪. ಬೆನ್ನುಬಿಡದ ಪಿಶಾಚಿ ಹೊನ್ನು ಕೊಟ್ಟರೆ ನಿಂತೀತೆ?

೧೩೨೫. ಬೆರಳು ತೋರುದ್ರೆ ಹಸ್ತ ನುಂಗ್ದ । ಒರಳು ತೋರುದ್ರೆ ಅದ್ನೆ ನೆಕ್ದ.

೧೩೨೬. ಬೆಳಗಾನ ಗೇದ್ರೂ ಬೇಳೆಕಾಸಿನ ಆದಾಯವಿಲ್ಲ.

೧೩೨೭. ಬೆಳಗಾನ ರಾಮಾಯಣ ಕೇಳಿ : ಬೆಳಕರೀತ್ಲು, ರಾಮುಂಗು ಸೀತೆಗೂ
ಏನಾಗಬೇಕು ಅಂದನಂತೆ.



೧೩೨೮. ಬೆಳಗಾನ ಹೆತ್ತಮಗೂನ, ನಾಯಿ ಹೊತ್ಕೊಂಡ್‌ಹೋಯ್ತು.

೧೩೨೯. ಬೆಳ್ಳಗಿರೋದೆಲ್ಲ ಹಾಲಲ್ಲ । ಕರ್‍ರಗಿರೋದೆಲ್ಲ ಕಾಗೆ ಅಲ್ಲ.

೧೩೩೦. ಬೆಂಕಿಯಿಂದ ಸುಟ್ಟ ಹುಣ್ಣು ಮಾದರೂ,
ನಾಲಿಗೆಯಿಂದ ಸುಟ್ಟ ಹುಣ್ಣು ಮಾಯದು,

೧೩೩೧. ಬೇಕಂತಲೇ ಮಾಡಿಕೊಂಡು, ಬೆಳತನಕ ಅತ್ತರು.

೧೩೩೨. ಬೇಕಾದವರ ಕಾಲಿನ ಚಪ್ಪಲಿ ಬೇಡಾದವರ ತಲೀಮೇಲೆ ಬಂತು.

೧೩೩೩. ಬೇಡಿ ಉಂಡ ನಾಲಿಗೆ ನಾಡು ಕಂಡಿತು.

೧೩೩೪. ಬೇಡಿಕೊಂಡು ತಿಂದರೆ ನಾಯಿಕಾಟ । ಮಾಡಿಕೊಂಡು ತಿಂದರೆ ಮಂದಿಕಾಟ.

೧೩೩೫. ಬೇರು ಬಲ್ಲವನಿಗೆ ಎಲೆ ತೋರಿಸಿದ ಹಾಗೆ.

೧೩೩೬. ಬೇಲಿ ಎದ್ದು ಹೊಲ ಮೇದಂತೆ.

೧೩೩೭. ಬೇಸರಿಕೆ ಅಂತ ಹೇಸರಕತ್ತೆ ಆಡಿಸಿದ.

೧೩೩೭ಅ. ಬೇಸಾಯ : ನೀಸಾಯ । ನಾ ಸಾಯ । ನಂಬಿದೋರೆಲ್ಲ ಸಾಯ !

೧೩೩೮. ಬೇಸಾಯ ಮಾಡೋವ್ನ ಆಯಸ್ಸು ಹೆಚ್ಚು.

೧೩೩೯. ಬೇಸಾಯ ಮಾಡಿದವ ಬೇಗ ಸಾಯ.

೧೩೪೦. ಬೊಗಳೋನಾಯಿ ಕಚ್ಚೋದಿಲ್ಲ । ಕಚ್ಚೋನಾಯಿ ಬೊಗಳೋದಿಲ್ಲ.

೧೩೪೧. ಬಡಿಯುವ ಗಂಡನ ಹತ್ತಿರ ಹಿಡಿ ವರಹ ಇದ್ದರೇನು?

೧೩೪೨. ಬೋಧನೆ ಮಾಡಿದರೆ ತಿದಿ ಅಳ್ಳಾಡೀತೆ?

೧೩೪೩. ಬೋಮಾನಕ್ಕೆ ಬಸರಾಗಿ, ಹೆರೋಕ್ ತಾವಿಲ್ಲ.

೧೩೪೪. ಬೌದ್ಧನಾದರೂ ಬುದ್ಧಿ ಇರಬೇಕು.

೧೩೪೫. ಭಕ್ತನಿಗೆ ಭುಕ್ತಿ । ಶಕ್ತನಿಗೆ ಕತ್ತಿ.

೧೩೪೬. ಭಕ್ತರ ಮನೆ ಊಟ । ಬಸವಿ ಮನೆ ನಿದ್ದೆ.

೧೩೪೭. ಭಂಡ ಬದುಕ್ದ । ಹಟವಾದಿ ಕೆಟ್ಟ.

೧೩೪೮. ಭರಣಿ ಮಳೆ ಹುಯ್ದರೆ ಧರಣಿಯೆಲ್ಲಾ ಬೆಳೆ.

೧೩೪೯. ಭಾವ ಶುದ್ಧ ಇದ್ದರೆ ಭಾಗ್ಯಕ್ಕೇನು ಕಡಿಮೆ?

೧೩೫೦. ಭಿಕಾರಿಯಾದವ, ಕಾಶಿಗೆ ಹೋದರೂ । ಭಿಕ್ಷಾನ್ನವಲ್ಲದೆ ಪಕ್ವಾನ್ನವುಂಡಾನೆ?

# ಮ

೧೩೫೧. ಮಕ್ಕಳ ಮಾತ್ಗೆ ಒಕ್ಕಲೋದಂಗೆ । ತಿಕ್ಕಲರ ಮಾತ್ಕೇಳಿ ತಲೆಕೆಡಿಸಿಕೊಂಡಂಗೆ.

೧೩೫೨. ಮಕ್ಕಳ ಹೆರೋದೂ ಒಂದೆ । ಮಸಾಣಕ್ಕೋಗೋದೂ ಒಂದೆ.

೧೩೫೩. ಮಕ್ಕಳಿಲ್ಲದವನಿಗೆ ಹೆಂಡತಿ ಮುದ್ದು, ಯಾರೂ ಇಲ್ಲದವಗೆ ತಾನೇ ಮುದ್ದು.

೧೩೫೪. ಮಕ್ಕಳಿಲ್ಲದಿದ್ದರೆ ಒಂದು ಚಿಂತೆ । ಮಕ್ಕಳಿದ್ರೆ ನಾನಾ ಚಿಂತೆ.

೧೩೫೫. ಮಕ್ಕಳಿಗೆ ಜೊಲ್ಲುಬಾಯಿ ತೋರಿಸಬೇಡ । ಹೆಂಡತಿಗೆ ಆದೀಕ ಹೇಳಬೇಡ.

೧೩೫೬. ಮಕ್ಕಳಿರೋ ಮನೆ ಚಂದ । ಮರುಗ ಇರೊ ತೋಟ ಚಂದ.

೧೩೫೭. ಮಕ್ಕಳು ಬಲ್ಲೆ ಮನೆ ಬಡತನವ ?

೧೩೫೮. ಮಕ್ಳು ಮನವಾರ್ತೆ ಮಾಡುದ್ರೆ, ಅಪ್ಪಗ್ಯಾಕೆ ಇಬ್ರು ಹೆಂಡ್ರು?

೧೩೫೯. ಮಕ್ಕೆ ಮಳೇಲಿ, ಮಡ್ಕೆ ಬಾಡು ಹಳಸ್ಕೊತ್ತು.

೧೩೬೦. ಮಗನ ಮಾರಿ, ಮಾರ್ಲಮ್ಮಿ ಮಾಡ್ದಂಗೆ.

೧೩೬೧. ಮಗ ಸತ್ತರೆ ಮಸಾಣ । ಸೊಸೆ ಸತ್ತರೆ ಸೋಬಾನ.

೧೩೬೨. ಮಗಳು ಒಳ್ಳೆಯವಳಾದರೆ ಬೀಗರೂ ಒಳ್ಳೆಯವರು.

೧೩೬೩. ಮಗಳು ನಮ್ಮವಳಾದ್ರೆ, ಅಳಿಯ ನಮ್ಮೋನೆ?

೧೩೬೪. ಮಗ್ಳು ಮೈನೆರದಾಗ ಮಣಕನ್ನ ಮಾರ್ದ,
ಮಗ್ಳ ಮದ್ವೇಗೆ ಹೂಡೊ ಗಿಡ್ಡಗಳನ್ನ ಮಾರ್ದ.

೧೩೬೫. ಮಗಳು ಹಡೆಯಲಾರದ್ದಕ್ಕೆ, ಅಳಿಯನ ಮೇಲೆ ಸಿಟ್ಟು.

೧೩೬೬. ಮಗಳೂ ಹೆರೋವಂಗವಳೆ, ಮನೆಯೂ ಸೋರೊವಂಗದೆ.

೧೩೬೭. ಮಚ್ಚರಿಸಿದೋನ ಮನೆ ಹಾಳು । ಒತ್ತರಿಸಿದೋನ ಹೊಲ ಹಾಳು.

೧೩೬೮. ಮಜ್ಜಿಗೆ ಕುಡಿಯೋನಿಗೆ, ಮೀಸೆ ಹಿಡಿಯೋರು ಇಬ್ಬರು.

೧೩೬೯. ಮಠಪತಿಯಾದರೂ ಸಟೆತನ ಬಿಡಲಿಲ್ಲ.

೧೩೭೦. ಮಡಕೆಗೆ ಬಾಯಿ । ತಿಪ್ಪೆಗೆ ತಿಕ.

೧೩೭೧. ಮಡಿಯುಟ್ಟರೂ ಮೈಲಿಗೆ ಬಿಡಲಿಲ್ಲ.

೧೩೭೨. ಮಣದಷ್ಟು ಮಾತಿಗಿಂತ ಕಣದಷ್ಟು ಕೆಲ್ಸ ಲೇಸು.

೧೩೭೩. ಮಣ್ಣಿಗಾಗಿ ಕೌರವ ಕೆಟ್ಟ । ಹೆಣ್ಣಿಗಾಗಿ ರಾವಣ ಕೆಟ್ಟ.



೧೩೭೪. ಮಣ್ಣುದೇವರಿಗೆ ಮಜ್ಜನವೇ ಸಾಕ್ಷಿ.

೧೩೭೫. ಮಣ್ಣುತಿನ್ನೋ ಮಾರಮ್ಮನಿಗೆ ತಂಬಿಟ್ಟೆಷ್ಟು ಮಾಡೀಯಾ?

೧೩೭೬. ಮಣ್ಣು ಬಿಟ್ಟು ಮಡಕೆ ಇಲ್ಲ । ತನ್ನ ಬಿಟ್ಟು ದೇವರಿಲ್ಲ.

೧೩೭೭. ಮಳೆ ಆದರೆ ಕೆಟ್ಟಿಲ್ಲ । ಮಕ್ಕಳು ಉಂಡರೆ ತಪ್ಪಲ್ಲ.

೧೩೭೮. ಮೊದಲ್ನೋಳು ಸಿಂಗಾರಕ್ಕೆ । ಎರಡ್ನೋಳು ಬಂಗಾರಕ್ಕೆ.

೧೩೭೯. ಮದ್ವೆ ಆದ್ಮೇಲೆ ಕಾಲ್‌ಕಟ್ಟು । ಮಕ್ಕಳಾದ ಮೇಲೆ ಬಾಯ್‌ಕಟ್ಟು.

೧೩೮೦. ಮದ್ವೆ ಮನೇಲಿ ತಾಲಿಗೆ ಅತ್ತರು । ಗೌರಿ ಹಬ್ಬದಲ್ಲಿ ಕಾಯಿಗೆ ಅತ್ತರು.

೧೩೮೧. ಮದುವೆ ಗಂಡಿಗೆ ಅದೇ ಇಲ್ಲ । ಕುದುರೆ ಬ್ಯಾರೆ ಕೇಡು.

೧೩೮೨. ಮಧ್ಯಸ್ಥರಿಲ್ಲದ ಊರಲ್ಲಿ । ಮಧ್ಯಾನ್ನದ ತನಕ ಇರಬೇಡ.

೧೩೮೩. ಮನದಲ್ಲಿ ನೆನಿಯೋನಿಗೆ ಮನೆಯೇನು ಮಠವೇನು?

೧೩೮೪. ಮನುಷ್ಯರ ಕಣ್ಣಿಗೆ ಮರ ಸಿಡೀತು.

೧೩೮೫. ಮನೆಮನೆ ಮುದ್ದೆ । ಮಾರಿಗುಡಿ ನಿದ್ದೆ । ಇದ್ರೆ ಇದ್ದೆ । ಇಲ್ದಿದ್ರೆ ಎದ್ದೆ.

೧೩೮೬. ಮನೆ ಕಟ್ಟಿನೋಡು । ಮದುವೆ ಮಾಡಿನೋಡು.

೧೩೮೭. ಮನ ಮೆಚ್ಚಿಸೋದು ಸುಲಭ । ಜನ ಮೆಚ್ಚಿಸೋದು ಕಷ್ಟ.

೧೩೮೮. ಮನಸ್ನಂತೆ ಮಾದೇವ । ಬಯಸಿದಂತೆ ಭೈರುವ.

೧೩೮೯. ಮನಸ್ನಾಗೆ ಮರ್ಕ ಇಲ್ದೆ । ತಿಣಕಿ ಅತ್ರೆ ಕಣ್ಣೀರು ಬಂದತ್ತಾ?

೧೩೯೦. ಮನಸು ಚೆನ್ನಾಗಿದ್ರೆ ಮಡ್ಕೆ ತೊಳೆದ ನೀರಾದ್ರೂ ಸರಿ.

೧೩೯೧. ಮನುಷ್ಯನಿಗೆ ಬರ್ದೆ ಮರಕ್ಕೆ ಬರ್ತದಾ?

೧೩೯೨. ಮನೆಗೆ ಬೆಂಕಿ ಹತ್ತಿದಾಗ ಬಾವಿ ತೆಗೆಯಲಿಕ್ಕೆ ಹೋದಂತೆ.

೧೩೯೩. ಮನೆಗೆ ಮಾರಿ । ಊರಿಗೆ ಉಪಕಾರಿ.

೧೩೯೪. ಮನೆ ಚಿಕ್ಕದಾದ್ರೆ ಮನಸೂ ಚಿಕ್ಕದೆ?

೧೩೯೫. ಮನೆ ದೀಪ ಅಂತ ಮುತ್ತಿಟ್ಟರೆ ಸುಡದೆ ಇರ್ತದಾ?

೧೩೯೬. ಮನೆ ಮಗಳ್ನ ಕೊಟ್ಟು ಅಳಿಯನ ಕಾಲು ಕಟ್ದಂಗೆ.

೧೩೯೭. ಮನೆ ಮನೆಗೆ ತಿರುಗುವ ತೊತ್ತು ಮಾತು ತಾರದೆ ಬಿಟ್ಟಾಳೆ?

೧೩೯೮. ಮನೆ ಮುರಿದರೆ ಕಟ್ಟಬಹುದು । ಮನ ಮುರಿದರೆ ಕಟ್ಟಬಹುದೆ?

೧೩೯೯. ಮನೆ ಸಾರಿಸೆ ಮಲ್ಲಕ್ಕ ಅಂದ್ರೆ । ನೀರ್ಮಣ್ಣಿ ಮಾಡೆ ಕೆಂಪಕ್ಕ ಅಂದ್ಲಂತೆ.

೧೪೦೦. ಮನೆಗೆ ಹೋದ್ರೆ ಮಜ್ಜಿಗೆ ಕೊಡದೋಳು,
ಹೇಳಿಕಳಿಸಿದರೆ ಮೊಸರು ಕೊಟ್ಟಾಳೆ?

೧೪೦೧. ಮನೆಗಂಡ ಗೇದುಹಾಕ್ತಾನೆ । ಪುಗಸಟ್ಟೆ ಮಿಂಡ ತಿಂದುಹೋಯ್ತಾನೆ.

೧೪೦೨. ಮನೋರೋಗಕ್ಕೆ ಮದ್ದಿಲ್ಲ । ಕೆಡೋಕಾಲಕ್ಕೆ ಬುದ್ಧಿಲ್ಲ.

೧೪೦೩. ಮಲಗಿರೋದ್ಕಿಂತ ಎದ್ದಿರೋದ್ ಲೇಸು,
ಕೂತ್ಕೊಂಡಿರೋದ್‌ಕಿಂತ ಕೂಲಿ ಮಾಡೋದ್ ಲೇಸು.

೧೪೦೪. ಮರ್ಮಾ ತಿಳೀದೆ ಕರ್ಮಮಾಡಿದೋನ ಮನಸ್ಸು ನಿರ್ಮಲ ಆದೀತೇ?

೧೪೦೫. ಮಲ್ಲಿಗೆ ಹೂವು ಮುಡಕೊಂಡು ಮನೇಲಿರೆ ಮಗಳೆ ಅಂದ್ರೆ,
ಕಲಗಚ್ಚಿನ ಬಾನಿ ಹೊತ್ಕೊಂಡ್ ಊರ್ ಸುತ್ ಬತ್ತಿನಿ ಅಂದ್ಲು.

೧೪೦೬. ಮರ ಹತ್ತುದ್ರೆ ತಲೆ ತಿರುಗ್ತದೆ । ಸಿರಿ ಬಂದ್ರೆ ಬುದ್ಧಿ ಕೆಡ್ತದೆ.

೧೪೦೭. ಮಸೀಬಟ್ಟೇಲಿ ಮಾಣಿಕ್ಯ ಕಟ್ಟಿದಂಗೆ.

೧೪೦೮. ಮಳೆ ಹನಿ ನಿಂತರೂ ಮರದ ಹನಿ ನಿಲ್ಲಲಿಲ್ಲ.

೧೪೦೯. ಮಳ್ಳಿ ಮಳ್ಳಿ ಅಂತ ಮಾಡಿನಾಗೆ ಇಟ್ಟರೆ,
ಉಳ್‌ಕೊಂಡ್ ಹೋಗಿ, ಕುಳ್ಳ - ಕುಂಬಾರನ ಕಟ್ಕೊಂಡಳಂತೆ.

೧೪೧೦. ಮಳ್ಳಿ ಮಾಡಿದಳಲ್ಲ ಮನೆತುಂಬ ಮಕ್ಳ.

೧೪೧೧. ಮಳೆ ಇಲ್ಲದ ಪೈರೂ ತಾಯಿ ಇಲ್ಲದ ಕೂಸೂ ಒಂದೆ.

೧೪೧೨. ಮಳೆಗೆ ಹೆದರಿ ಹೊಳೆಯಲ್ಲಿ ಹಾರಿದ ಹಾಗೆ.

೧೪೧೩. ಮಳೆಗಾಲದ ಬಿಸಿಲು ನಂಬಬಾರದು । ನಗೆಗಾರನ ಮಾತು ನಂಬಬಾರದು.

೧೪೧೪. ಮಂಗ ತಿಂದು ಮೇಕೆ ಬಾಯ್ಗೆ ಒರಸಿತಂತೆ.

೧೪೧೫. ಮಂಗನ ಕೈಲಿ ಮಾಣಿಕ್ಯ ಕೊಟ್ಟಂಗೆ.

೧೪೧೬. ಮಂಜಿನ ಹಿಂದೆ ಮಳೆ । ಗಂಜಿ ಹಿಂದೆ ಅನ್ನ.

೧೪೧೭. ಮಂಟಪದಲ್ಲಿ ಕೂತರೂ ಕಂಟಕ ಬಿಡಲಿಲ್ಲ.

೧೪೧೮. ಮಂತ್ರಿ ಮನೇಲವಳೆ । ತಂತ್ರಿ ಕ್ಯಾಣೇಲವಳೆ । ತಂದಾಕ್ಕೋಳ್ ಆಚೇಲವಳೆ !

೧೪೧೯. ಮಂದಿ ಹೇಳಿದರೆಂದು ಹಂದಿ ತಿನ್ನಬಹುದೇ?



೧೪೨೦. ಮಂದ್ಯಾಗ ಮಾನ ಕಳೆದು, ಸಂದ್ಯಾಗ ಕಾಲು ಹಿಡಕೊಂಡಂತೆ.

೧೪೨೧. ಮಾಗಿ ಹೊತ್ತು ಮಗನ್ ಮುದ್ದಾಡಕೆ ಹೊತ್ತಿಲ್ಲ.

೧೪೨೨. ಮಾಡಬಾರದ್ದು ಮಾಡಿದರೆ, ಆಗಬಾರದ್ದು ಆಗ್ತದೆ.

೧೪೨೩. ಮಾಡಿಕೊಂಡ ಗಂಡ ಹಾಡಿಕೊಂಡು ಅತ್ತರೂ ಬಿಡ.

೧೪೨೪. ಮಾಡಿದವರ ಪಾಪ ಆಡಿದವರ ಬಾಯಲ್ಲಿ.

೧೪೨೫. ಮಾಡಿದವರಿಗೆ ಬಿಟ್ಟು ನೋಡಿದವರಿಗೆ ಗಂಟು ಬಿದ್ದರು.

೧೪೨೬. ಮಾಡಿದ್ದುಣ್ಣೊ ಮಾರಾಯ.

೧೪೨೭. ಮಾಡುಕ್ಕೆ ಕೇಮಿಲ್ಲ । ಕೇರಕ್ಕೆ ಮೊರ ಇಲ್ಲ.

೧೪೨೮ ಮಾಡೋ ಕೆಲಸ ಬಿಟ್ಟು, ಆಡೋ ದಾಸಯ್ಯನೊಂದಿಗೆ ಹೋದ್ಲಂತೆ.

೧೪೨೯. ಮಾಡೋನೊಬ್ಬನಿದ್ದರೆ ನೋಡು ನನ್ನ ಸೇವೆಯ.

೧೪೩೦. ಮಾಡೋದು ಅನಾಚಾರ । ಮನೆ ಮುಂದೆ ಬೃಂದಾವನ.

೧೪೩೧. ಮಾಡೋನ್ಗೆ ಮೂರಾಣೆ । ಹೇಳೋನ್ಗೆ ಎಂಟಾಣೆ.

೧೪೩೨. ಮಾತ್ಗಂಟಿ ಮಗಳಲ್ಲ । ತಾಟ್‌ಗಿತ್ತಿ ಸೊಸೆಯಲ್ಲ.

೧೪೩೩. ಮಾತು ಮನಾರ । ಕೆಲಸ ಸುಮಾರ.

೧೪೩೪. ಮಾತು ಮನೆ ಹಾಳುಮಾಡಿತು । ಸೂಳೆ ನೆರೆ ಹಾಳುಮಾಡಿದಳು.

೧೪೩೫ ಮಾತು ಆಡಿ ಹೋಯ್ತು । ಮುತ್ತು ಒಡೆದು ಹೋಯ್ತು.

೧೪೩೬. ಮಾತಿಗೆ ಮೊದಲು ಗಾದೆ । ಊಟಕ್ಕೆ ಮೊದಲು ಉಪ್ಪಿನಕಾಯಿ.

೧೪೩೭. ಮಾತು ಬಾರಿ । ಮಾರು ಪಿಚ್ಚೆ.

೧೪೩೮. ಮಾತಿನ ಮರವೇಲಿ ಮಳೂರುಹೈದ ಕೂಡ್ಲೂರ್‌ಗೆ ಹೋದ.

೧೪೩೯. ಮಾತು ಬಂದಾಗ ಸೋತುಹೋದವ ಜಾಣ.

೧೪೪೦. ಮಾತು ಬೆಳ್ಳಿ । ಮೌನ ಬಂಗಾರ.

೧೪೪೧. ಮಾತು ಮನೆ ಕೆಡಿಸಿತು । ತೂತು ಒಲೆ ಕೆಡಿಸಿತು.

೧೪೪೨. ಮಾತೇ ಮುತ್ತು । ಮಾತೇ ಮೃತ್ಯು.

೧೪೪೩. ಮಾದಿಗನ ಮಾತು ಮನೆ ಮುಂದೆ । ಹೊಲೆಯನ ಮಾತು ಒಲೆ ಮುಂದೆ.

೧೪೪೪. ಮಾನಗೇಡಿಗೆ ಬುದ್ಧಿಗೇಡಿ ಗೆಳೆಯ.

೧೪೪೫. ಮಾನ ಹೋದರೆ ಮರಣ ಬಂದಂಗೆ.

೧೫೪೬. ಮಾನುಳ್ಳವರಿಗೆ ಮಾತಿನ ಪೆಟ್ಟು । ಮಾನಗೇಡಿಗೆ ಮಚ್ಚಿನ ಪೆಟ್ಟು.

೧೫೪೭. ಮಾವ ಕೊಟ್ಟಿದ್ದು ಮನೆತನಕ । ದೇವರು ಕೊಟ್ಟಿದ್ದು ಕಡೇತನಕ.

೧೫೪೮. ಮಾರಮ್ಮ ಅರಿಯದ ಕೋಣ ಉಂಟೆ?

೧೪೪೯. ಮಾರಮ್ಮನಿಗೆ ಗಂಡಿಲ್ಲ । ಬೋರೇದೇವರಿಗೆ ಹೆಂಡ್ರಿಲ್ಲ.

೧೪೫೦. ಮಾಳಪಕ್ಷದಲ್ಲಿ ಮನೆಮಾಡಿ, ದೀವಳಿಗೇಲಿ ಗಳಿಗೆ ನೋಡಿದಂಗೆ.

೧೪೫೧. ಮ್ಯಾಗಮ್ಯಾಗ ಬಸಪ್ಪ । ಒಳಗೆ ಮಾತ್ರ ಇಸಪ್ಪ.

೧೪೫೨. ಮ್ಯಾಲ್ಬಿದ್ದ ಸೂಳೆ ಮೂರ್‌ಕಾಸ್‌ಗೂ ಬ್ಯಾಡ.

೧೪೫೩. ಮಿಕ್ಕಸುಣ್ಣಾನೂ ಕೆಟ್ಟದೊರೇನೂ ನಂಬು.

೧೪೫೪. ಮಿಕ್ಕ ಎಳ್ಳು ಮೃಗಶಿರೆಯಲ್ಲಿ ಚೆಲ್ಲು.

೧೪೫೫. ಮಿಂಚಿಹೋದ ಮಾತಿಗೆ ಚಿಂತಿಸಿ ಫಲವೇನು?

೧೪೫೬. ಮೀನ್ನುಳಿ ಕುಡಿದು ಮಿಡಿ ಮಿಡಿದೆದ್ದ.

೧೪೫೭. ಮೀಸೆ ಬಂದವನಿಗೆ ದೇಶ ಕಾಣೊಲ್ಲ । ಮೊಲೆ ಬಂದವಳಿಗೆ ನೆಲೆ ಕಾಣೊಲ್ಲ.

೧೪೫೮. ಮುಖ ಮೂತಿ ಗೊತ್ತಿಲ್ಲದ ಜನ । ಹಾರೋ ಹಕ್ಕಿಗೆ ಹಾದ್ರ ಕಟ್ಟಿದರಂತೆ.

೧೪೫೯. ಮುಟ್ಟು ತಿಳಿದವರ ಸಂಗಡ ಹೆಟ್ಟಾಡಬಾರದು.

೧೪೬೦. ಮುದುಕನಾದರೂ ತದಕೂದು ಬಿಡಲಿಲ್ಲ.

೧೪೬೧. ಮುದ್ದೆಯಂಥ ಊಟವಿಲ್ಲ । ಸಿದ್ಧಪ್ಪನಂಥ ದೇವರಿಲ್ಲ.

೧೪೬೨. ಮುಲಿಕ್ಕೊಂಡ್ ಮುಲಿಕ್ಕೊಂಡ್ ಮೂರುಂಡ । ನಳ್ತನಳ್ತ ನಾಕುಂಡ.

೧೪೬೩. ಮುಂಡೇಮಕ್ಕಳಿಗೆ ಕುದುರೆ ಛತ್ರಿ । ಮುತ್ತೈದೆ ಮಕ್ಕಳಿಗೆ ಕಾಲ್ನಡಿಗೆ.

೧೪೬೪. ಮುಂಡೇ ಮದುವೆಗೆ ಮೂವತ್ತು ವಿಘ್ನ.

೧೪೬೫. ಮುಂಡೆ ಮನೆ ಬೇಯ್ತಾ ಇದ್ರೆ, ಪುಂಡ್ಗಾರ ಬಂದು ಕುಂಡಿ ಕಾಯಿಸ್ತಿದ್ದ.

೧೪೬೬. ಮುಂಡೆಗೆ ಮುಂಡೆ ಕಂಡ್ರೆ ಉಂಡಷ್ಟು ಸಂತೋಷ.

೧೪೬೭. ಮುಂಡೆ ಸ್ವತ್ತು ಕಂಡೋರಿಗೆ । ಪಾಪಿ ಸ್ವತ್ತು ಪರರಿಗೆ.

೧೪೬೮. ಮುಂದಲೆ ನೆರೆ ಬಂದರೂ । ಮೂಡ್ಲುಗಾಳಿ ಬೀಸಿದರೂ ।
ಇನ್ನೂ ಬಿಡಲಲ್ಲೆ ನಮ್ಮತ್ತೆ ಮುದಿಬೆಡಗ !



೧೪೬೯. ಮುಂದಲ ಆರಿನ ಎತ್ತು ಸತ್ತರೂ ಒಂದೇ । ಮುಂದಲ ಮಗ ಸತ್ತರೂ ಒಂದೆ.

೧೪೭೦. ಮುಂದಲ ಆರಿನ ಎತ್ತಾಗಬೇಡ । ಮೊದಲ ಮಗನಾಗಬೇಡ.

೧೪೭೧. ಮುಂದೆ ಹೊಗಳಬಾರ್ದು । ಹಿಂದೆ ತೆಗಳಬಾರ್ದು.

೧೪೭೨. ಮೂಗಿದ್ದರೆ ನೆಗಡಿ ತಪ್ಪದು । ಕಡ್ಲೆ ತಿಂದರೆ ಹೂಸು ತಪ್ಪದು.

೧೪೭೩. ಮೂಗಿನ್ ಮುಸರೆ ಕೊಡ್ದೆ ಇರೋಳು । ಮೂಲಂಗಿ ಪಚಡಿ ಕೊಟ್ಟಾಳೆ?

೧೪೭೪. ಮೂಗ ಕನಸು ಕಂಡಂಗೆ । ಕುರುಡ ಮುನಿಸಿಕೊಂಡಂಗೆ.

೧೪೭೫. ಮೂಗು ಕೊಯ್ಸಿಕೊಂಡು ಅವಲಕ್ಷಣ ಆಯ್ತಲ್ಲ ಅಂದಂಗೆ.

೧೪೭೬. ಮೂರ್ ಚೋಟುದ್ದ ಮಾನ । ಊರ್ ಕೆಡುಸ್ತ ಯಜಮಾನ.

೧೪೭೭. ಮೂರು ವರ್ಷದಲ್ಲಿ ಕಲ್ತಿದ್ದು ನೂರು ವರ್ಷದ ತನಕ.

೧೪೭೮. ಮೂರ್‍ನ್ನೂ ಬುಟ್ಟೋಳ್ ಮಾನ ನೋಡು,
ಆರ್ನ್ನೂ ಬುಟ್ಟೋಳ್ ಬಂಗ ನೋಡು.

೧೪೭೯. ಮೆತ್ತಗೆ ಕಂಡ್ರೆ ಮೊಳಕೈಲಿ ಅಗಿಯೋ ಜನ.

೧೪೮೦. ಮೆತ್ತಾನಿ ಕೊತ್ತಿ । ಮುತ್ತಿನಂಥ ಚಟ್ಟಿ ಹೊಡೀತು.

೧೪೮೧. ಮೇಘ ನೋಡಿ ನವಿಲು ಕುಣಿದರೆ । ಗೂಗೆ ನೋಡಿ ಕೋಳಿ ಕುಣೀತಂತೆ.

೧೪೮೨. ಮೇಲೆ ಥಳಕು ಒಳಗೆ ಹುಳುಕು.

೧೪೮೩. ಮೇಲೆ ನೋಡ್ತಾ ನೋಡ್ತಾ ಸೇದೋಬಾವಿಗೆ ಉಚ್ಚೆ ಹುಯ್ದುಕೊಂಡನಂತೆ.

೧೪೮೪. ಮೇಲುಗೋಟೆ ಜಾತ್ರೇಲಿ ನನ್ನ ಬೋಳು ದಾಸಯ್ಯನ ಕಂಡಿರ ಅಂದಂಗೆ.

೧೪೮೫. ಮೊಗೆ ಮಾಡದ ಕುಂಬಾರ ಗುಡಾಣ ಮಾಡ್ಯಾನೆ?

೧೪೮೬. ಮೊಟ್ಟೆ ತಿಂದೋರಿಗೆ ಮರಿ ಇಲ್ಲ । ಗೆಡ್ಡೆ ತಿಂದೋನಿಗೆ ಸೊಪ್ಪಿಲ್ಲ.

೧೪೮೭. ಮೊಸ್ರಿದ್ದೋಳ್ ಕಡೀತಾಳೆ । ಬೊಸ್ರಾದೋಳ್ ಹಡೀತಾಳೆ ।
ಯಾರ್ ಸುದ್ದಿ ಏನು?

೧೪೮೮. ಮೋಟು ಮರ ಗಾಳಿಗೆ ಮಿಂಡ । ಗೋಟಡಕೆ ಹಲ್ಲಿಗೆ ಮಿಂಡ.

೧೪೮೯. ಮೋಡದಹೊತ್ತು ನೋಡದೆ ಬಂತು । ಪೋರಿ ಗಂಡ ಕರೀದೆ ಬಂದ.

## ಯ

೧೪೯೦. ಯಜಮಾನಿಲ್ಲದ ಮನೆ, ಮೇಟಿ ಇಲ್ಲದ ಕಣ ಒಂದೆ.

೧೪೯೧. ಯಾರೂ ಇಲ್ಲದ ಊರಿಗೆ ಹೋಗಿ, ನೀರುಮಜ್ಜಿಗೆ ಬಯಸಿದ ಹಾಗೆ.

೧೪೯೨. ಯೋಗಿ ತಂದದ್ದು ಯೋಗಿಗೆ । ಭೋಗಿ ತಂದದ್ದು ಭೋಗಿಗೆ.

೧೪೯೩. ಯಾರೂ ಇಲ್ಲದ ಮನೆಗೆ ನಾನು ಜೋಗಪ್ಪ ಅಂದ.

೧೪೯೪. ಯಾವ ಕಾಲ ತಪ್ಪಿದರೂ ಸಾವು ಕಾಲ ತಪ್ಪದು.

೧೪೯೫. ಯಾವ ಚಿಂತೇನೂ ಮಾಡ್ದೋನ ಹೆಡ್ತಿ ಗಂಡಿದ್ದೂ ಮುಂಡೆ.

೧೪೯೬. ಯಾಸ್‌ಗಾತೀಗೆ ದ್ವಾಸೆ ಕೊಡೋವತ್ಗೆ.
ಮೂಸ್‌ಮೂಸಿ ಮೂಗಿನ ಕೆಳಗೆ ಹಾಕಿದ್ನು.

೧೪೯೭. ಯುಕ್ತಿಯ ಮಾತು ಮಕ್ಕಳಿಂದಾದರೂ ತಿಳುಕೊ.

೧೪೯೮. ಯುದ್ಧಕಾಲದಲ್ಲಿ ಶಸ್ತ್ರಾಭ್ಯಾಸ । ಮುದ್ದೆ ಉಣ್ತಾ ಮಜ್ಜಿಗ್ಗೆ ಓಡಾಟ.

೧೪೯೯. ಯೋಗ್ಯತೆ ಅರಿಯದ ದೊರೆ ರೋಗ ಅರಿಯದ ವೈದ್ಯ ಒಂದೇ.

## ರ

೧೫೦೦. ರಟ್ಟೆ ಮುರಿದು ರೊಟ್ಟಿ ತಿನ್ನು । ಕಟ್ಟೆ ಹಾಕಿ ಅನ್ನ ಉಣ್ಣು.

೧೫೦೧. ರಸ ಬೆಳೆದು ಕಸ ತಿನ್ನಬೇಡ । ಹಸ ಕಟ್ಟಿ ಮೊಸರಿಗೆ ಪರದಾಡಬೇಡ.

೧೫೦೨. ರಾಗ ನೆನಪಾದಾಗ ತಾಳ ಮರೆತುಹೋಯಿತಂತೆ.

೧೫೦೩. ರಾಗಿ ಇದ್ರೆ ರಾಗ । ರಾಗಿ ಇಲ್ದಿದ್ರೆ ರೋಗ.

೧೫೦೪. ರಾಗಿಕಲ್ಲು ತಿರುಗುವಾಗ ರಾಜ್ಯವೆಲ್ಲಾ ನೆಂಟರು.

೧೫೦೫. ರಾಜ ಇರೋತನಕ ರಾಣಿ ಭೋಗ.

೧೫೦೬. ರಾಜ್ಯಕ್ಕೆ ಬೆಂಕಿ ಹಚ್ಚಿ ರಾಜರ ಪಾದದಾಣೆ ಮಾಡಿದಂಗೆ.

೧೫೦೭. ರಾತ್ರಿ ಕಂಡ ಬಾವಿಗೆ ಹಗಲು ಬಿದ್ದಂಗೆ.

೧೫೦೮. ರಾಮ ಅನ್ನೋಕಾಲದಲ್ಲಿ ರಾವಣ ಬುದ್ಧಿ.

೧೫೦೯. ರಾಮ ರಾಜ್ಯ ಆಳಿದರೂ ರಾಗಿ ಬೀಸೋದು ತಪ್ಪಲ್ಲ.

೧೫೧೦. ರಾಮನಂಥಾ ರಾಜ ಇಲ್ಲ । ಕಾಮನಂಥಾ ಪುರುಷ ಇಲ್ಲ.



೧೫೧೧. ರಾಮೇಶ್ವರಕ್ಕೆ ಹೋದರೂ ಶನೇಶ್ವರ ಬಿಡಲಿಲ್ಲ.

೧೫೧೨. ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ.

೧೫೧೩. ರೋಗಿ ಬಯಸಿದ್ದು ಹಾಲು ಅನ್ನ । ವೈದ್ಯ ಹೇಳಿದ್ದು ಹಾಲು ಅನ್ನ.

೧೫೧೪. ರೋಹಿಣಿ ಮಳೇಲಿ ಓಣೆಲ್ಲ ಜೋಳ.

## ಲ

೧೫೧೫. ಲಕ್ಕಿ ಸೊಪ್ಪಾದ್ರೂ ಲೆಕ್ಕದ ಮುದ್ದೆ ಉಣಬೇಕು.

೧೫೧೬. ಲಂಚ ಕೊಟ್ಟು ಮಂಚ ಏರು । ವಂಚನೆ ಮಡಿ ಕೈಲಾಸ ಏರು.

೧೫೧೭. ಲಾಭವಿಲ್ಲದ ವ್ಯಾಪಾರ ಕತ್ತೆ ಮೈ ಪರಚಿದಂಗೆ.

೧೫೧೮. ಲಿಂಗ ಹರಿದ ಮೇಲೆ ಜಂಗಮನ ಹಂಗೇನು?

೧೫೧೯. ಲೋಕ ತಿಳೀಬೇಕು । ಲೆಕ್ಕ ಕಲೀಬೇಕು.

## ವ

೧೫೨೦. ವಡ್ಡರ ಮಾತು ಅಡ್ಡಾದಿಡ್ಡಿ । ಹೆಡ್ಡರ ಮಾತು ಹ್ಯಾಗ್ಯಾಗೊ !

೧೫೨೧. ವಂಚಕನಿಗೆ ಸಂಚು ಕೊಟ್ಟರಾದೀತೆ?

೧೫೨೨. ವಾಜರ ಮಾತು ಗಾಜುಗೋಜು । ಪುಢಾರಿ ಮಾತು ಮೋಜು ಮೋಜು.

೧೫೨೩. ವಿಜಾಪುರದಲ್ಲಿ ಇಜಾರದವರು ಹಜಾರ ಮಂದಿ !

೧೫೨೪. ವಿನಾಶ ಕಾಲಕ್ಕೆ ವಿಪರೀತ ಬುದ್ಧಿ.

೧೫೨೫. ವಿಶಾಖೆ ಮಳೆ ಅಸಿಸಿ ಅಂದ್ರೂ ಬಿಡದು.

೧೫೨೬. ವಾಡೆ ನನಿಗಾಯ್ತು । ಮೂಡೆ ನಿನಿಗಾಯ್ತು, ನೋಡಿ ಬಳಸು ಸೊಸೆಮುದ್ದೆ.

೧೫೨೭. ವ್ಯಭಿಚಾರ ಮಾಡಿದರೂ ಅಭಿಚಾರ ಬಿಡಲಿಲ್ಲ.

೧೫೨೮. ವ್ಯಾಪಾರಕ್ಕೆ ನಿಮಿಷ । ಬೇಸಾಯಕ್ಕೆ ವರುಷ.

೧೫೨೯. ವೆಚ್ಚಗಾರುನ್ಗೆ ನಿಚ್ಚಪಡಿ । ಜೀನಗಾರುನ್ಗೆ ದಿನಕ್ಕೊಂದ್ ಪಡಿ.

೧೫೩೦. ವೇದ ಸುಳ್ಳಾದರೂ ಗಾದೆ ಸುಳ್ಳಾಗದು.

೧೫೩೧. ವೈರಿಯಿಂದ ಕ್ಷೌರ ಮಾಡಿಸಿಕೊಂಡ ಹಾಗೆ.

## ಶ

೧೫೩೨. ಶಕ್ತಿಗಿಂತ ಯುಕ್ತಿ ಮೇಲು । ಕತ್ತೆಗಿಂತ ಕುದುರೆ ಮೇಲು.

೧೫೩೩. ಶನಿಗೇಡಿ ಸಂತೆಗೆ ಹೋದರೆ ಮದ್ದಾನಕ್ಕೆ ಮಳೆ ಬಂತಂತೆ.

೧೫೩೪. ಶಂಖದ ಹಿಂದೆ ಜಾಗಟೆ । ತೀರ್ಥದ ಹಿಂದೆ ಪ್ರಸಾದ.

೧೫೩೫. ಶಾನುಭೋಗ ಊರಮುಂದೆ ಬೈದರೆ । ಕುಳುವಾಡಿ ಒಲೆಮುಂದೆ ಬೈದ.

೧೫೩೬. ಶಿವ ಕೊಟ್ರು ಪೂಜಾರಿ ಕೊಡ.

೧೫೩೭. ಶಿವ ಕೊಡ್ದೆ ಇದ್ದುದ್ದ ಸಿಂಗ್ರಪ್ಪ ಕೊಟ್ಯಾನೆ?

೧೫೩೮. ಶಿವಪೂಜೆಯಲ್ಲಿ ಕರಡಿಗೆ ಬಿಟ್ಟಂಗೆ.

೧೫೩೯. ಶಿವರಾತ್ರಿ ಮನೇಗೆ ಏಕಾದಶಿ ಬಂದಂಗೆ.

೧೫೪೦. ಶಿವಾ ಅರೀದ ಸಾವಿಲ್ಲ । ಮನಾ ಅರೀದ ಪಾಪಿಲ್ಲ.

೧೫೪೧. ಶೀಲವಂತರ ಓಣೇಲಿ ಕೋಳಿ ಮಾಯ ಆದ್ವಂತೆ.

೧೫೪೨. ಶೂಲಕ್ಕೆ ತಿಕ ಆನಿಸಿಕೊಂಡು ಗವುಳಿ ಶಕುನ ಕೇಳಿದಂಗೆ.

೧೫೪೩. ಶೆಟ್ಟಿ ಸುಂಗಾರ ಆಗೋದ್ರೊಳಗೆ ಪಟ್ಟಣ ಹಾಳಾಯ್ತು.

## ಸ

೧೫೪೪. ಸರ್ಕಾರಕ್ಕೆ ಹೋದ ಹಣ । ಸ್ಮಶಾನಕ್ಕೆ ಹೋದ ಹೆಣ । ಹಿಂದಿರುಗಿ ಬರಲ್ಲ.

೧೫೪೫. ಸಡಗರದಲ್ಲಿ ಮದುವೆ ಮಾಡಿ, ಈ ಹೆಣ್ಣು ಯಾರ್ದು ಅಂದಳಂತೆ ಅತ್ತೆ.

೧೫೪೬. ಸತ್ತ ಮಕ್ಳ ಸಕುನ ಕೇಳಿದಂಗೆ.

೧೫೪೭. ಸತ್ತ ಮೇಲಿನ ಸಗ್ಗಕ್ಕಿಂತ ಇದ್ದ ನರಲೋಕ ವಾಸಿ.

೧೫೪೮. ಸತ್ತವರಿಗೆ ಸಂಗವಿಲ್ಲ । ಕೆಟ್ಟವರಿಗೆ ನೆಂಟರಿಲ್ಲ.

೧೫೪೯. ಸತ್ಯ ಕೆಡಿಸೋದಿಲ್ಲ । ಅನಾಚಾರ ಬದುಕಿಸೋದಿಲ್ಲ.

೧೫೫೦. ಸತ್ಯಕ್ಕೆ ಸಾವಿಲ್ಲ । ಸುಳ್ಳಿಗೆ ಸುಖವಿಲ್ಲ.

೧೫೫೧. ಸತ್ತೋರ ಮಕ್ಕಳು ಇದ್ದೋರ ಕಾಲ್ದಸೀಲಿ.

೧೫೫೨. ಸದರ ಕೊಟ್ಟ ನಾಯಿ ಸಟ್ಟುಗ ನೆಕ್ಕಿತು.

೧೫೫೩. ಸದರ ಕೊಟ್ಟತ್ತೆ ಪೊದ್ರುಕ್ ಕೈಯಿಕ್ದ.



೧೫೫೪. ಸಮಯಕ್ಕಾದ ಹುಲ್ಲು ಕಡ್ಡಿ ಸಹಸ್ರ ಹೊನ್ನು.

೧೫೫೫. ಸಮಯಕ್ಕಾದವನೆ ನೆಂಟ । ಕೆಲಸಕ್ಕಾದವನೆ ಬಂಟ.

೧೫೫೬. ಸಮಯಕ್ಕೆ ಬಾರದ ಬುದ್ಧಿ । ಸಾವಿರ ಇದ್ದರು ಲದ್ದಿ.

೧೫೫೭. ಸಮುದ್ರದ ನೆಂಟಸ್ತನ ಉಪ್ಪಿಗೆ ಬಡತನ.

೧೫೫೮. ಸಲವಿಲ್ಲದ್ದು ಸಾವಿರವಿದ್ದು ಫಲವೇನು?

೧೫೫೯. ಸವತಿ ಸಣ್ಣವಳಲ್ಲ । ದಾಯಾದಿ ಚಿಕ್ಕವನಲ್ಲ.

೧೫೬೦. ಸಸಿಯಾಗಿ ಬಗ್ಗದ್ದು ಮರವಾಗಿ ಬಗ್ಗೀತೆ?

೧೫೬೧. ಸಹವಾಸದಿಂದ ಸಾಧು ಕೆಟ್ಟ.

೧೫೬೨. ಸ್ವತಂತ್ರ ಹೋಗಿ ಅತಂತ್ರ ಆಯ್ತು.

೧೫೬೩. ಸಂಕ ಮುರಿದ ಕಡೆ ಸ್ನಾನ.

೧೫೬೪. ಸಂಕಟ ಬಂದಾಗ ವೆಂಕಟರಮಣ.

೧೫೬೫. ಸಂಗದಂತೆ ಬುದ್ಧಿ । ಅನ್ನದಂತೆ ಲದ್ದಿ.

೧೫೬೬. ಸಂಗದಂತೆ ಸಹವಾಸ । ಎಳ್ಳಿನಂತೆ ಎಣ್ಣೆ.

೧೫೬೭. ಸಂತೆ ಕಟ್ಟೋಕು ಮೊದ್ಲೆ ಸೇರುದ್ರಂತೆ ಗಂಟುಕಳ್ಳರು.

೧೫೬೮. ಸಂತೆ ಬಂತು ಅಂದ್ರೆ ಬಡವರಿಗೆ ಚಿಂತೆ.

೧೫೬೯. ಸಂತೆಯಲ್ಲಿ ಅವ್ವನ ನೋಡಿದ ಮೇಲೆ, ಮನೇಲಿ ಮಗಳೇನು ನೋಡೋದು?

೧೫೭೦. ಸಂತೆಸೂಳೆ ನೆಚ್ಚಿ । ಮನೆಹೆಂಡ್ತಿ ಬಿಟ್ಟ.

೧೫೭೧. ಸಂತೇಲಿ ಮಂತ್ರ ಹೇಳಿದಂಗೆ.

೧೫೭೨. ಸಂದೀಲಿ ಸಮಾರಾಧನೆ ಮಾಡ್ದಂಗೆ.

೧೫೭೩. ಸಂಸಾರ ಅನ್ನೋದು ಸಾಗರ । ಹೊಟ್ಟೆ ಅನ್ನೋದು ಪಟ್ನ.

೧೫೭೪. ಸಂಸಾರ ಗುಟ್ಟು । ರೋಗ ರಟ್ಟು.

೧೫೭೫. ಸಾಯದ ಮನೆಯಿಲ್ಲ । ಬೇಯದ ಕಾಳಿಲ್ಲ.

೧೫೭೬. ಸಾಯ್ತಿನಿ ಸಾಯ್ತಿನಿ ಅಂತ ಸಾವಿರ ಕೋಳಿ ತಿಂದನಂತೆ.

೧೫೭೭. ಸಾಯೂತನಕ ಶನಿಕಾಟಾದರೆ ಬಾಳೂದು ಯಾವಾಗ?

೧೫೭೮. ಸಾಯೋ ಮುಂದೆ ಸಕ್ರಿತುಪ್ಪ ತಿನಿಸಿದರಂತೆ.

೧೫೭೯. ಸಾಲ ಅಂದ್ರೆ ಶೂಲ । ಕಾಲ ಅಂದ್ರೆ ಯಮ.

೧೫೮೦. ಸಾಲಕಂಜಿದವನು ಗಂಡಸು । ಹಾದರಕಂಜಿದವಳು ಹೆಂಗಸು.

೧೫೮೧. ಸಾಲಗಾರನ ಮನೆಗೆ ಸವುದೆ ಹೊತ್ತರೆ। ಮೇಲಣ ಬಡ್ಡಿಗೆ ಸಮವಾಯಿತು.

೧೫೮೨. ಸಾಲಗಾರ ಸುಮ್ಮನಿದ್ರೂ ಸಾಕ್ಷಿದಾರ ಸುಮ್ಮನಿರ.

೧೫೮೩. ಸಾಲಗೂಡಿ ಸಾಲ । ಕಾಯಿಸ್ನೇ ಕಾಯಾಲ ಅಂದ್ನಂತೆ.

೧೫೮೪. ಸಾಲಾವಳಿ ಇಲ್ಲದ್ದು ಸಂಬಂಧ ಆಗೊಲ್ಲ.

೧೫೮೫. ಸಾಲವಿಲ್ಲದೋನೆ ಸೆಟ್ಟಿ । ರೋಗವಿಲ್ಲದೋನೆ ಗಟ್ಟಿ.

೧೫೮೬. ಸಾವಿರ ಕುದುರೆ ಸರದಾರ। ಮನೆ ಹೆಣ್ತಿಗೆ ಪಿಂಜಾರ.

೧೫೮೭. ಸಾವಿರ ಕೊಟ್ಟರೂ ಸವತಿ ಮನೆ ಬೇಡ.

೧೫೮೮. ಸಾವಿರಬಾರಿ ಗೋವಿಂದ ಅಂದ್ರು ಒಬ್ಬ ದಾಸಯ್ಯನಿಗೆ ಭಿಕ್ಷೆ ನೀಡಲಿಲ್ಲ.

೧೫೮೯. ಸಾವಿರ ವರ್ಷ ಸಾಮುಮಾಡಿ ಸಾಯೋ ಮುದುಕಿ ಸೊಂಟ ಮುರಿದ.

೧೫೯೦. ಸಿರಿಗೇಡಿಗೆ ಸೀರೆ ಉಡಿಸಿದರ, ಕೆರಿದಂಡಿ ಮ್ಯಾಲೆ ನಿಂತು ಕ್ಯಾಕಿ ಹಾಕಿದಳಂತ.

೧೫೯೧. ಸೀಗೆ ಎಡೇಲಿ ಬಾಳೆ ಸಿಗಾಕ್ಕೊಂಡಂಗೆ.

೧೫೯೨. ಸಿಂಹದ ಮುಂದೆ ಸಿಂಗಳೀಕವೆ?

೧೫೯೩. ಸುತ್ತೂರು ಮಠ ಸುಖ ಅಂತ ಹೋದ್ರೆ, ಕುಕ್ಕೇಲಿ ರಾಗಿ ತುಂಬಿಟ್ರಂತೆ.

೧೫೯೪. ಸುಮ್ಮನಿದ್ದವನ ಸೆಂಟ ಶಿವಾನೂ ಹರಿಯೂದಿಲ್ಲ.

೧೫೯೫. ಸುಳ್ಳು ದೇವರಿಗೆ ಕಳ್ಳ ಪೂಜಾರಿ.

೧೫೯೬. ಸುಂಕದೋನತ್ರ ಸುಖದುಃಖ ಹೇಳಿಕೊಂಡಂಗೆ.

೧೫೯೭. ಸುಂಡನಿಗೆ ಸಿರಿ ಬಂದು ಗಂಜಿ ಗುಂಡಿಗೆ ಬೀಳ್ತಂತೆ.

೧೫೯೮. ಸೂಜಿಯಷ್ಟು ಬಾಯಿ ಗುಡಾಣದಷ್ಟು ಹೊಟ್ಟೆ.

೧೫೯೯. ಸೂಳೆ ಮುಪ್ಪಾಗಿ ಶೀಲ ಹಿಡಕೊಂಡಂತೆ.



೧೬೦೦. ಸೂಳೆ ಸಿಂಗಾರ ಮಾಡಿಕೊಳ್ಳೋವತ್ಗೆ ತೇರು ಬಂದು ತಾನೆ ನಿತ್ಕೊತ್ತು.

೧೬೦೧. ಸೂಳೆ ಸುಲಕೊಂಡ್ ತಿಂದ್ಲು । ಹೆಂಡ್ತಿ ತಿರಕೊಂಡ್ ತಿಂದ್ಲು.

೧೬೦೨. ಸೂಳೆ ಸಿಂಗರಿಸೋವತ್‌ಗೆ ಕುಂಟ ಎಂಟು ಗಾವುದ ಹೋದ.

೧೬೦೩. ಸೆಟ್ಟಿ ಸಾಲ ಸತ್ತ ಮೇಲೆ ತಿಳೀತು.

೧೬೦೪. ಸೆಣಬು ತಿಂದು ಹೇತಂಗೆ ಅವನ ಮಾತು.

೧೬೦೫. ಸೊಕ್ಕಿದ್ದು ಉಕ್ತದೆ । ಉಕ್ಕಿದ್ದು ಒಲೆಯಲ್ಲಿ ಹಾರ್ತದೆ.

೧೬೦೬. ಸೋತು ಸಂಗಾತಿ ಗುಣ ನೋಡು। ಹೇತು ಹೆಡ್ತಿಗುಣ ನೋಡು.

## ಹ

೧೬೦೭. ಹಗಣಗಿತ್ತಿ ಹಬ್ಬ ಮಾಡಿದರೆ, ಮನೆ ಗಂಡ ಉಪವಾಸವಿದ್ದನಂತೆ.

೧೬೦೮. ಹಗಲು ಅರಸನ ಕಾಟ। ಇರುಳು ದೆವ್ವದ ಕಾಟ.

೧೬೦೯. ಹಗಲೆಲ್ಲಾ ಹಾರಾಟ। ಇರುಳೆಲ್ಲ ತೂರಾಟ। ಗಂಡ ಬಂದಾಗ ಗೊರಕಾಟ.

೧೬೧೦. ಹಗಲು ಸತ್ತರೆ ಅಕ್ಕಿಗೆ ಗತಿಯಿಲ್ಲ। ಇಳ್ಳು ಸತ್ತರೆ ಎಣ್ಣೆಗೆ ಗತಿಯಿಲ್ಲ.

೧೬೧೧. ಹಗ್ಗ ಕೊಟ್ಟು ಕೈಕಟ್ಟಿಸಿಕೊಂಡಂಗೆ.

೧೬೧೨. ಹಗ್ಗ ತಿನ್ನೋ ಹನುಮಂತರಾಯನ್ಗೆ, ಜ್ಯಾಳದ ಸಾವ್ಗೆ ಎಷ್ಟು ಕೊಟ್ಟಿ?

೧೬೧೩. ಹಗ್ಗ ಹರಿಯಲಿಲ್ಲ । ಕೋಲು ಮುರಿಯಲಿಲ್ಲ.

೧೬೧೪. ಹಗೆಯೋನ ಕೊಲ್ಲಾಕೆ, ಹಗಲೇನು ಇರುಳೇನು?

೧೬೧೫. ಹಗೆಯೋನ ಚಂದ್ರಬಲ ಕೇಳಿದ್ರೆ, ಮಧ್ಯಾನಕ್ಕೆ ಮರಣ ಅಂದ.

೧೬೧೬. ಹಣ್ಣು ತಿಂದೋನು ನುಣುಚ್ಕೊಂಡ । ಸಿಪ್ಪೆ ತಿಂದೋನು ಸಿಗಾಕ್ಕೊಂಡ.

೧೬೧೭. ಹಣವಿದ್ದೋರು ಹಾದ್ರ ಮಾಡಿದ್ಕೆ, ಹಾದೀಲಿ ಹೋಗೋರು ದಂಡ ತೆತ್ತರು.

೧೬೧೮. ಹಣವಿದ್ದರೆ ಹುಳುಕು ಮುಚ್ತದೆ। ತುಪ್ಪಿದ್ದರೆ ರುಚಿ ಹೆಚ್ತದೆ.

೧೬೧೯. ಹಣವೆಂದರೆ ಹೆಣವೂ ಬಾಯ್ಬಿಡ್ತದೆ.

೧೬೨೦. ಹಣ್ಣು ತಿನ್ನಾಕೆ ಹರಿದಾಟ। ಗುಡಿ ತಾರ್ಸಕೆ ಔತಾಟ.

೧೬೨೧. ಹಣ್ಣು ಹಂಚಿ ತಿನ್ನು । ಹೂವ ಕೊಟ್ಟು ಮುಡಿ.

೧೬೨೨. ಹಣ್ಣೆಲೆ ಉದುರುವಾಗ ಚಿಗುರೆಲೆ ನಗುತಿತ್ತು.

೧೬೨೩. ಹತ್ತರ ಕೂಡ ಹನ್ನೊಂದು । ಪರಸೆ ಕೂಡ ಗೋವಿಂದ.

೧೬೨೪. ಹತ್ತಂದ್ರೆ ನನ್ನ ಅಂಡಿಗಾಯ್ತು । ಆರಂದ್ರೆ ನನ್ನ ಕುಂಡಿಗಾಯ್ತು.

೧೬೨೫. ಹತ್ತಿ ತೂಗುವಾಗ ನೊಣಕ್ಕೇನು ಕೆಲಸ?

೧೬೨೬. ಹತ್ತು ಕಟ್ಟುವಲ್ಲಿ ಒಂದು ಮುತ್ತು ಕಟ್ಟು.

೧೬೨೭. ಹತ್ತು ತಿಂಗಳ ಪುಟ್ಟಿ । ಹಟ್ಟೆಲ್ಲ ಹೆಜ್ಜೆ.

೧೬೨೮. ಹತ್ತು ಮಕ್ಕಳ ತಾಯಾದ್ರೂ, ಸತ್ತ ಮಗನ್ನ ಮರೆಯೊಲ್ಲ.

೧೬೨೯. ಹತ್ತು ಜನಕ್ಕೆ ಬಿದ್ದ ನ್ಯಾಯ ಬೇಗ ಸಾಯಾಕಿಲ್ಲ.

೧೬೩೦. ಹತ್ತು ಹೆತ್ತೋಳಿಗೆ, ಹನ್ನೊಂದ ಹೆರೋದ ಹೇಳಿಕೊಡಬೇಕೆ?

೧೬೩೧. ಹರ್ತೆ ಮುಳುಗಿತೊ? ಹಡಗು ಮುಳುಗಿತೊ?

೧೬೩೨. ಹದ ಬಂದಾಗ ಅರಗಬೇಕು । ಬೆದೆ ಬಂದಾಗ ಬಿತ್ತಬೇಕು.

೧೬೩೩. ಹತ್ತೆಂಟ ಹಾಡಿದರೇನು । ಇಪ್ಪತ್ತೆಂಟ ಕಲಿತರೇನು,
ಮುಡೀಬಾರದ ಹೂವ ಮುಡಿದರೇನು?

೧೬೩೪. ಹದವಿಲ್ಲದ ಊಟ । ಮುದಿಗಂಡನ ಕಾಟ । ಕ್ಯಾಣೆಗು ಮನೆಗು ತಿರುಗಾಟ.

೧೬೩೫. ಹನಿಗೂಡುದ್ರೆ ಹಳ್ಳ । ತೆನೆಗೂಡುದ್ರೆ ಬಳ್ಳ.

೧೬೩೬. ಹಬೆಗೆ ತಾಳದೆ ಉರಿಯೊ ಕೊಂಡದೊಳಗೆ ಬಿದ್ದಂಗೆ.

೧೬೩೭. ಹರಿದಿದ್ದೇ ಹಳ್ಳ । ನಿಂತಿದ್ದೇ ತೀರ್ಥ.

೧೬೩೮. ಹರೆ ಬಡುದ್ರೂ ಮದುವೆ । ಮೊರ ಬಡುದ್ರೂ ಮದುವೆ.

೧೬೩೯. ಹರೇಕ ಬಂದಾಗ ಹಂದೀನೂ ಚಂದ.

೧೬೪೦. ಹರೇದಾಗ ಹಾದರ ಮಾಡಿ, ಮುಪ್ಪಿನಾಗೆ ಆಚಾರ ಹೇಳೋದು.

೧೬೪೧. ಹಲವರ ಸಂಗ ಅಭಿಮಾನ ಭಂಗ.

೧೬೪೨. ಹಲವು ದೇವರ ಮಾಡಿ ಹಾರುವಯ್ಯ ಕೆಟ್ಟ.

೧೬೪೩. ಹಲಸಿನ ಹಣ್ಣು ಬೇಕು ಅಂಟು ಬ್ಯಾಡ ಅಂದಂಗೆ.

೧೬೪೪. ಹಲ್ಲಿದ್ದವರಿಗೆ ಕಡಲೆ ಇಲ್ಲ । ಕಡಲೆ ಇದ್ದವರಿಗೆ ಹಲ್ಲಿಲ್ಲ.

೧೬೪೫. ಹಲ್ಲುಬಿದ್ದ ಮುದುಕಿ, ಎಲ್ಲಿ ಬಿದ್ದರೇನು?



೧೬೪೬. ಹಸಿದ ಹೊಟ್ಟೆ ತೋರಿಸಿದರೆ । ಮಸೆದ ಕತ್ತಿ ತೋರಿಸಿದರು.

೧೬೪೭. ಹಸಿದು ಹಲಸಿನ ಹಣ್ಣು ತಿನ್ನು । ಉಂಡು ಮಾವಿನಹಣ್ಣು ತಿನ್ನು.

೧೬೪೮. ಹಸೆಗಿತ್ತಿ ಕಾಲು ಹಸೆಮ್ಯಾಲ್ ನಿಲ್ಲದು,
ಸೂಳೆಗಿತ್ತಿ ಕಾಲು ಒಲೆಮುಂದೆ ನಿಲ್ಲದು.

೧೬೪೯. ಹಳೆ ಮನೆಗೆ ಹೆಗ್ಗಣ ಸೇರಿಕೊಂಡಂಗೆ.

೧೬೫೦. ಹಳೆ ಬಟ್ಟೆಗೆ ನೂಲುಗೇಡು । ಕೊಳೆ ಬಟ್ಟೆಗೆ ಸೋಪುಗೇಡು.

೧೬೫೧. ಹಂದಿ ತನ್ನ ಚಂದಕ್ಕೆ ವೃಂದಾವನ ಆಡ್ಕೊತ್ತು.

೧೬೫೨. ಹಂಡೆ ಬಾಯಿ ಕಟ್ಟಬಹುದು । ಮುಂಡೆ ಬಾಯಿ ಕಟ್ಟೋಕಾಗಲ್ಲ.

೧೬೫೩. ಹಾಗಲಕಾಯ್‌ಗೆ ಬೇವಿನಕಾಯ್ ಸಾಕ್ಷಿ.

೧೬೫೪. ಹಾಗೇ ಕುಣಿಯೋ ಬಡ್ಡಿ, ಹರೆ ಬಡದರೆ ಬಿಟ್ಟಾಳೆ?

೧೬೫೫. ಹಾಡಿದ್ದೇಹಾಡಿದ ಕಿಸುಬಾಯಿ ದಾಸ.

೧೬೫೬. ಹಾದರಗಿತ್ತಿ ನಡುಮನೆ ಚಂದ । ಗರತಿ ಕೋಣೆ ಚಂದ.

೧೬೫೭. ಹಾದರಗಿತ್ತಿ ಗರತಿಯಲ್ಲ । ತೂಪುರಸೌದೆ ಒಲೆಗಲ್ಲ.

೧೬೫೮. ಹಾರೂರ್‌ಗೇರೀಲಿ ಹಬ್ಬ ಆದ್ರೆ ಮೂಳ್‌ನಾಯಿಗೇನು ಓಡಾಟ?

೧೬೫೯. ಹಾರುವರ ಮಾತು ಹಲವಂಗ । ಕೋಮಟಿಗರ ಮಾತು ಕಟಿಪಟಿ.

೧೬೬೦. ಹಾರುವ್ನನ್ಗೇಕೆ ಆರಂಭ ಮಾಡಾಟ । ಬಣಜಿಗನಿಗೇಕೆ ಬಲೆ ಬೀಸಾಟ?

೧೬೬೧. ಹಾಲಪ್ಪ ಅಂತ ಹೆಸರಿದ್ರೂ ಮಜ್ಜಿಗ್ಗೆ ಗತಿಲ್ಲ.

೧೬೬೨. ಹಾಲಿದ್ದಾಗ ಹಬ್ಬ ಮಾಡು । ಹಲ್ಲಿದ್ದಾಗ ಕಡ್ಲೆ ತಿನ್ನು.

೧೬೬೩. ಹಾಲು ಕುಡಿದ ಮಕ್ಕಳೇ ಬದುಕಲಿಲ್ಲ । ವಿಷ ಕುಡ್ದ ಮಕ್ಕಳು ಬದ್ಕ್ಯಾರೆ?

೧೬೬೪. ಹಾಲು ಕೊಡೋ ಮನೆ ಹಸ ಸಾಯ್ಲಿ ಅಂದಂಗೆ.

೧೬೬೫. ಹಾಲು ಮಾರಿದ್ದು ಹಾಲಿಗೆ । ನೀರು ಮಾರಿದ್ದು ನೀರಿಗೆ.

೧೬೬೬. ಹಾವು ಕಂಡು ಹಡುಗ್‌ನಂತೇದು ನಡುಗ್ತು.

೧೬೬೭. ಹಾವುನೊಂದಿಗೆ ಹಾದ್ರಮಾಡ್ತಿದ್ದೋಳು । ಸೇದುಹಗ್ಗ ಕಂಡು ಹೀ ಅಂದ್ಲಂತೆ.

೧೬೬೮. ಹಾವೂ ಸಾಯಲಿಲ್ಲ । ಕೋಲೂ ಮುರಿಯಲಿಲ್ಲ.

೧೬೬೯. ಹಾಸಿಗೆ ಇದ್ದಷ್ಟು ಕಾಲು ಚಾಚು । ಕಾವಲಿ ಇದ್ದಷ್ಟು ದೋಸೆ ಬಿಡು.

೧೬೭೦. ಹಾಳೂರಿಗೆ ಉಳಿದೋನೇ ಗೌಡ । ಬೆಂಗಳೂರಿಗೆ ಬಂದೋನೇ ಬಹದ್ದೂರ.

೧೬೭೧. ಹಿಟ್ಟೂ ಹಳಸಿತ್ತು । ನಾಯೂ ಹಸಿದಿತ್ತು.

೧೬೭೨. ಹಿಡುಕೊಂಡ್ ಬಂದ ನಾಯಿ ಮೊಲ ಹಿಡಿದೀತೇ?

೧೭೭೩. ಹಿತವಿಲ್ಲದ ಗಂಡ, ಹಿಂದಿದ್ರೇನು? ಮುಂದಿದ್ರೇನು?

೧೭೭೪. ಹಿತ್ತಲ ಗಿಡ ಮದ್ದಲ್ಲ । ಹತ್ತರ ಮಾತು ರುಚಿಯಲ್ಲ.

೧೭೭೫. ಹಿರಿಯಕ್ಕನ ಚಾಳಿ ಮನೆಮಕ್ಕಳಿಗೆಲ್ಲ.

೧೭೭೬. ಹಿಂದಲ ಊರ ಭಿಕ್ಷಾನೂ ಇಲ್ಲ । ಮುಂದಲ ಊರ ಕ್ವಾರಣ್ಯಾನೂ ಇಲ್ಲ.

೧೭೭೭. ಹುಚ್ಚಮುಂಡೆ ಮದುವೇಲಿ ಉಂಡವನೆ ಜಾಣ.

೧೭೭೮. ಹುಚ್ಚುಮುಕ್ಕನ ಮದುವೆಗೋಗಿ ತಿಕ್ಕೊಂಡ್ ಗುಬ್ಬೀನು ಇಲ್ಲ.

೧೭೭೯. ಹುಟ್ಟಿದಮನಿ ಹೋಳಿಹುಣ್ಣಿಮೆ । ಕೊಟ್ಟಮನಿ ಶಿವರಾತ್ರಿ.

೧೭೮೦. ಹುಟ್ಟಿದಾಗ ಬಂದದ್ದು ಹೂತಾಗ ಹೋದೀತೆ?

೧೭೮೧. ಹುಟ್ಟಿಸಿದ ದೇವರು ಹುಲ್ಲು ಮೇಯಿಸ್ತಾನ?

೧೭೮೨. ಹುಟ್ಟುಗುಣ ಸುಟ್ಟರೂ ಹೋಗಲ್ಲ.

೧೭೮೩. ಹುಣಸೇಮರ ಮುಪ್ಪಾದ್ರೂ ಹುಳಿ ಮುಪ್ಪಲ್ಲ.

೧೭೮೪. ಹುಡುಗ ಗೌಡನಲ್ಲ । ತುಡುಬೆ ತುಪ್ಪವಲ್ಲ.

೧೭೮೫. ಹುತ್ತ ಬಡಿದರೆ ಹಾವು ಸಾಯುವುದೇ?

೧೭೮೬. ಹುಬ್ಬೆ ಮಳೇಲಿ ಬಿತ್ತಿದರೆ, ಹುಲ್ಲೂ ಇಲ್ಲ ಕಾಳೂ ಇಲ್ಲ.

೧೭೮೭. ಹುಲಿ ಮುಪ್ಪಾದ್ರೂ ಹುಲ್ಲು ಮೇದೀತೆ?

೧೭೮೮. ಹುಲಿ ಹೊಟ್ಟೇಲಿ ನರಿ ಹುಟ್ಟಿದಂಗಾಯ್ತು.

೧೭೮೯. ಹುಳ್ಳಿಕಾಳು ತಿನ್ನೋ ಮುಕ್ಕ, ಒಬ್ಬಟ್ಟಿನ ಹೂರಣ ಕೇಳಿದಂಗೆ.

೧೭೯೦. ಹೂಸಿದೋಳ್ಯಾರು ಅಂದ್ರೆ ಮಾಸಲು ಸ್ವಾಲೆಯೋಳು ಅಂದ್ರು.

೧೭೯೧. ಹೆಡ್ಡಾಳಾದ್ರೂ ದೊಡ್ಡಾಳ್ ಮೇಲು.

೧೭೯೨. ಹೆಣ್ಣರಸಿ ಪಟ್ಟಕ್ಕೋಗಿ ಮೂಗಿ ತಂದ.

೧೭೯೩. ಹೆಣ್ಣು ಚಂದ ಕಣ್ಣು ಕುಂಡು ಅಂದಂಗೆ.

೧೭೯೪. ಹೆಣ್ಣುಮಕ್ಕಳು ಇದ್ದ ಮನೆ ಕನ್ನಡಿಯಂಗೆ.

೧೭೯೫. ಹೆಣ್ಣು ಹೆತ್ತು ತಿಳೀತು । ಮಣ್ಣು ಉತ್ತು ತಿಳೀತು.

೧೭೯೬. ಹೆರಿಗೆ ಮಾಡಿಸುವಾಗ ಕೂಸೇನು ಮಾಸೇನು?

೧೭೯೭. ಹೆತ್ತ ತಾಯಿ ತಿನ್ನೋಳು ಅತ್ತೆ ಬಿಟ್ಟಾಳೆ?

೧೭೯೮. ಹೆತ್ತವರಿಗೆ ಹೆಗ್ಗಣ ಮುದ್ದು.

೧೭೯೯. ಹೇಳುವುದು ವೇದ । ಹಾಕುವುದು ಗಾಳ.

೧೮೦೦. ಹೊಟ್ಟೆ ತುಂಬಿದ ಮೇಲೆ ಹುಗ್ಗಿ ಮುಳ್ಳುಮುಳ್ಳು.

೧೮೦೧. ಹೊಳೆ ನೀರಿಗೆ ಡೊಣೆನಾಯಕನ ಅಪ್ಪಣೆಯೇ?



# ಅರ್ಥಕೋಶ

ಅಡಪಡ — ಒಂದೇ ಸಮನೆ ಮಾತನಾಡುವವ

ಅಡವೇ — ಸಾಲುವುದೇ

ಅಡೂತನಕ — ಅಡಿಗೆ ಮಾಡುವತನಕ

ಅಣ್ಣೇಸೊಪ್ಪು — ರಾಗಿ ಹೊಲದಲ್ಲಿ ಬೆಳೆಯುವ ಸೊಪ್ಪು

ಅತ್ತ — ಹಸ್ತ (ಮಳೆ ನಕ್ಷತ್ರ)

ಅನುಕರು — ಜಿಪುಣರು

ಅನ್ನೇಕಾರರು — ಅನ್ಯಾಯಕಾರರು, ಪಾಪಿಷ್ಟರು

ಅರಬರ — ಬರ, ಕ್ಷಾಮ

ಅರುವುಗೇಡಿ — ಬುದ್ಧಿಯಿಲ್ಲದವ, ಹೆಡ್ಡ

ಅವಲು — ಹುರಿದ ಕಾಳು

ಅಸಗ್ಲಿ — ಕೊಳಕಿ

ಅಸಲೆ — ಆಶ್ಲೇಷ ಮಳೆ

ಅಸೆದಾನ — ಮದುವೆಯ ಯೋಗ, ಹಸೆಯ ಅದೃಷ್ಟ

ಅಂತರಾಟ — ಕಷ್ಟ

ಆತೆ — ಜಿರಲೆ

ಆದೀಕ — ಆದಾಯ, ಲಾಭ

ಆಯ್ಗೇಡಿ — ಹಿಂದೆ ಮುಂದೆ ಗೊತ್ತಿಲ್ಲದ, ದಡ್ಡಿ

ಆರಕ — ಒಂದು ಧಾನ್ಯ

ಆಸಾದಿ — ಹರಿಜನ ಪೂಜಾರಿ

ಇಸಪ್ಪು — ವಿಷಪ್ಪ

ಈಡು — ನೀರಿಗೆ ಅಡ್ಡಲಾಗಿ ಹಾಕಿದ ಸಣ್ಣ ಏರಿ

ಈಲಿ — Liver

ಉತ್ಪಾದಕರ ಕಾಟ — ಕೆಟ್ಟವರ ಕಾಟ

ಉಪ್ಪಾರ — ಮಾರಮ್ಮ (ಗ್ರಾಮದೇವತೆ) ನಿಗೆ ಮಾಡುವ ಸೇವೆ

ಉರುಗಾದ್ರೆ — ಡೊಂಕಾದರೆ

ಒಡ್ಡಾಚಾರ — ತೋರಿಕೆಯ ಆಚಾರ

ಕರ್ಕಿಪತ್ರೆ — ಗರಿಕೆ ಹುಲ್ಲು

ಕಕ್ಕೆಸೊಪ್ಪು — ಒಂದು ಬಗೆಯ ಸೊಪ್ಪು
ಕದರಿ — ಕದರು, ಮಿಶ್ರಮಾಡು
ಕಬರುಗೇಡಿ — ಎಚ್ಚರ ಇಲ್ಲದವ
ಕಬ್ಬರಸ — ಕಬ್ಬು ಅರೆಯುವವ
ಕ್ಯಾಡಗ — ಕೋಡಗ, ಕಪಿ
ಕಲಕೇತಿ — ಕೆಟ್ಟವಳು
ಕಿನಾಸಿ — ಜಿಪುಣ
ಕಿಸೀದ — ಆಗದ
ಕುಲ್ಲು — ದ್ವೇಷ
ಕೋಲ — ಕರಾವಳಿಯ ಭೂತಾಚರಣೆ
ಗಂಡಾಮಾಲೆ — ಗಂಟಲಲ್ಲಿ ಆಗುವ ರೋಗ
ಗಿಜಿರ್‌ಗಣ್ಣು — ಕಿಸರು ಕಣ್ಣು
ಗುಮ್ಮೋದು — ತಿವಿಯೋದು
ಗೆಯ್ನಿಲ್ಲ ಗೆತ್ನಿಲ್ಲ — ಕೆಲಸ ಮಾಡಲಿಲ್ಲ
ಗೇದುಣ್ಣು — ದುಡಿದು ಉಣ್ಣು
ಗೊಂದ್ಲು — ಗೊಂದಳ, ಸಪ್ಪಳ
ಚಿಗಳಿ — ಎಳ್ಳು, ಬೆಲ್ಲ, ಕೊಬರಿಯನ್ನು ಕುಟ್ಟಿ ಮಾಡಿದ ತಿಂಡಿ
ಚಿಗತುಕೊಂಡಳು — ಚಿಗರಿಕೊಂಡಳು, ಬೆಳೆದಳು
ಛಲವಾದಿ — ಹಟವಾದಿ, ಛಲಗಾರ
ಜಂತಿ — ಮನೆಗೆ ಆಧಾರವಾಗಿ ಅಡ್ಡ ಹಾಕಿದ ತೊಲೆಗಳು
ಠಿಕಾಣೆಲ್ಲ — ಸಾಮರ್ಥ್ಯವಿಲ್ಲ
ತಣಿಸಿಕೊಂಡು — ಬಿಸಿ ಆರಿಸಿಕೊಂಡು, ನಿಧಾನವಾಗಿ
ತಮ್ಮಡಯ್ಯ — ದೇವರ ಸೇವಕ
ತಂಟರು ತಲೆ — ಸಿಕ್ಕುಗಟ್ಟಿದ ಕೂದಲು
ತಿರ್ವಾಡಿ — ತಿರುವಾಡಿ
ತುಡಮುಡಕಿ — ತಡೆಯಲಾರದವಳು, ಆತುರಗಾತಿ
ತೊಳ್ಳೆ — ಶ್ವಾಸಕೋಶ
ತೌಡು — ಬತ್ತದ ಹೊಟ್ಟು
ದಗರಿ — ಪಕ್ಕೆ ಮೂಳೆ



ದಟ್ಟಿ — ನಡುವಿಗೆ ಸುತ್ತುವ ಬಟ್ಟೆ
ದರವೇಸಿ — ಅಲೆಮಾರಿ, ಸಂತ
ದಿಂಡುಗದ ಮೆಳೆ — ಒಂದು ಜಾತಿಯ ಸಣ್ಣದಾದ ಕಾಡುಮರ
ನಸುಗುನ್ನಿ — ಪಿತೂರಿಕಾರ
ನೀಲೀರು — ಒಂದು ಜಾತಿಯವರು
ಪಡಿ — ಹಿಂದಿನ ಕಾಲದ ಅಳತೆಯ ಸಾಧನ
ಪರ — ದೇವರ ಸೇವೆ
ಪ್ಯಾಲಿ — ದಡ್ಡ
ಬರ್ಕತ್ತು — ಏಳಿಗೆ
ಬಗಸ್ದ — ಬಯಸಿದ, ಇಚ್ಛೆಪಟ್ಟ
ಬಗ್ಡ — ಬಗ್ಗಡ, ಸಗಣಿಯನ್ನು ನೀರಿನಲ್ಲಿ ಕಲೆಸುವುದು
ಬಂಗದ ಕೂಳು — ಹಂಗಿನ ಅನ್ನ
ಬಾಡು — ಮಾಂಸ
ಬಾತವನು — ಊದಿಕೊಂಡವನು
ಬಾನ — ಧಾನ್ಯ ತುಂಬಿದ ಮಡಕೆಯ ಸಾಲು
ಬಾನಿ — ಬಾವಿಯಿಂದ ನೀರೆತ್ತುವ ಸಾಧನ
ಬಾಯಾಳ್ಕಾತಿ — ಬಾಯಿ ಮಾಡುವವಳು
ಬಿರೇಕೆ — ಜಂಬಕ್ಕೆ
ಬಿಂಗಿಯಂತೆ — ತರಾವರಿ, ಹೇಗೆ ಹೇಗೋ ಆಡು
ಬುಡಮುಟ್ಟ — ಬುಡದಿಂದ
ಮಣಕ — ಪ್ರಾಯದ ಹೆಣ್ಣುಗರು
ಮನೆವಾರ್ತೆ — ಮನೆ ವ್ಯವಹಾರ
ಮಲ್ಲಾಗರು — ಆದುರುವಾಯು
ಮಳ್ಳಿ — ಗೊತ್ತಿದ್ದೂ ಗೊತ್ತಿಲ್ಲದ ಹಾಗೆ ನಟಿಸುವವಳು
ಮಂಗ್ರಮಾಯ — ಇದ್ದಕ್ಕಿದ್ದಂತೆ ಇಲ್ಲವಾಗುವುದು
ಮಾಡದಾಗೆ — ಮಾಳಿಗೆಯಲ್ಲಿ
ಮಾರೆ — ಮೋರೆ, ಮುಖ
ಮಾವಾಚಾರ — ಮಾವನ ಮನೆಯ ಆಚಾರ
ಮಾಸು — ಆಗತಾನೆ ಹುಟ್ಟಿದ ಕೂಸಿನ ಮೇಲಿನ ಚೀಲ

| | | |
|---|---|---|
| ಮೀಸಲು ನೀರು | — | ತಳಿಗೆಗೆ ತರುವ ಪವಿತ್ರ ನೀರು |
| ಮೂಗುದಾಣ | — | ಮೂಗುದಾರ |
| ಮೂಳ | — | ಮುಟ್ಠಾಳ |
| ಮೆಡೆಗಾರಿಕೆ | — | ಮಜಾ |
| ಯಾಸ್‌ಗಾತಿ | — | ವೇಷಗಾತಿ |
| ಲೊಟಕು ಗಂಡ | — | ಯಾವಾಗಲೂ ಗೊಣಗುವ ಗಂಡ |
| ವಕ್ಕಳ | — | ಹತ್ತು ಸೇರಿನ ಒಂದು ಅಳತೆ |
| ಸಂಕ | — | ಸೇತುವೆ |
| ಸಂಜೀವ | — | ಸಂಜೀವಿನಿ |
| ಸರಪಂಚ | — | ಪಂಚಾಯಿತಿ ಮುಖ್ಯಸ್ಥ |
| ಸಸ್ಲು | — | ಒಂದು ಜಾತಿಯ ಮೀನು |
| ಸಾರುಸುದ್ರೆ | — | ಸಾರಿಸಿದರೆ, ಚೊಕ್ಕಟಗೊಳಿಸಿದರೆ |
| ಸಾಲಾವಳಿ | — | ಕೂಡಿಬರುವ ಸಂಬಂಧ |
| ಸ್ಯಾಣೆತನ | — | ಬುದ್ಧಿವಂತಿಕೆ |
| ಸಿಡಿಯಾಡು | — | ಗ್ರಾಮದೇವತೆಯ ಹಬ್ಬದಲ್ಲಿ ಒಂದು ಆಚರಣೆ |
| ಹಂತಿ | — | ಸಾಲು |
| ಹರಿರಾಗಿ | — | ಕೂದು ಹಾಕಿದ ತೆನೆರಾಗಿ |
| ಹರಿಸಾವೆ | — | ದೇವರಸೇವೆ |
| ಹಲವಂಗ | — | ನಾನಾತರಹ |
| ಹಳಸ್ಕೊತ್ತು | — | ಕೆಟ್ಟುಹೋಯಿತು |
| ಹುಳ್ಳುಳ್‌ಗೆ | — | ಅನುಮಾನ |
| ಹೂಡೋ ಗಿಡ್ನ | — | ಉಳುವ ಎತ್ತುಗಳು |

ಮಾನವನ ಆಲೋಚನಾ ತರಂಗಗಳಷ್ಟೇ ಹಳೆಯವಾಗಿರುವ ಗಾದೆಗಳು ಜನಸಾಮಾನ್ಯರ ಬದುಕಿನ ಹರ್ಷೋಲ್ಲಾಸ ಮತ್ತು ದುಃಖ-ದುಮ್ಮಾನದ ಹಲಬಗೆಯ ಕ್ಷಣಗಳನ್ನು ಅತ್ಯಂತ ಆತ್ಮೀಯವಾದ ಧಾಟಿಯಲ್ಲಿ ಸೆರೆಹಿಡಿದಿಟ್ಟಿರುವುದನ್ನು ವಿಶೇಷವಾಗಿ ಗಮನಿಸಬಹುದು. ಅನುಭವದ ಸಾಮಗ್ರಿ ಹಾಗೂ ಸಂವೇದನೆಯ ತೀವ್ರತೆ ಇರುವುದೇ ಹೌದಾದಲ್ಲಿ ಎಂಥ ವಿಶಿಷ್ಟ ರಚನೆಗಳು ಬಗೆಬಗೆಯಾಗಿ ರೂಪುಗೊಳ್ಳಬಲ್ಲವೆಂಬುದಕ್ಕೆ ಸಾಕಷ್ಟು ಉತ್ತಮ ಉದಾಹರಣೆಗಳು ನಮ್ಮ ಗಾದೆಗಳ ಲೋಕದಲ್ಲಿ ದೊರೆಯುತ್ತವೆ.

ಪುರಾಣ, ಚರಿತ್ರೆ, ಸ್ಥಳಗತೆ, ಅನುದಿನದ ಘಟನೆಗಳು, ಕಷ್ಟಕೋಟಲೆಗಳು ಮತ್ತು ಆನಂದದ ವಿಶಾಲ ಹಿನ್ನೆಲೆ ಹೊಂದಿರುವ ಗಾದೆಗಳು ನಾಡಿನ ಜನತೆಯ ಮನಸ್ಸನ್ನು ಅರ್ಥಮಾಡಿಕೊಳ್ಳಲು ವಿಶೇಷವಾಗಿ ನೆರವಾಗುತ್ತವೆ. ಬದುಕನ್ನು ತಿದ್ದುವಲ್ಲಿ, ರಹಸ್ಯಗಳ ಬೆನ್ನಾಡಿ ಹೋಗುವಲ್ಲಿ ಯಾವಾಗಲೂ ಮುಂದಾಗಿರುತ್ತವೆ. ಬಾಯಿಂದ ಬಾಯಿಗೆ ಬರುತ್ತಿರುವ ಇವುಗಳು ಮಾನವನ ಅನುಭವದ ಅತ್ಯುತ್ತಮ ದಾಖಲೆಗಳಾಗಿವೆ. ಸಾಮಾನ್ಯವಾಗಿ ಶಿಷ್ಟಜನ ಪರಿಗಣಿಸದೆ ಬಿಟ್ಟ ಅನೇಕ ಸೂಕ್ಷ್ಮಗಳು ಇಲ್ಲಿ ಪರಿಣಾಮಕಾರಿಯಾಗಿ ಕಂಡು ಬರುತ್ತವೆ.

ಒಂದು ದೇಶದ ನಿಜವಾದ ಬಣ್ಣ, ಬದುಕು ಅಲ್ಲಿನ ಗಾದೆಗಳ ಮೂಲಕ ಬಯಲಾಗುತ್ತದೆ. ಜನತೆಯ ಕಳೆದ ದಿನಗಳ, ರೋಷ, ಕೆಚ್ಚು, ಮೌಢ್ಯ, ಮಾನಸಿಕ ವಿಕಾರ, ನಗೆ, ನೋವು, ನ್ಯಾಯ, ಅನ್ಯಾಯ-ಮೊದಲಾದ ಎಲ್ಲಾ ಸಂಗತಿಗಳ ಮಡು ಈ ಗಾದೆಗಳು. ಇವನ್ನೆಲ್ಲಾ ವಿಂಗಡಿಸಿ ನಿತ್ಯದ ಬದುಕಿಗೆ ಹೇಗೆ ಬಳಸಿಕೊಳ್ಳಬೇಕು ಎನ್ನುವುದು ಮುಖ್ಯ ಸಂಗತಿಯಾಗಬೇಕು. ಹೀಗಾಗಿ ಸಮಾಜ, ಸಾಹಿತ್ಯ, ಚರಿತ್ರೆ, ಭಾಷೆ, ಮನಸ್ಸು, ಮಾನವ ಬದುಕಿನ ವೈಶಿಷ್ಟ್ಯಗಳು ಮುಂತಾದ ಬಗೆಬಗೆಯ ವಿಷಯಗಳ ಬಗ್ಗೆ ಅಧ್ಯಯನ ನಡೆಸುವವರಿಗೆ ಗಾದೆಗಳು ಸವಾಲಾಗಿವೆ ಮತ್ತು ಹೆಚ್ಚಿನ ಗುಟ್ಟುಗಳನ್ನು ತಿಳಿಸುತ್ತವೆ.

ಇದೀಗ **ಗಾದೆಗಳು** ಸಂಕಲನ ಮರುಮುದ್ರಣಗೊಂಡು ಈ ಸಲದ ಗೌರಿ ಹಬ್ಬದ ಉಡುಗೊರೆಯಾಗಿ ಓದುಗರ ಕೈಸೇರುತ್ತಿರುವ ಸಂದರ್ಭದಲ್ಲಿ ಪ್ರೀತಿಯ ಶುಭಾಶಯಗಳನ್ನು ಸಲ್ಲಿಸುತ್ತೇನೆ.

**ಪ್ರೊ. ಕಾಳೇಗೌಡ ನಾಗವಾರ**

ಅಧ್ಯಕ್ಷರು

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

ಕನ್ನಡ ಭವನ, ಬೆಂಗಳೂರು - ೫೬೦ ೦೦೨